ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-04 • ಸಂಚಿಕೆ-12 • ಸೆಪ್ಟೆಂಬರ್ 2021

ಸೆಪ್ಟೆಂಬರ್
2021



Download From : www.kpscvaani.com



ಗೌರವಾನ್ವಿತ ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು ಹಾಗೂ ಘನತೆವೆತ್ತ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು
ಆಗಸ್ಟ್ 20 ರಂದು ಹಿಂದೂಸ್ಥಾನ್ ಏರೋನಟಿಕ್ಸ್ ಲಿಮಿಟೆಡ್ (ಹೆಚ್.ಎ.ಎಲ್)ಗೆ ಭೇಟಿ ನೀಡಿ,
ವಿವಿಧ ಘಟಕಗಳ ಕಾರ್ಯ ಚಟುವಟಿಕೆಗಳನ್ನು ವೀಕ್ಷಿಸಿದರು.



ಆಗಸ್ಟ್ 20 ರಂದು ಮಾಜಿ ಮುಖ್ಯಮಂತ್ರಿ ದಿವಂಗತ ಡಿ.ದೇವರಾಜ ಅರಸು ಅವರ 106 ನೇ ಜನ್ಮದಿನದ ಪ್ರಯುಕ್ತ
ಅವರ ಪ್ರತಿಮೆ ಬಳಿ ಅವರ ಭಾವಚಿತ್ರಕ್ಕೆ ಮುಖ್ಯಮಂತ್ರಿ ಬಸವರಾಜ ಎಸ್. ಬೊಮ್ಮಾಯಿ ಅವರು ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ
ಸಚಿವರಾದ ಕೋಟಾ ಶ್ರೀನಿವಾಸ ಪೂಜಾರಿ ಮತ್ತಿತ್ತರು ಉಪಸ್ಥಿತರಿದ್ದರು.

Download From : www.kpscvaani.com

ವಾರ್ಷಿಕ ಚಂದಾ ರೂ.25/-

# ವಾರ್ತಾ ಜನಪದ

ಸಂಪುಟ-04 • ಸಂಚಿಕೆ-12 • ಸೆಪ್ಟೆಂಬರ್ 2021



06 ಜನದನಿಯ ನಾಯಕರಾಗಿ ಹೊರಹೊಮ್ಮಿದ **ಬಸವರಾಜ ಬೊಮ್ಮಾಯಿ**
• ಮಂಜುನಾಥ್ ಚಾಂದ್



14 ಅಮೃತ ಘಳಿಗೆಗೆ 14 ಹೊಸ ಯೋಜನೆಗಳು
• ಚಂದ್ರಮುಖಿ

17 ದಂಡಿ ಸತ್ಯಾಗ್ರಹದಲ್ಲಿ ಕನ್ನಡದ ಏಕೈಕ ಕುವರ **ಮೈಲಾರ ಮಹಾದೇವ**
• ಸಂಕಮ್ಮ ಜಿ. ಎಸ್.



19 ಹಂಪಿ ಶಿಲ್ಪಕಲಾ ಸ್ಮಾರಕಗಳ ವೀಕ್ಷಣೆಗಾಗಿ **ಹಂಪಿ ಆನ್ ವೀಲ್ಸ್**
• ಡಾ. ವರಪ್ರಸಾದ್ ರಾವ್ ಪಿ. ವಿ.



34 ಎಸ್ ಎಸ್ ಎಲ್ ಸಿ ಪಿಯುಸಿ ನಂತರ ಮುಂದೇನು ?
• ಬಿ. ಎಸ್. ಪಲ್ಲವಿ

21 **ಯಾಲಕ್ಕಿ ಕಂಪಿನ ಹಾವೇರಿ ಜಿಲ್ಲೆಯ ವೈವಿಧ್ಯಮಯ ತಾಣಗಳಿಗೆ ಪ್ರವಾಸಿಯಾನ**
• ಡಾ. ರಂಗನಾಥ್ ಕುಳಗಟ್ಟೆ

32 ಶಿಕ್ಷಕರ ಮುತುವರ್ಜಿಯಿಂದ ಮಾದರಿ ಶಾಲೆಯಾದ **ಆನೆಗದ್ದೆ ಸರ್ಕಾರಿ ಶಾಲೆ**
• ರಮೇಶ್ ಹೆಗಡೆ ಗುಂಡೂಮನೆ

38 ನೂತನ ರಾಜ್ಯ ಸಚಿವ ಸಂಪುಟ ಸಚಿವರ ಕಿರು ಪರಿಚಯ



26 **ಗೂಳೂರು ಗಣೇಶ : ಏನಿದರ ವಿಶೇಷ ?**
• ಡಿ.ಪಿ. ಮುರಳೀಧರ್

44 ಲಸಿಕೆಯ ನಂತರ ಆಸ್ಪತ್ರೆಗೆ ದಾಖಲಾಗುವ ಸಾಧ್ಯತೆ ಕಡಿಮೆ
• ಪಿ.ವಿ.ವಿ.ಪಿ ರಾವ್

47 ಕನ್ನಡದ ಒಲುಮೆಯ ಹೂವು **ಜಯಂತಿ**
• ಎನ್ ಎಸ್ ಶ್ರೀಧರ್ ಮೂರ್ತಿ

30 ತುಂಗಭದ್ರಾ ಅಣೆಕಟ್ಟು ವೀಕ್ಷಿಸಿ ಮೂಕವಿಸ್ಮಿತರಾದ **ಉಪರಾಷ್ಟ್ರಪತಿಗಳು**
• ಕೆ. ರೋಹಿಣಿ

50 ಪದಬಂಧ-22

**ಪ್ರಧಾನ ಸಂಪಾದಕರು**
**ಡಾ|| ಪಿ. ಎಸ್. ಹರ್ಷ, ಐಪಿಎಸ್**
ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**ಸಂಪಾದಕೀಯ ಸಲಹೆ**
**ಡಿ.ಪಿ. ಮುರಳೀಧರ್**
ಜಂಟಿ ನಿರ್ದೇಶಕರು

**ಸಹನಾ ಎಂ.**
ಉಪ ನಿರ್ದೇಶಕರು

**ಉಪ ಸಂಪಾದಕರು**
**ಬಿ. ಜಿ. ಪೂರ್ಣಿಮ**

**ಪ್ರಕಾಶಕರು**
ಆಯುಕ್ತರು
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್
ಮಹಾವೀರ ರಸ್ತೆ, ಬೆಂಗಳೂರು - 560 001
Ph : 080-22028103 / 22028023
email : varthajanapada@yahoo.co.in
https://dipr.karnataka.gov.in

**ಮುದ್ರಕರು**
ಲಾವಣ್ಯ ಮುದ್ರಣ
# 19, ವಿದ್ಯಾಪೀಠ ವೃತ್ತ,
ಬನಶಂಕರಿ 1ನೇ ಹಂತ, ಬೆಂಗಳೂರು-50

ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

Download From : www.kpscvaani.com

# ನಿಮ್ಮ ಅನಿಸಿಕೆ

ಸರ್ಕಾರವು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳು ಆನ್‌ಲೈನ್ ತರಗತಿಯಲ್ಲಿ ಪಾಲ್ಗೊಳ್ಳಲು ಅನುಕೂಲವಾಗುವ ಉದ್ದೇಶದಿಂದ ವಿದ್ಯಾರ್ಥಿಗಳಿಗೆ ಉಚಿತವಾಗಿ ಟ್ಯಾಬ್‌ಗಳನ್ನು ಒದಗಿಸಿಕೊಟ್ಟಿರುವುದು ಅತ್ಯಂತ ಶ್ಲಾಘನೀಯ ಸಂಗತಿಯಾಗಿರುತ್ತದೆ.

ಗ್ರಾಮೀಣ ಭಾಗದ ವಿದ್ಯಾರ್ಥಿಗಳು ವಿದ್ಯಾಭ್ಯಾಸದಿಂದ ವಂಚಕರಾಗದಿರಲೆಂದು ಡಿಜಿಟಲ್ ವ್ಯವಸ್ಥೆ ಕಲ್ಪಿಸಿರುವುದು ದೇಶದಲ್ಲೇ ಮೊದಲನೆಯದಾಗಿದೆ ಎಂಬುದು ತುಂಬಾ ಸಂತೋಷದಾಯಕವಾಗಿದೆ.

**–ಮೀನಾಕುಮಾರ್, ಧರ್ಮಸ್ಥಳ**

* * *

ರಾಜ್ಯದ ಜಾನುವಾರುಗಳ ಶುಶ್ರೂಷೆಗಾಗಿ ಮಾರ್ಗದರ್ಶನ ನೀಡುವ ಉಚಿತ ಸಹಾಯವಾಣಿ ಕೇಂದ್ರವನ್ನು ತೆರೆಯುವ ಮೂಲಕ ರೈತರ ಸಂಕಷ್ಟಗಳಿಗೆ ನೆರವಾಗಿರುವುದು ತುಂಬಾನೇ ಸಹಕಾರಿಯಾಗಿದೆ.

ಈ ವ್ಯವಸ್ಥೆಯಿಂದ ಇಡೀ ರಾಜ್ಯದ ಜಾನುವಾರುಗಳಿಗೆ ಕುರಿ–ಮೇಕೆ ಕುಕ್ಕುಟ ಮುಂತಾದ ಸಕಲ ಜೀವಿಗಳಿಗೆ ಸಕಾಲದಲ್ಲಿ ದೊರೆಯುವಂತೆ ಉಚಿತ ಸಹಾಯವಾಣಿ ನೀಡಿರುವುದು ನಾಡಿನ ರೈತರಿಗೆ ಸಂತಸ ತಂದಿರುವ ಸಂಗತಿ. ಈ ವ್ಯವಸ್ಥೆ ದೇಶದಲ್ಲೇ ಮೊದಲಾಗಿರುವುದು ಸಂತಸದ ವಿಚಾರವಾಗಿದೆ.

**–ಸುರೇಶ್, ಕಲ್ಲಹಳ್ಳಿ**

ಎಲ್ಲಾ ಯೋಜನೆಗಳ ಪರಿಹಾರದ ಹಣಕ್ಕೆ ಮಧ್ಯವರ್ತಿಗಳ ಹಾವಳಿಯನ್ನು ತಪ್ಪಿಸಿ ನೇರವಾಗಿ ಸಂಬಂಧ ಪಟ್ಟ ಫಲಾನುಭವಿಗಳ ಖಾತೆಗೆ ವರ್ಗಾಯಿಸುವಂತಹ ವ್ಯವಸ್ಥೆಯನ್ನು ಸರ್ಕಾರ ಮಾಡಿರುವುದು ನಿಜಕ್ಕೂ ಉತ್ತಮ ಕೆಲಸವಾಗಿದೆ. ಅಲ್ಲದೆ ಫಲಾನುಭವಿಗಳು ಪರಿಹಾರದ ಹಣ ಪಡೆಯಲು ಕಚೇರಿಯಿಂದ ಕಚೇರಿಗೆ ಅಲೆಯುವುದು ತಪ್ಪಿದಂತ್ತಾಗಿದೆ.

**–ಯೋಗೇಶ್ವರಿ, ಯಲಬುರ್ಗಾ**

* * *

ಟಿ.ಗುರುರಾಜ್ ಅವರ ಭಾರತ ತಾಯಿಗೆ ಅಮೃತ ಚೇತನ ಲೇಖನ ತುಂಬಾ ಅಚ್ಚುಕಟ್ಟಾಗಿ ಮೂಡಿಬಂದಿದೆ. ಇಂದಿನ ಭಾರತೀಯರಲ್ಲಿ ಅನೇಕರಿಗೆ ಸ್ವತಂತ್ರ ಭಾರತದ ಅರಿವೇ ಇಲ್ಲದವರಿಗೆ 1942 ರಿಂದ 1947 ರವರೆಗಿನ ವಿಷಯಗಳನ್ನು ಸಂಕ್ಷಿಪ್ತವಾಗಿ ವಿವರಣೆ ನೀಡುವ ಮೂಲಕ ಹಲವಾರು ವಿಷಯಗಳನ್ನು ತಿಳಿಯಪಡಿಸಿರುವುದು ಶ್ಲಾಘನೀಯ.

ಸ್ವಾತಂತ್ರ ಸಂಗ್ರಾಮದ ಸುಮಾರು ಮುನ್ನೂರು ವರ್ಷಗಳ ಸುಧೀರ್ಘ ಇತಿಹಾಸವಿರುವುದನ್ನು ಸವಿಸ್ತಾರವಾಗಿ ತಿಳಿಸಿ ಕೊಟ್ಟಿರುವುದಕ್ಕೆ ಧನ್ಯವಾದಗಳು.

**–ಸೋಮೇಶ್ ಎಂ.ಜಿ, ಮೈಸೂರು**

* * *

ರಾಜ್ಯದ ರೈತರ ಹಿತದೃಷ್ಟಿಯಿಂದ ಕರ್ನಾಟಕದಲ್ಲಿ ಕಿಸಾನ್ ರೈಲು ಸೌಲಭ್ಯಕ್ಕೆ ಚಾಲನೆ ನೀಡಿರುವುದು ಅತ್ಯಂತ ಹರ್ಷದಾಯಕವಾಗಿದೆ. ಕೋವಿಡ್ ನೆರಳಿನಿಂದಾಗಿ ತಮ್ಮ ವಿವಿಧ ಬೆಳೆಗಳನ್ನು ಮಾರಾಟ ಮಾಡಲಾಗದೆ ಸಂಕಷ್ಟಕ್ಕೆ ಸಿಲುಕಿದ್ದ ರೈತ ಸಮುದಾಯಕ್ಕೆ ಇದು ಅತ್ಯಂತ ಉಪಯುಕ್ತ. ಕರ್ನಾಟಕ ಸರ್ಕಾರ ರೈತರ ವಿವಿಧ ಮಾರುಕಟ್ಟೆಗಳಿಗೆ ರವಾನಿಸುವ ಈ ಅನುಕೂಲವನ್ನು ಹೆಚ್ಚು ಹೆಚ್ಚು ಪರಿಣಾಮಕಾರಿಯಾಗಿ ಜಾರಿಗೆ ಬರುವಂತೆ ಮಾಡಿದರೆ ಅನುಕೂಲವಾಗುತ್ತದೆ.

**–ಹಿಮ ಕೆ.ಎಂ. ಕೆ.ಆರ್.ನಗರ**

* * *


ಭಾರತ ಸ್ವಾತಂತ್ರ್ಯೋತ್ಸವ ಅಮೃತ ಮಹೋತ್ಸವದ ಸಂಭ್ರಮ, ದೇಶದಲ್ಲೇ ಮೊಟ್ಟ ಮೊದಲನೆಯ ಜಾನುವಾರು ಸಹಾಯವಾಣಿ ಕೇಂದ್ರ ಹಾಗೂ ಸಂಕಷ್ಟದಲ್ಲಿ ಸಿಲುಕಿದ ಜನತೆಗೆ 16 ಸಾವಿರ ಕೋಟಿ ಪರಿಹಾರ ಹಣವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ ವರ್ಗಾಹಿಸಿರುವ ಕುರಿತ ರೂ. ಲೇಖನಗಳು ಅತ್ಯಂತ ಉಪಯುಕ್ತ ಮಾಹಿತಿಯನ್ನು ನೀಡುತ್ತವೆ. ಹಾಗೆಯೇ ಆಗಸ್ಟ್ ಸಂಚಿಕೆಯಲ್ಲಿ ಕಿಸಾನ್ ರೈಲು, ರಾಜ್ಯ ಪ್ರವಾಸೋದ್ಯಮಕ್ಕೆ ಹಿರಿಮೆ ಹೆಚ್ಚಿಸಿದ ವಿಸ್ಟಾಡೋಮ್ ರೈಲು ಕುರಿತ ಲೇಖನಗಳು ಕೂಡ ಉಪಯುಕ್ತವಾಗಿದೆ. ಇತ್ತೀಚಿನ ದಿನಗಳಲ್ಲಿ ಜನಪದ ಅತ್ಯಂತ ಮಾಹಿತಿ ಪೂರ್ಣವಾಗಿ ಮೂಡಿಬರುತ್ತಿದೆ. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆಯುವ ರಾಜ್ಯದ ವಿದ್ಯಾರ್ಥಿಗಳಿಗೆ ಹೆಚ್ಚಿನ ಸಹಕಾರಿಯಾಗಲಿದೆ. ಹಾಗಾಗಿ ವಾರ್ತಾ ಜನಪದ ಸಂಪಾದಕೀಯ ಬಳಗಕ್ಕೆ ನನ್ನ ಅಭಿನಂದನೆಗಳು.

**–ಗಿರಿಧರ್ ಶಾಸ್ತ್ರಿ, ಮಂಗಳೂರು**

* * *

ಟೆಕ್ನಾಲಜಿ ಬೆಳೆಯುತ್ತಿರುವಂತೆ ಬೆಂಗಳೂರು ನಗರ ಸಂಚಾರ ಪೊಲೀಸ್ ಅವರು ವಾಹನ ಸವಾರರಿಗೆ ಅನುಕೂಲವಾಗುವಂತಹ ಆ್ಯಪ್ ಗಳನ್ನು ಅಭಿವೃದ್ಧಿ ಪಡಿಸಿರುವ ಕುರಿತು ಆಗಸ್ಟ್ ಸಂಚಿಕೆಯಲ್ಲಿ ಪ್ರಕಟವಾಗಿರುವ ಲೇಖನ ಹೆಚ್ಚು ಉಪಯುಕ್ತ ಮಾಹಿತಿಯನ್ನು ಒದಗಿಸಿದೆ.

**–ಶಂಕಪ್ಪ, ಬಾಗಲಕೋಟೆ**




ವಾರ್ತಾ ಜನಪದ ಆಗಸ್ಟ್ ಸಂಚಿಕೆಯಲ್ಲಿ ನಾಡಿನ ಹೆಮ್ಮೆಯ ಲಾಂಛನ ಗಂಡಬೇರುಂಡ ಕುರಿತ ಲೇಖನ ಅತ್ಯಂತ ಉತ್ತಮ ಮಾಹಿತಿಯನ್ನು ಒದಗಿಸಿದೆ. ರಾಜ್ಯದ ಸಂಕೇತವಾಗಿರುವ ಗಂಡಬೇರುಂಡ ಪಕ್ಷಿಯು ಒಳಗೊಂಡಿರುವ ಸಂಪೂರ್ಣ ಮಾಹಿತಿಯನ್ನು ಅದರ ಇತಿಹಾಸವನ್ನು ಈ ಲೇಖನದಲ್ಲಿ ವಿವರವಾಗಿ ತಿಳಿಸಿರುವುದಕ್ಕೆ ಧನ್ಯವಾದಗಳು. ಗಂಡಬೇರುಂಡದ ಪೌರಾಣಿಕ ಹಿನ್ನೆಲೆ, ಪ್ರಾಚೀನತೆಯ ವಿವಿರ ಮತ್ತು ಕರ್ನಾಟಕದ ಈ ಲಾಂಛನದ ಬಳಕೆಯ ಕುರಿತಂತೆ ಸವಿವರವಾದ ಮಾಹಿತಿಯನ್ನು ಲೇಖಕ ಪಿ.ಎಸ್. ಪರ್ವತಿ ಅವರು ನೀಡಿದ್ದಾರೆ.

**–ಆಶ್ರಯ್ ಬಿ.ಎಸ್, ಹೆಚ್.ಡಿ.ಕೋಟೆ**

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ತಾ ಜನಪದ ಮಾಸಿಕಕ್ಕೆ ಚಂದಾದಾರರಾಗಲು ಬಯಸುವವರು ರೂ 25/– ಅನ್ನು ಕಡ್ಡಾಯವಾಗಿ ಸೇವಾಸಿಂಧುವಿನ ಮೂಲಕ ಆನ್ ಲೈನ್ ಅರ್ಜಿಯನ್ನು ಸಲ್ಲಿಸಬೇಕು.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ–ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ–ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

Download From : www.kpscvaani.com



# ಸಂಪಾದಕೀಯ...

ಪ್ರಿಯ ಓದುಗ ಮಿತ್ರರೆ,

ನಮ್ಮ ರಾಜ್ಯದ 23 ನೇ ಮುಖ್ಯಮಂತ್ರಿಯಾಗಿ ಬಸವರಾಜ ಎಸ್ ಬೊಮ್ಮಾಯಿ ಅವರು ಜುಲೈ 28 ರಂದು ಪ್ರಮಾಣವಚನ ಸ್ವೀಕರಿಸಿದ್ದಾರೆ. ಅಧಿಕಾರ ಸ್ವೀಕರಿಸಿದ ಮೊದಲ ದಿನದಿಂದಲೇ ಕ್ರಿಯಾಶೀಲರಾಗಿರುವ ಅವರು ಅಧಿಕಾರಿಗಳ ಸಭೆ ನಡೆಸಿ, ಆಡಳಿತದಲ್ಲಿ ವಿಳಂಬಕ್ಕೆ ಅವಕಾಶ ನೀಡದೆ ಕಾಲಮಿತಿಯೊಳಗೆ ಯೋಜನೆಗಳನ್ನು ಅನುಷ್ಠಾನಗೊಳಿಸುವಂತೆ ನಿರ್ದೇಶನ ನೀಡಿದ್ದಾರೆ. ವರ್ಷಾಂತ್ಯದೊಳಗೆ ಎಲ್ಲಾ ಇಲಾಖೆಯಲ್ಲಿ ಶೇ 5 ರಷ್ಟು ಅನಗತ್ಯ ವೆಚ್ಚವನ್ನು ಕಡಿತಗೊಳಿಸುವಂತೆ ಕೂಡ ಸೂಚನೆ ನೀಡಿದ್ದಾರೆ.

ಜನಪ್ರಿಯವಾಗುವುದಕ್ಕಿಂತ ಜನೋಪಯೋಗಿ ಆಗುವುದು ಬಹಳ ಮುಖ್ಯ ಎಂದು ಅಭಿಪ್ರಾಯಪಟ್ಟಿರುವ ಅವರು, ರಾಜ್ಯದಲ್ಲಿ ನವಕರ್ನಾಟಕ ನಿರ್ಮಾಣದ ಘೋಷಣೆ ಮಾಡಿದ್ದಾರೆ. ಅಭಿವೃದ್ಧಿ ಕೇವಲ ಅಂಕಿ-ಅಂಶಗಳಾಗಿರಬಾರದು. ನಾಡಿನ ಪ್ರತಿಯೊಂದು ಕುಟುಂಬ ಮತ್ತು ಪ್ರತಿಯೊಬ್ಬ ವ್ಯಕ್ತಿಯ ಬದುಕು ಹಸನಾಗಬೇಕು. ಬದುಕಿನಲ್ಲಿ ಸುಖ, ಶಾಂತಿ, ನೆಮ್ಮದಿಯೊಂದಿಗೆ ಆರೋಗ್ಯ, ಶಿಕ್ಷಣ, ಉದ್ಯೋಗವನ್ನು ಒದಗಿಸಬೇಕೆಂಬ ಆಶಯದೊಂದಿಗೆ ತಮ್ಮ ನೂತನ ಸಂಪುಟದ 29 ಸಚಿವರೊಂದಿಗೆ ಉತ್ತಮ ಆಡಳಿತ ನೀಡುವ ನಿಟ್ಟಿನಲ್ಲಿ ಮುನ್ನಡೆದಿದ್ದಾರೆ.

ದೇಶದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಅನುಷ್ಠಾನಗೊಳಿಸುತ್ತಿರುವ ಮೊದಲ ರಾಜ್ಯ ಕರ್ನಾಟಕ. ಹಾಗಾಗಿ ಮುಖ್ಯಮಂತ್ರಿ ಬಸವರಾಜ ಎಸ್. ಬೊಮ್ಮಾಯಿ ಅವರು ಶಿಕ್ಷಣ ಸಂಸ್ಥೆಗಳನ್ನು ವಿಶ್ವಾಸಕ್ಕೆ ಪಡೆದು ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೊಳಿಸುವಂತೆ ಅಧಿಕಾರಿಗಳಿಗೆ ಸಲಹೆ ನೀಡಿದ್ದಾರೆ. ಅವರು ಅಧಿಕಾರ ಸ್ವೀಕರಿಸಿದ ದಿನವೇ ರೈತ ಮಕ್ಕಳ ಉನ್ನತ ಶಿಕ್ಷಣಕ್ಕೆ ವಿದ್ಯಾರ್ಥಿ ವೇತನ ನೀಡುವ ಸಲುವಾಗಿ ಒಂದು ಸಾವಿರ ಕೋಟಿ ರೂಗಳನ್ನು ಮೀಸಲಿರಿಸುವುದಾಗಿ ಘೋಷಣೆ ಮಾಡಿರುವುದು ರೈತ ಸಮುದಾಯದ ಮಕ್ಕಳಿಗೆ ಅತ್ಯಂತ ಮಹತ್ವ ಪೂರ್ಣದಾಗಲಿದೆ.

75 ನೇ ಸ್ವಾತಂತ್ರ್ಯೋತ್ಸ ಸಂಭ್ರಮದ ಆಚರಣೆಯ ನೆನಪಿಗಾಗಿ ಮುಖ್ಯಮಂತ್ರಿಗಳು ರಾಜ್ಯದ ಆಯ್ದ 750 ಗ್ರಾಮ ಪಂಚಾಯಿತಿಗಳನ್ನು "ಅಮೃತ ಗ್ರಾಮ ಪಂಚಾಯಿತಿ' ಎಂದು ಗುರುತಿಸಿ, ಪ್ರತಿ ಮನೆಗೆ ಕುಡಿಯುವ ನೀರು, ಸೌರ ವಿದ್ಯುತ್, ವೈಜ್ಞಾನಿಕ ತ್ಯಾಜ್ಯ ವಿಲೇವಾರಿ, ವಸತಿ ರಹಿತರಿಗೆ ವಸತಿ ಕಲ್ಪಿಸುವುದು, ಆರೋಗ್ಯ ಕೇಂದ್ರಗಳ ಉನ್ನತೀಕರಣ, ಅಂಗನವಾಡಿ ಮತ್ತು ಶಾಲೆಗಳ ಮೂಲ ಸೌಕರ್ಯಗಳನ್ನು ಮೇಲ್ದರ್ಜೆಗೇರಿಸುವಿಕೆ ಇವೇ ಮುಂತಾದ ಯೋಜನೆಗಳು ಸೇರಿದಂತೆ 14 ಅಮೃತ ಯೋಜನೆಗಳನ್ನು ಜಾರಿಗೊಳಿಸಿದ್ದಾರೆ.

ಇನ್ನು ಪ್ರವಾಹದಿಂದ ತೊಂದರೆಗೆ ಸಿಲುಕಿರುವ ಜನರ ಕಷ್ಟ ನಿವಾರಣೆ ಮಾಡುವ ಜೊತೆಗೆ ಹಣಕಾಸಿನ ಸ್ಥಿತಿಯನ್ನು ಉತ್ತಮ ಪಡಿಸುವ ಮೂಲಕ ಜನರಿಗೋಸ್ಕರ ಜನಪರ ಆಡಳಿತ ನೀಡುವುದು ಮುಖ್ಯಮಂತ್ರಿಗಳ ಆಶಯವಾಗಿದೆ. ಹಾಗಾಗಿ ಅವರು ನೆರೆಹಾನಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕೆ ನಿಖರ ಅಂಕಿ-ಅಂಶಗಳ ವರದಿಯನ್ನು ಸಲ್ಲಿಸುವ ಸಲುವಾಗಿ ನೆರೆಹಾವಳಿ ಹಾಗೂ ಕೋವಿಡ್ ನಿರ್ವಹಣೆ ಕುರಿತು ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ಇತ್ತೀಚೆಗಷ್ಟೇ ಜನಪ್ರತಿನಿಧಿಗಳು ಮತ್ತು ಹಿರಿಯ ಅಧಿಕಾರಿಗಳ ಸಭೆಯನ್ನು ನಡೆಸಿದರು. ಸಂತ್ರಸ್ತರ ಖಾತೆಗೆ ಪರಿಹಾರದ ಹಣವನ್ನು ಶೀಘ್ರದಲ್ಲಿ ಜಮೆ ಮಾಡುವ ಸಲುವಾಗಿ ತ್ವರಿತವಾಗಿ ಸಮೀಕ್ಷೆಯನ್ನು ಪೂರ್ಣಗೊಳಿಸುವಂತೆ ಸೂಚನೆ ನೀಡಿದ್ದಾರೆ.

ಹೀಗೆ ಕಳೆದ ಒಂದು ತಿಂಗಳಲ್ಲಿ ಹಲವಾರು ಪ್ರಮುಖ ಯೋಜನೆಗಳನ್ನು ಜಾರಿಮಾಡುವ ಮೂಲಕ ಮುಖ್ಯಮಂತ್ರಿಗಳು ಜನಪರ ಕೆಲಸದಲ್ಲಿ ನಿರತರಾಗಿದ್ದಾರೆ.

ಕೋವಿಡ್ -19 ಹರಡುವಿಕೆ ಪ್ರಮಾಣ ಕಡಿಮೆಯಾಗಿದ್ದರೂ ಕೂಡ ಆರ್ಥಿಕ, ಶೈಕ್ಷಣಿಕ ಚಟುವಟಿಕೆಗಳ ದೃಷ್ಟಿಯಿಂದ ಕೋವಿಡ್ ನಿರ್ಬಂಧಗಳನ್ನು ಮುಂದುವರೆಸಲಾಗುತ್ತಿದೆ. ಈ ಸಾಂಕ್ರಾಮಿಕವನ್ನು ನಿಯಂತ್ರಣದಲ್ಲಿಡಲು ತಪ್ಪದೇ ಕಡ್ಡಾಯವಾಗಿ ಕೋವಿಡ್ ನಿಯಮಾವಳಿಗಳನ್ನು ಪಾಲಿಸುವಂತೆ ಜನರಲ್ಲಿ ಮನವಿ ಮಾಡುತ್ತೇನೆ.

**ಓದುಗರಿಗೆ ಗೌರಿ ಗಣೇಶ ಹಬ್ಬದ ಹಾರ್ದಿಕ ಶುಭಾಶಯಗಳು**

**ಡಾ॥ ಪಿ. ಎಸ್. ಹರ್ಷ, ಐಪಿಎಸ್**
**ಪ್ರಧಾನ ಸಂಪಾದಕರು**

**ಪ್ರಧಾನ ಸಂಪಾದಕರು,** ವಾರ್ತಾ ಜನಪದ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ,
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 560 001. email : feedbackjanapada@gmail.com



Download From : www.kpscvaani.com

# ಜನದನಿಯ ನಾಯಕರಾಗಿ ಹೊರಹೊಮ್ಮಿದ
# ಬಸವರಾಜ ಬೊಮ್ಮಾಯಿ

ಮಂಜುನಾಥ್ ಚಾಂದ್



**ನಮ್ಮ ರಾಜ್ಯದ 23 ನೇ ಮುಖ್ಯಮಂತ್ರಿಯಾಗಿ ಹೊರಹೊಮ್ಮಿರುವ ಬಸವರಾಜ ಬೊಮ್ಮಾಯಿ ಅವರು ಜನರ ನಡುವೆ ದಣಿದ ಆರಂಭದ ರಾಜಕೀಯ ದಿನಗಳ ಹೆಜ್ಜೆ ಗುರುತು.**



Download From : www.kpscvaani.com

"ನೆರೆಯ ಪ್ರದೇಶದಲ್ಲಿ ಆಂಗ್ಲರೇ ಪ್ರತಿ ಎಕರೆಗೆ ಕೇವಲ ಎರಡು ರೂಪಾಯಿ ಕಂದಾಯ ವಿಧಿಸಿದ್ದಾರೆ. ನಮ್ಮವರೇ ಆದ ತಾವು ನಾಲ್ಕು ರೂಪಾಯಿ ಕಂದಾಯ ವಿಧಿಸಿದ್ದೀರಿ. ಕಳೆದ ಎರಡು ವರ್ಷಗಳಿಂದ ಭೀಕರ ಬರಗಾಲದಿಂದ ತತ್ತರಿಸಿರುವ ಜಮಖಂಡಿ ಸಂಸ್ಥಾನದ ರೈತರಿಗೆ ಇದು ಭರಿಸಲಾರದ ಹೊರೆ. ತಾವು ಇದನ್ನು ಮನಗಂಡು ಆಂಗ್ಲರಿಗಿಂತಲೂ ಕಡಿಮೆ ಕಂದಾಯ ವಿಧಿಸಿ ಸುಖೀರಾಜ್ಯ ಕಲ್ಪನೆ ಸಾಕಾರಗೊಳ್ಳಲು ಕಾರಣೀಭೂತರಾಗಬೇಕು. ನಮ್ಮ ಮನವಿಯನ್ನು ಪರಾಂಬರಿಸಿ ಕರ ಕಡಿಮೆ ಮಾಡಬೇಕು ಎಂದು ವಿನಮ್ರವಾಗಿ ವಿನಂತಿಸುತ್ತಿದ್ದೇವೆ.."

ಇಂತಹ ಒಂದು ಮನವಿಯನ್ನು ಅಂದು ಜಮಖಂಡಿ ಸಂಸ್ಥಾನದ ರಾಜ ಅಪ್ಪಾ ಸಾಹೇಬರ ಸಮ್ಮುಖದಲ್ಲಿ ಓದಿದ್ದು ಒಬ್ಬ ಪುಟ್ಟ ಬಾಲಕ. ರಾಜರು ಬರದಿಂದ ಕಂಗಾಲಾಗಿದ್ದ ಕಮಡೊಳ್ಳಿಗೆ ಭೇಟಿ ನೀಡಿ ಗ್ರಾಮಸ್ಥರನ್ನೆಲ್ಲ ಸೇರಿಸಿ ಸಭೆ ನಡೆಸಿದಾಗ ಅವರಿಗೊಂದು ಮನವಿ ಕೊಡಬೇಕು, ಕಂದಾಯ ಕಡಿಮೆ ಮಾಡಿಸಲು ಕೇಳಿಕೊಳ್ಳಬೇಕು ಎಂದು ಎಲ್ಲರೂ ನಿರ್ಧರಿಸಿದ್ದರು. ಆದರೆ ಅಪ್ಪಾ ಸಾಹೇಬರು ಸಭೆಗೆ ಬಂದು ರಾಜಗಾಂಭೀರ್ಯದಲ್ಲಿ ಕುಳಿತಾಗ ಎಲ್ಲರೂ ಗಪ್‌ಚುಪ್. ಶಿರಬಾಗಿ ನಿಂತ ಜನರ ಸಾಲು ಸಾಲು. ಯಾರಲ್ಲೂ ದನಿ ಎತ್ತಲು ಧೈರ್ಯವೇ ಇಲ್ಲ. ಆಗ ಎಲ್ಲರೂ ನೋಡನೋಡುತ್ತಿದ್ದಂತೆ ರಭಸದಿಂದ ಎದ್ದು ಬಂದವನೇ ಈ ಬಾಲಕ. ರಾಜನ ಮುಂದೆ ನಿಂತವನೇ ಗಟ್ಟಿ ಧ್ವನಿಯಲ್ಲಿ ಪೂರ್ತಿ ಮನವಿಯನ್ನು ಅರಳು ಹುರಿದಂತೆ ಓದಿಯೇ ಬಿಟ್ಟ. ರಾಜ ನಿಜಕ್ಕೂ ಅವಾಕ್ಕಾದರು. ಬಾಲಕ ತೋರಿದ ಧೈರ್ಯ ಅವರಲ್ಲಿ ಅಚ್ಚರಿ ಮೂಡಿಸಿತ್ತು. ಅಪ್ಪಾ ಸಾಹೇಬರು ನಿಂತ ಸ್ಥಳದಲ್ಲಿಯೇ ಕಂದಾಯ ತಗ್ಗಿಸುವ ಭರವಸೆಯನ್ನೂ ಕೊಡುತ್ತಾರೆ. ಅದು ಮುಂದೆ ಕಾರ್ಯರೂಪಕ್ಕೂ ಬರುತ್ತದೆ.







Download From : www.kpscvaani.com

## ರೈತರು–ದೀನರ ಕಲ್ಯಾಣಕ್ಕೆ ಪಣತೊಟ್ಟ ಸರ್ಕಾರ

ರಾಜ್ಯದ 23ನೇ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ತಕ್ಷಣ ಬಸವರಾಜ ಬೊಮ್ಮಾಯಿ ಅವರು ತಮ್ಮ ನೂತನ ಸರ್ಕಾರದ ದಿಕ್ಸೂಚಿ ಏನಿರಲಿದೆ ಎಂಬುದನ್ನು ಸ್ಪಷ್ಟವಾಗಿ ಹೇಳಿರುವುದು ಗಮನಾರ್ಹ. ಅಧಿಕಾರ ಗ್ರಹಣ ಮಾಡಿದ ತಕ್ಷಣ ಅವರು ನಡೆಸಿದ ಸುದ್ದಿಗೋಷ್ಠಿಯಲ್ಲಿ ಮಾಡಿದ ಘೋಷಣೆಗಳು ಹಾಗೂ ನೂತನ ಸಚಿವ ಸಂಪುಟ ಅಸ್ತಿತ್ವಕ್ಕೆ ಬಂದ ಬಳಿಕ ನಡೆಸಿದ ಸಂಪುಟ ಸಭೆಯಲ್ಲಿ ಕೈಗೊಂಡ ನಿರ್ಧಾರಗಳು ಇದಕ್ಕೆ ಸಾಕ್ಷಿಯಾಗಿವೆ.

ನಾಡಿನ ರೈತ ಮಕ್ಕಳು ಯಾವ ಕಾರಣಕ್ಕೂ ಉನ್ನತ ಶಿಕ್ಷಣದಿಂದ ವಂಚಿತರಾಗಬಾರದು, ಅವರು ಮುಖ್ಯವಾಹಿನಿಗೆ ಬರುವಂತಾಗಬೇಕು ಎಂಬ ಕಳಕಳಿ ಅವರ ಅಧಿಕಾರದ ಮೊದಲ ದಿನದ ಘೋಷಣೆಯಲ್ಲಿಯೇ ವ್ಯಕ್ತವಾಗಿತ್ತು.

"ರೈತರ ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಉನ್ನತ ಶಿಕ್ಷಣ ಪಡೆಯಲು ಪ್ರೋತ್ಸಾಹ ನೀಡಲಾಗುತ್ತದೆ. ಅವರಿಗೆ ಶಿಷ್ಯ ವೇತನವನ್ನು ನೀಡಲು 1000 ಕೋಟಿ ರೂಪಾಯಿ ಮೀಸಲಿಡಲಾಗುತ್ತದೆ," ಎಂದು ಮುಖ್ಯಮಂತ್ರಿ ಘೋಷಿಸಿದರು.

ಇದರ ಜೊತೆಗೆ ಸಂಧ್ಯಾ ಸುರಕ್ಷಾ ಯೋಜನೆಯ ಅಡಿಯಲ್ಲಿ ನೀಡಲಾಗುತ್ತಿದ್ದ 1000 ರೂ. ಮಾಸಾಶನವನ್ನು 1200 ರೂ.ಗೆ ಹೆಚ್ಚಿಸಲು ಹಾಗೂ ವಿಧವಾ ವೇತನದಡಿ ನೀಡಲಾಗುತ್ತಿದ್ದ ಮಾಸಾಶನವನ್ನು 600ರಿಂದ 800 ರೂ.ಗೆ ಹೆಚ್ಚಿಸಲಾಗಿದೆ. ಅಂಗವಿಕಲರ ವೇತನದಡಿ ಶೇ.40ರಿಂದ 75ರಷ್ಟು ಅಂಗವಿಕಲತೆ ಹೊಂದಿದವರಿಗೆ ನೀಡಲಾಗುತ್ತಿದ್ದ ಮಾಸಾಶನವನ್ನು ಕೂಡ 600ರಿಂದ 800 ರೂ.ಗೆ ಹೆಚ್ಚಿಸುವ ಮೂಲಕ ನೂತನ ಸರ್ಕಾರವು ಜನಕಲ್ಯಾಣ ತನ್ನ ಸಂಕಲ್ಪ ಎನ್ನುವುದನ್ನು ತೋರಿಸಿದೆ.

ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಮರುದಿನವೇ ಬೊಮ್ಮಾಯಿ ಅವರು ಪ್ರವಾಹ ಪೀಡಿತ ಉತ್ತರ ಕರ್ನಾಟಕ ಮತ್ತು ಉತ್ತರ ಕನ್ನಡಕ್ಕೆ ಭೇಟಿ ನೀಡಿ ಜನರ ನೋವಿಗೆ, ಸಂಕಟಕ್ಕೆ ದನಿಯಾಗಿದ್ದು ಜನರ ಮೆಚ್ಚುಗೆಗೆ ಪಾತ್ರವಾಗಿದೆ.

ನೂತನ ಸಚಿವರು ಪ್ರಮಾಣ ವಚನ ಸ್ವೀಕರಿಸಿದ ತಕ್ಷಣ ನಡೆಸಿದ ಸಚಿವ ಸಂಪುಟ ಸಭೆಯಲ್ಲಿಯೂ ಎರಡು ಮಹತ್ವದ ನಿರ್ಧಾರಗಳನ್ನು ಸರ್ಕಾರ ಕೈಗೊಂಡಿದೆ. ಎಸ್.ಟಿ. ಸಮುದಾಯದ ಅಭಿವೃದ್ಧಿಗೆ ಪ್ರತ್ಯೇಕ ಸಚಿವಾಲಯ ಸ್ಥಾಪಿಸಲು ನಿರ್ಧಾರ ಕೈಗೊಳ್ಳುವ ಮೂಲಕ ಪರಿಶಿಷ್ಟ ಪಂಗಡದವರ ಬಹುದಿನಗಳ ಬೇಡಿಕೆಗೆ ಅಸ್ತು ಎಂದಿದೆ.

ಸರ್ಕಾರದ ಇನ್ನೊಂದು ಮಹತ್ವದ ಕ್ರಮ ಎಂದರೆ ಮಹಿಳಾ ಅಭಿವೃದ್ಧಿಗೆ ಮುಖ್ಯಮಂತ್ರಿ ನೇತೃತ್ವದಲ್ಲಿ ಸಮಿತಿ ರಚಿಸಲು ತೀರ್ಮಾನಿಸಿರುವುದು. ರಾಜ್ಯದ ಬಜೆಟ್‌ನಲ್ಲಿ ಮಹಿಳೆಯರು ಮತ್ತು ಮಕ್ಕಳ ಸಬಲೀಕರಣಕ್ಕೆ ಪ್ರತ್ಯೇಕ ಅನುದಾನ ಮೀಸಲಿಡಲಾಗಿದೆ. ನಾನಾ ಇಲಾಖೆಗಳ ಮೂಲಕ ಇದಕ್ಕಾಗಿ ಕಾರ್ಯಕ್ರಮಗಳನ್ನು ಜಾರಿಗೆ ತರಲಾಗುತ್ತಿದೆ. ಆದರೆ ಯೋಜನೆಯ ಸಮನ್ವಯ ಕಟ್ಟುನಿಟ್ಟಿನಿಂದ ನಡೆಯಬೇಕು ಎನ್ನುವ ಉದ್ದೇಶದಿಂದ ಈ ಸಮಿತಿಯನ್ನು ರಚಿಸಲಾಗಿದೆ.



1935ರ ಸುಮಾರಿಗೆ ನಡೆದ ಈ ಘಟನೆಯಲ್ಲಿ ಮನವಿಯನ್ನು ಓದಿದ ಬಾಲಕನ ಹೆಸರು ಸೋಮಪ್ಪ. ಅವನ ಧೈರ್ಯವನ್ನು ಇಡೀ ಊರಿಗೆ ಊರೇ ಕೊಂಡಾಡಿತು. ಅವನಿಂದಾಗಿಯೇ ಊರಿನ ಕಂದಾಯ ಕಡಿಮೆಯಾಯಿತು ಎಂಬ ಹೆಮ್ಮೆ. ಆ ಹುಡುಗನೇ ಮುಂದೆ ಇಡೀ ರಾಷ್ಟ್ರ ಕಂಡ ಅಪರೂಪದ ನಾಯಕನಾಗುತ್ತಾನೆ. ಅವರ ಹೆಸರು ಸೋಮಪ್ಪ ರಾಯಪ್ಪ ಬೊಮ್ಮಾಯಿ.

1988ರ ಮಧ್ಯಭಾಗದಲ್ಲಿ ಮುಖ್ಯಮಂತ್ರಿಯಾಗಿದ್ದ ರಾಮಕೃಷ್ಣ ಹೆಗಡೆ ಅವರ ವಿರುದ್ಧ ಗುರುತರ ಆರೋಪ ಕೇಳಿ ಬರುತ್ತದೆ. ಅದು ಟೆಲಿಫೋನ್ ಕದ್ದಾಲಿಕೆಯ ಆರೋಪ. ಆಗ ಹೆಗಡೆ ಅವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಿದಾಗ ಉತ್ತರಾಧಿಕಾರಿಯಾಗಿ ಕೇಳಿ ಬಂದ ಹೆಸರುಗಳು ಎಚ್.ಡಿ.ದೇವೇಗೌಡ, ನಜೀರ್‌ಸಾಬ್, ಜೆ.ಎಚ್.ಪಟೇಲ್, ಎಸ್.ಆರ್. ಬೊಮ್ಮಾಯಿ. ಮತ್ತು ರಾಚಯ್ಯ. ಇವರೆಲ್ಲರಿಗೂ ಆಡಳಿತದ ಅನುಭವವಿತ್ತು. ದಕ್ಷತೆಯೂ ಇತ್ತು. ಆದರೆ ದೆಹಲಿಯಲ್ಲಿ ರಾಜೀನಾಮೆ ಘೋಷಣೆ ಮಾಡಿದ ಹೆಗಡೆ ಅವರು ಹೇಳಿದ್ದು ಬೊಮ್ಮಾಯಿ ಅವರ ಹೆಸರನ್ನು. ನಾಯಕನ ಆಯ್ಕೆ ವಿಚಾರದಲ್ಲಿ ಅನೇಕ ಗೊಂದಲಗಳಿದ್ದವಾದರೂ ಆವತ್ತು ಜನತಾ ಪಕ್ಷದ ಶಾಸಕಾಂಗ ಪಕ್ಷದ ಸಭೆಯಲ್ಲಿ ಬೊಮ್ಮಾಯಿ ಅವರೇ ನಾಯಕರಾಗಿ ಹೊರಹೊಮ್ಮಿದ್ದರು. ಇದಕ್ಕೆ ಬಹುಮುಖ್ಯ ಕಾರಣ ಬೊಮ್ಮಾಯಿ ಅವರಿಗಿದ್ದ ಸಮಾಜವಾದದ ಚಹರೆ ಮತ್ತು ಅವರು ಬಲವಾಗಿ ನಂಬಿದ್ದ ಎಂ.ಎನ್.ರಾಯ್ ಅವರ ಸಿದ್ಧಾಂತ. ಜೊತೆಗೆ ಶುದ್ಧಹಸ್ತ. ಆದ್ದರಿಂದ ನಾಯಕನಾಗಿ ಆಯ್ಕೆಯಾದ ಮರುದಿನವೇ (ಆಗಸ್ಟ್ 13 1988) ರಾಯಿಸ್ಟ್ ಬೊಮ್ಮಾಯಿ ಅವರು ಕರ್ನಾಟಕದ ಹನ್ನೊಂದನೇ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ.

ಮೂವತ್ತಮೂರು ವರ್ಷಗಳ ಬಳಿಕ ಇತಿಹಾಸ ಮರುಕಳಿಸಿದೆ. ರಾಜಕೀಯದಲ್ಲಿ ಅಂತಹುದೇ ವಿದ್ಯಮಾನಗಳು ಪುನರಾವರ್ತನೆಯಾಗಿವೆ. ಎರಡು ವರ್ಷಗಳ ಕಾಲ ರಾಜ್ಯದ ಆಡಳಿತ ಚುಕ್ಕಾಣಿಯನ್ನು ಹಿಡಿದಿದ್ದ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಜುಲೈ 26ರಂದು ರಾಜೀನಾಮೆ ನೀಡಿದಾಗ



Download From : www.kpscvaani.com

ರಾಜಕೀಯದ ಅಂಗಳದಲ್ಲಿ ಹರಿದಾಡಿದ ಹೆಸರುಗಳು ಹಲವು. ಆದರೆ ಅಂತಿಮ ಆಯ್ಕೆಯ ಹಂತ ಬಂದಾಗ ಯಡಿಯೂರಪ್ಪ ಅವರು ಪ್ರಸ್ತಾಪ ಮಾಡಿದ್ದು ಮಾತ್ರ ಬಸವರಾಜ ಬೊಮ್ಮಾಯಿ ಅವರ ಹೆಸರನ್ನು. ತಂದೆ ಎಸ್.ಆರ್.ಬೊಮ್ಮಾಯಿ ಆಯ್ಕೆ ಸಂದರ್ಭದಲ್ಲಿ ಯಾವ ಮಾನದಂಡಗಳು ಇದ್ದವೋ ಈಗಲೂ ಅವು ರಾಜಕೀಯ ಲೆಕ್ಕಾಚಾರದ ವ್ಯಾಪ್ತಿಯಲ್ಲಿ ಇದ್ದವು ಎಂಬುದು ಗಮನಾರ್ಹ. ಯಾಕೆಂದರೆ ಬೊಟ್ಟು ಮಾಡಲು ಅವರ ವಿರುದ್ಧ ಯಾವುದೇ ಕಪ್ಪು ಚುಕ್ಕೆಗಳು ಇರಲಿಲ್ಲ. ಆ ಕಾರಣಕ್ಕೆ ಆಯ್ಕೆ ಕೆಲಸ ಸುಗಮವಾಯಿತು ಮತ್ತು ವಿರೋಧಿಸುವವರಿಗೆ ಯಾವುದೇ ದನಿ ಇರಲಿಲ್ಲ. ಶಾಸಕಾಂಗ ಪಕ್ಷದ ನಾಯಕರಾಗಿ ಆಯ್ಕೆಯಾದ ಬಸವರಾಜ ಬೊಮ್ಮಾಯಿ ಈಗ ರಾಜ್ಯದ 23ನೇ ಮುಖ್ಯಮಂತ್ರಿ.

ಒಬ್ಬ ರಾಜಕಾರಣಿ ಆಳವಾಗಬೇಕಾದರೆ, ಗಟ್ಟಿಯಾಗಬೇಕಿದ್ದರೆ ಚಿಂತನಶೀಲನೂ ಆಗಿರಬೇಕು, ಜನಪ್ರಿಯನೂ ಆಗಿರಬೇಕು. ಚಿಂತನಶೀಲನಾದ ರಾಜಕಾರಣಿ ಅತಿಯಾದ ಜನಸಂಪರ್ಕದಿಂದ ದಣಿದಾನು. ಜನದಣಿವೇ ಇಲ್ಲದೆ ರಾಜಕಾರಣಿ ಜನಪ್ರಿಯತೆಯನ್ನು ಗಿಟ್ಟಿಸಿಕೊಳ್ಳಲು





> ಬಸವರಾಜ ಬೊಮ್ಮಾಯಿ ಅವರ ಮೇಲೆ ಯಾವುದೇ ಕಪ್ಪು ಚುಕ್ಕೆಗಳಿರಲಿಲ್ಲ. ಹಾಗಾಗಿಯೇ ಅವರು ಯಾರ ವಿರೋಧವು ಇಲ್ಲದೆ ರಾಜ್ಯದ 23 ನೇ ಮುಖ್ಯಮಂತ್ರಿಯಾಗಿ ಆಯ್ಕೆಯಾಗಲು ಸಾಧ್ಯವಾಯಿತು.




Download From : www.kpscvaani.com

# ಸದಾ ಅವ್ವನ ನೆನೆಯುವ ಬೊಮ್ಮಾಯಿ ಕುಟುಂಬ !

## ಗಂಗಮ್ಮ ಪ್ರತಿಷ್ಠಾನದ ಸಾಹಿತ್ಯ ಕೈಂಕರ್ಯ

"ಕ್ರೂರಿ, ದುಷ್ಟ, ಕೊಲೆಗಡುಕ, ರಾಕ್ಷಸ ಪ್ರವೃತ್ತಿಯವರಿಗೆ ದೇವರು ಭಯ ಸ್ವರೂಪ; ತ್ರಿಶೂಲ, ಚಕ್ರ, ವಜ್ರಾಯುಧ ಅಥವಾ ಸಹಸ್ರಬಾಹುಗಳಲ್ಲಿ ಸಹಸ್ರ ಆಯುಧ ಹಿಡಿದು ಮುನ್ನುಗ್ಗಿ ಬರುವ ಕಾಲಾಂತಕ. ಆದರೆ ತಾಯಿ? ಊಹುಂ, ಆಕೆ ಪ್ರೇಮ ಸ್ವರೂಪಿ. ದುಷ್ಟ ಮಕ್ಕಳನ್ನು ಕಂಡು ಎದೆ ಬಿರಿಯುವ ಹಾಗೆ ಅತ್ತಾಳೆಯೇ ವಿನಃ ಶಿಕ್ಷಿಸಲಾರಳು. ಯಾವುದೋ ಒಂದು ಕಾರಣಕ್ಕಾಗಿ ಶಿಕ್ಷಿಸಿದರೂ ಅದಕ್ಕೆ ಪ್ರತಿಫಲವಾಗಿ ತನ್ನನ್ನೂ ಶಿಕ್ಷಿಸಿಕೊಂಡಾಳು. ಜಗತ್ತಿನಲ್ಲಿ ಕೆಟ್ಟ ಹೆಣ್ಣು ಇರಬಹುದು, ಕೆಟ್ಟ ತಾಯಿ ಇರುವುದು ಅಸಾಧ್ಯ. 'ಅವ್ವ' ಎನ್ನುವ ಪದ ಪ್ರೀತಿ, ವಾತ್ಸಲ್ಯ, ಕರುಣೆ, ಮಮತೆ, ಅಂತಃಕರಣ ಮುಂತಾದ ಭಾವಗಳ ಮೊತ್ತ." ಈ ಮಾತನ್ನು ಒಂದು ಕೃತಿಯಲ್ಲಿ ಮೊದಲ ಮಾತಿನರೂಪದಲ್ಲಿ ಬರೆದವರು ಬಸವರಾಜ ಬೊಮ್ಮಾಯಿ ಅವರು.




ಹೌದು, ಬೊಮ್ಮಾಯಿ ಅವರ ತಾಯಿ ಶ್ರೀಮತಿ ಗಂಗಮ್ಮ ಸೋಮಪ್ಪ ಬೊಮ್ಮಾಯಿ ಪ್ರತಿಷ್ಠಾನದ ಹೆಸರಿನಲ್ಲಿ ತಂದ 'ಅವ್ವ' ಪ್ರಾತಿನಿಧಿಕ ಕಥಾ ಸಂಕಲನದಲ್ಲಿ ಈ ಮಾತನ್ನು ಅವರು ಹೇಳಿದ್ದಾರೆ. ತಮ್ಮ ತಾಯಿಯ ಹೆಸರಿನಲ್ಲಿ ಪ್ರತಿಷ್ಠಾನವನ್ನು ಸ್ಥಾಪಿಸಿರುವ ಬೊಮ್ಮಾಯಿ ಅವರು ಆರು ಅತ್ಯುತ್ತಮ ಹಾಗೂ ಅಪರೂಪದ ಕೃತಿಗಳನ್ನು ಹೊರತರುವ ಕೆಲಸವನ್ನು ಅತ್ಯಂತ ಶ್ರದ್ಧೆಯಿಂದ ಮಾಡುತ್ತ ಬಂದಿದ್ದಾರೆ. ನಮ್ಮ ಭಾವಕೋಶದೊಂದಿಗೆ ಬೆಸುಗೆಯಾಗಿಹೋದ, ಜೀವತಂತುವಿನೊಂದಿಗೆ ಹುರಿಗೊಂಡ ತಾಯಂದಿರ ಅದ್ಭುತ ಕವಿತೆ ಮತ್ತು ಕಥೆಗಳನ್ನು ಒಳಗೊಂಡ ಕೃತಿಗಳು ಇವು.

ಪ್ರಾತಿನಿಧಿಕ ಕಥಾ ಮತ್ತು ಕವಿತೆಗಳ ಸಂಕಲನಗಳು ಕನ್ನಡದ ಮಾತ್ರವಲ್ಲ ವಿಶ್ವದ ಅನೇಕ ಲೇಖಕರ ಕಥೆ ಮತ್ತು ಕವಿತೆಗಳನ್ನು ಸಂಗ್ರಹಿಸಿ ಪ್ರಕಟಿಸಿರುವುದು ಗಮನಾರ್ಹ. ಮಾಕ್ಸಿಂಗಾರ್ಕಿ, ಸಾಮರ್‌ಸೆಟ್ ಮಾಮ್, ಹ್ಯಾನ್ಸ್ ಅಂಡರ್‌ಸನ್ ಅವರಿಂದ ಒಳಗೊಂಡು ರವೀಂದ್ರನಾಥ ಠಾಕೂರ್, ಪ್ರೇಮಚಂದ್, ಮಾಸ್ತಿ, ಅನಂತಮೂರ್ತಿ, ತರಾಸು, ಶಾಂತಾದೇವಿ ಕಣವಿ, ಗೀತಾ ನಾಗಭೂಷಣ, ಸಾರಾ ಅಬೂಬಕ್ಕರ್ ಅವರ ತನಕ 46 ಕಥೆಗಳು ಸಂಕಲನದಲ್ಲಿರುವುದು ವಿಶೇಷ.

ಯಾವುದಕ್ಕೂ ಹೇಸದ ಮೂರ್ಖನಾದಾನು ಎಂದು ಜ್ಞಾನಪೀಠ ಪ್ರಶಸ್ತಿ ವಿಜೇತರಾದ ದಿವಂಗತ ಯು.ಆರ್.ಅನಂತಮೂರ್ತಿ ಅವರು ಹೇಳಿದ್ದಾರೆ.

ಒಬ್ಬ ರಾಜಕಾರಣಿ ಜನರಿಂದ, ಜನರ ನಡುವಿನಿಂದಲೇ ದಣಿಯಬೇಕು. ಹಾಗಿದ್ದಾಗ ಮಾತ್ರ ಆತ ಜನರ "ಧಣಿ"ಯೂ "ದನಿ"ಯೂ ಆಗಬಲ್ಲ. ಈ ಮಾತನ್ನು ನೂತನ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಅನ್ವಯಿಸಬೇಕಾದರೆ ಅವರ ರಾಜಕೀಯದ ಆರಂಭದ ದಿನಗಳನ್ನು, ಆರಂಭಿಕ ಹೆಜ್ಜೆ ಗುರುತುಗಳನ್ನು ನೋಡಬೇಕು. ಯಾಕೆಂದರೆ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಿ, ಕೇಂದ್ರದಲ್ಲಿಯೂ ಮಂತ್ರಿಯಾಗಿದ್ದವರು ಎಸ್.ಆರ್.ಬೊಮ್ಮಾಯಿ. ಅಂತಹ ಒಬ್ಬ ಪ್ರಭಾವಿ ರಾಜಕಾರಣಿಯ ಹಿರಿಯ ಮಗನಾಗಿ ಅವರ ಪ್ರಭಾವವನ್ನು ಮಾತ್ರ ಬಳಸಿ ರಾಜಕಾರಣದ ಏರುಮೆಟ್ಟಿಲನ್ನು ಏರಿ ಬಂದರೇ? ಬಸವರಾಜ್ ಕೇವಲ ಅಧಿಕಾರಕ್ಕಾಗಿ ರಾಜಕಾರಣ ಮಾಡುತ್ತ ಬಂದರೇ? ಅವರು ಜನರ ನಡುವೆ ದಣಿಯಲಿಲ್ಲವೇ? ಎಂಬ ಪ್ರಶ್ನೆಗಳು ಸಹಜವಾಗಿ ಕಾಡುತ್ತವೆ. ಅವನ್ನೆಲ್ಲ ಪರಾಮರ್ಶೆ ಮಾಡಲು ಇದು ಸರಿಯಾದ ಕಾಲಘಟ್ಟವೂ ಹೌದು.

ಈಗ್ಗೆ ಹದಿನೆಂಟು ವರ್ಷಗಳ ಹಿಂದೆ ರಾಜ್ಯದಲ್ಲಿ ಎಸ್.ಎಂ.ಕೃಷ್ಣ ಅವರ ಸರ್ಕಾರವಿತ್ತು. ಅಂದರೆ 2003ರ ಮಧ್ಯಭಾಗದಲ್ಲಿ. ಆಗ ಉತ್ತರ ಕರ್ನಾಟಕದ ಬಹುತೇಕ ಭಾಗಗಳಲ್ಲಿ ಭೀಕರ ಬರ. ಹೊಲ-ಕೆರೆ-ಕಟ್ಟೆಗಳು ಬೆಟ್ಟು ಬಿದ್ದು ಪಾಶಾಣವಾಗಿ ಹೋಗಿದ್ದವು. ಆಕಾಶದಲ್ಲಿ ಹರಡಿಕೊಂಡ ಮೋಡಗಳು ಹನಿ ಮಳೆಗಳನ್ನೂ ಸುರಿಸಲು ಹಿಂಜರಿದಿದ್ದವು. ಒಂದಲ್ಲ ಎರಡಲ್ಲ ಸತತ ಮೂರು ವರ್ಷಗಳ ಕಾಲ ಬರದ ಛಾಯೆ. ದನಕರುಗಳ ಹೊಟ್ಟೆ ಹಪ್ಪಳದಂತಾಗಿ ಕಟುಕರ ಪಾಲಾಗಿದ್ದವು. ರೈತರು ತಲ್ಲಣಿಸಿಹೋಗಿದ್ದರು. ಅನೇಕರು ಆತ್ಮಹತ್ಯೆಗೆ ಶರಣಾಗಿದ್ದರು. ನೆಲ ನಂಬಿದ ಜನರ ಆಕ್ರೋಶ ಮುಗಿಲು ಮುಟ್ಟಿತ್ತು. ಅಂತಹ ಕಾಲಘಟ್ಟದಲ್ಲಿ ಆ ನೆಲದ ಜನರ ಆಶೀರ್ವಾದದಿಂದಲೇ ವಿಧಾನಸೌಧದ ಮೆಟ್ಟಿಲನ್ನು ಸ್ಪರ್ಶಿಸಿದ್ದ ಬಸವರಾಜ ಬೊಮ್ಮಾಯಿ ಅವರು ಕೈಗೊಂಡ ನಿರ್ಧಾರ ಐತಿಹಾಸಿಕವಾದುದು.

ಇಂತಹ ಭೀಕರ ಬರಕ್ಕೆ ಉತ್ತರ ಕಂಡುಕೊಳ್ಳಲು ಅವರು ಹೊರಟಿದ್ದು ಅಧಿಕಾರಕೇಂದ್ರಿತವಾದ ವಿಧಾನಸೌಧದ ಕಡೆಗಲ್ಲ. ಬರದ ನಾಡಿಗೇ ಮುಖಾಮುಖಿಯಾಗಲು ಹೊರಟಿದ್ದು. ಒಬ್ಬ ನಾಯಕನ ಆತ್ಮದಂತಿರುವ ಜನರ ಕಡೆಗೆ ನಡೆದು ಹೊರಟಿದ್ದು. ಹೌದು, ಬಸವರಾಜ ಬೊಮ್ಮಾಯಿ ಅವರು ಬರದ ಊರುಗಳ ಕಡೆಗೆ, ಬರವೆಂದು ಯಾವ ನಾಯಕನೂ ಬಾರದ ಊರುಗಳ ಕಡೆಗೆ ಪಾದಯಾತ್ರೆ ಹೊರಟುಬಿಟ್ಟಿದ್ದರು.

ಬಸವರಾಜ್ ಅವರು ಆಗಿನ್ನೂ ವಿಧಾನ ಪರಿಷತ್ ಸದಸ್ಯರಾಗಿದ್ದರು. ಧಾರವಾಡದ ಸ್ಥಳೀಯ ಸಂಸ್ಥೆ ಕ್ಷೇತ್ರದಿಂದ ಎರಡನೇ ಬಾರಿ ಆಯ್ಕೆಯಾಗಿದ್ದರು. ಜೆಡಿಯು ಅವರ ಪಕ್ಷವಾಗಿತ್ತು. ಬರ ಬಂದ ಊರುಗಳ ಜನರ ಆರ್ತನಾದವನ್ನು ಕೇಳಿಸಿಕೊಂಡು ಉಳಿದೆಲ್ಲ



Download From : www.kpscvaani.com

ಕವಿತಾ ಸಂಕಲನವು ಕೂಡ ಅತ್ಯುತ್ತಮ ಕವಿತೆಗಳಿಂದ ಮೈದುಂಬಿದೆ. ಕುವೆಂಪು, ಕೆಎಸ್‌ಎನ್, ನಿಸಾರ್, ಕಣವಿ, ಗಂಗಾಧರ ಚಿತ್ತಾಲ, ಜಿಎಸ್‌ಎಸ್, ಲಂಕೇಶ್, ಬರಗೂರು, ಎಲ್.ಹನುಮಂತಯ್ಯ, ಎಚ್‌ಎಸ್‌ವಿ ಅವರದ್ದೂ ಸೇರಿ 80ಕ್ಕೂ ಹೆಚ್ಚು ಕವಿತೆಗಳಿವೆ.

ಈ ಎರಡು ಕೃತಿಗಳ ಬಳಿಕ ಜಾನಪದ ಸಾಹಿತ್ಯದಲ್ಲಿ ಅವ್ವ, ನಾಟಕಗಳಲ್ಲಿ ಅವ್ವ ಕೃತಿಗಳನ್ನು ಪ್ರತಿಷ್ಠಾನದಿಂದ ಪ್ರಕಟಿಸಲಾಗಿದೆ. ಐದು ಶೀರ್ಷಿಕೆಗಳಲ್ಲಿ ಆರು ಪುಸ್ತಕಗಳನ್ನು ಹೊರತರಲಾಗಿದೆ. ಮುಂದೆ ಸಾಮಾನ್ಯರಲ್ಲಿ ಸಾಮಾನ್ಯ ಅವ್ವ ಕೃತಿ ಸೇರಿದಂತೆ ಹತ್ತು ಕೃತಿಗಳನ್ನು ತರುವ ಉದ್ದೇಶವಿದೆ. ಈ ನಿಟ್ಟಿನಲ್ಲಿ ಕೆಲಸ ಈಗಲೂ ನಡೆಯುತ್ತಿದೆ ಎಂದು ಈ ಪುಸ್ತಕಗಳ ಉಸ್ತುವಾರಿ ಹೊತ್ತಿರುವ ಹಿರಿಯ ಸಾಹಿತಿ ಚಂದ್ರಶೇಖರ ವಸ್ತ್ರದ ಹೇಳುತ್ತಾರೆ.

ಇಷ್ಟು ಮಾತ್ರವಲ್ಲದೆ ಇನ್ನೊಂದು ಮಹತ್ವದ ಅಂಶವೇನೆಂದರೆ ಪ್ರತಿಷ್ಠಾನದ ವತಿಯಿಂದ ಪ್ರತೀ ವರ್ಷ ಮೂರು ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಮಹಿಳೆಯರು ಬರೆದ ಶ್ರೇಷ್ಠ ಕೃತಿಗೆ 'ಅಕ್ಕ' ಪ್ರಶಸ್ತಿ, ಹದಿನೆಂಟು ವರ್ಷ ಒಳಗಿನ ಮಕ್ಕಳು ಬರೆದ ಕೃತಿಗೆ 'ಅರಳು ಮೊಗ್ಗು' ಪ್ರಶಸ್ತಿ ಮತ್ತು ಜಾನಪದ ಕೃತಿಗೆ 'ಜಾನಪದ ಸಿರಿ' ಪ್ರಶಸ್ತಿಗಳನ್ನು ಕಳೆದ ಹತ್ತು ವರ್ಷಗಳಿಂದ ನೀಡಿ ಪುರಸ್ಕರಿಸುತ್ತ ಬಂದಿದ್ದಾರೆ. ತಲಾ 25,000 ಮೌಲ್ಯದ ಈ ಪ್ರಶಸ್ತಿಗಳನ್ನು 30 ಮಂದಿ ಗಣ್ಯರು ಸ್ವೀಕರಿಸಿದ್ದಾರೆ. ಪ್ರಶಸ್ತಿಗಳ ಆಯ್ಕೆಗೆಂದೇ ಸಮಿತಿಯನ್ನು ರಚಿಸಲಾಗಿದೆ. ಹುಬ್ಬಳ್ಳಿ, ದಾವಣಗೆರೆ, ಬೆಂಗಳೂರು, ಶಿಗ್ಗಾವಿ, ಶಿಶುನಾಳ ಮುಂತಾದ ಕಡೆ ಈ ಪ್ರಶಸ್ತಿ ಪ್ರದಾನ ಸಮಾರಂಭಗಳು ನಡೆದಿವೆ.

ಬಸವರಾಜ ಬೊಮ್ಮಾಯಿ ಅವರಿಗೆ ಈ ರೀತಿಯ ಸಾಹಿತ್ಯಕ, ಭಾಷೆ, ಸಂಗೀತದ ಬಗೆಗೆ ಆಸಕ್ತಿ, ಒಲವು ಇರುವ ಕಾರಣದಿಂದಲೇ ಅವರು ಹಾರ ತುರಾಯಿಗಳನ್ನು ತ್ಯಜಿಸುವ ಮತ್ತು ಪುಸ್ತಕಗಳನ್ನು ಉಡುಗೊರೆಯಾಗಿ ಕೊಡುವ ವಿನೂತನ ಪರಂಪರೆಯನ್ನು ಮುಖ್ಯಮಂತ್ರಿಯಾದ ತಕ್ಷಣ ಜಾರಿಗೆ ತಂದಿದ್ದಾರೆ.

ಇಂತಹ ಒಂದು ಆಸಕ್ತಿ ಅವರಿಗೆ ತಂದೆಯಿಂದಲೇ ಬಳುವಳಿಯಾಗಿ ಬಂದಿದೆ. ಎಸ್.ಆರ್.ಬೊಮ್ಮಾಯಿ ಅವರು ಕೇಂದ್ರದಲ್ಲಿ ಮಾನವ ಸಂಪನ್ಮೂಲ ಸಚಿವರಾಗಿದ್ದಾಗ ರಾಜ್ಯವು ನೆನಪಿಸುವಂತಹ ಕೊಡಗೆಗಳನ್ನು ಕೊಟ್ಟಿದ್ದರು. ಬೆಂಗಳೂರಿನ ಬಾಲಬ್ರೂಯಿ ಹಿಂಭಾಗದಲ್ಲಿರುವ ಕಾರ್ಲಟನ್ ಬೃಹತ್ ಬಂಗಲೆಯನ್ನು ರಾಷ್ಟ್ರೀಯ ಕಲಾ ಗ್ಯಾಲರಿಯಾಗಿ ಪರಿವರ್ತನೆ ಮಾಡಿದ ಕೀರ್ತಿ ಅವರಿಗೆ ಸಲ್ಲಬೇಕು. ನಮ್ಮ ಖ್ಯಾತ ಕವಿ ಸುಮತೀಂದ್ರ ನಾಡಿಗ್ ಅವರನ್ನು ದಿಲ್ಲಿಗೆ ಕರೆಸಿ ನ್ಯಾಷನಲ್ ಬುಕ್ ಟ್ರಸ್ಟ್‌ನ ಅಧ್ಯಕ್ಷರನ್ನಾಗಿ ಮಾಡಿದ್ದನ್ನು ಸ್ಮರಿಸಬಹುದು.

ಅವರು ಮುಖ್ಯಮಂತ್ರಿಯಾಗಿದ್ದಾಗ ಅವರ ಪತ್ನಿ ಗಂಗಮ್ಮ ಕೈಯಲ್ಲೊಂದು ಚೀಲ ಹಿಡಿದು ಕಾಯಿಪಲ್ಲೆ ಮಾರುಕಟ್ಟೆಗೆ ನಡೆಯುತ್ತಾ ಹೋಗಿ ಚೌಕಾಸಿ ಮಾಡಿ ಮನೆಗೆ ಬೇಕಾದ ದಿನಿಸು ತರುತ್ತಿದ್ದರು. ಕರ್ನಾಟಕದ ಆದರ್ಶ ಗ್ರಾಮೀಣ ಮಹಿಳೆ ಹೇಗಿರುತ್ತಾಳೆ ಎನ್ನುವುದಕ್ಕೆ ಗಂಗಮ್ಮ ಸಾಕ್ಷಿ ಎಂದು ತೋಂಟದ ಸಿದ್ದಲಿಂಗಸ್ವಾಮಿ ಅವರು ಹೇಳಿದ್ದರು. ಗಂಗಮ್ಮ ಅವರ ನೆನಪಿನಲ್ಲಿಯೇ ಅವರ ಮಕ್ಕಳು ತಂದ 'ಸಿರಿಯನಿತ್ತಡೆ ಒಲ್ಲೆ' ಎಂಬ ಕೃತಿಯ ಹಿನ್ನುಡಿಯಲ್ಲಿ ಅವರು ಈ ಉಲ್ಲೇಖ ಮಾಡಿದ್ದಾರೆ.



ಜನಪ್ರತಿನಿಧಿಗಳಂತೆ ಅವರೂ ಸುಮ್ಮನೇ ಕುಳಿತುಕೊಳ್ಳಬಹುದಿತ್ತು. ಆಷಾಢದ ದಿನಗಳು ಕಳೆದು ಶ್ರಾವಣವು ಕಾಲಿಡುವ ಹೊತ್ತು ಸಮೀಪಿಸುತ್ತಿದ್ದರೂ ಒಂದು ಹನಿ ಮಳೆಯೂ ಬಾರದೇ ಪರಿಸ್ಥಿತಿ ಕೊಂಚವೂ ಬದಲಾಗದೇ ಇದ್ದಾಗ ಅಂದು ಅವರು ಜನರನ್ನೇ ಮಾತನಾಡಿಸಿ ಬರುವ ಅಂತಿಮ ತೀರ್ಮಾನಕ್ಕೆ ಬಂದಿದ್ದರು. ಮಗನ ಇಂತಹ ಒಂದು ನಿರ್ಧಾರ ಎಸ್.ಆರ್.ಬೊಮ್ಮಾಯಿ ಅವರಿಗೂ ಹೆಮ್ಮೆಯ ಮತ್ತು ನೆಮ್ಮದಿಯ ಸಂಗತಿಯಾಗಿತ್ತು. ಮಗ ಸರಿಯಾದ ದಾರಿಯಲ್ಲೇ ಸಾಗುತ್ತಿದ್ದಾನೆ ಎಂಬುದು ಅವರಿಗೆ ವೇದ್ಯವಾಗಿತ್ತು.

2003ರ ಜುಲೈ 10ರಂದು ಧಾರವಾಡದ ಕಡಪದಿಂದ ಬಸವರಾಜ ಬೊಮ್ಮಾಯಿ ಅವರ ಪಾದಯಾತ್ರೆ ಆರಂಭವಾಯಿತು. ಜನಪ್ರತಿನಿಧಿಯೊಬ್ಬರ



Download From : www.kpscvaani.com



ಇಂತಹ ಒಂದು ಅಪರೂಪದ ನಿರ್ಧಾರಕ್ಕೆ ತಮಟೆ–ಡೋಲುಗಳೊಂದಿಗೆ ಜನ ಅದ್ದೂರಿಯ ಸ್ವಾಗತವನ್ನೇ ಕೋರಿದ್ದರು. ಹಾಗೆ ಹೊರಟ ಅವರು ಸತತ ಹನ್ನೊಂದು ದಿನಗಳ ಕಾಲ ನಡೆದಿದ್ದು ಹೆದ್ದಾರಿಗುಂಟ ಅಲ್ಲ ಎನ್ನುವುದು ವಿಶೇಷ. ಬರಡು ಬಿದ್ದ ಹೊಲ–ಗದ್ದೆಗಳ ನಡುವೆಯೂ ಓಡಾಡಿ, ನದಿ–ಹಳ್ಳಗಳನ್ನು ದಾಟಿ ಕುಗ್ರಾಮಗಳಲ್ಲಿ ಜನರ ದನಿಗಳಿಗೆ, ದುಃಖ–ದುಮ್ಮಾನಗಳಿಗೆ ಸಂವಾದಿಯಾಗುತ್ತ ಅವರು ಸಾಗಿದ್ದು 250 ಕಿ.ಮೀ.ಗಳಷ್ಟು ದೂರ. ಆಗ ನಡೆಯುತ್ತಿದ್ದ ವಿಧಾನಸಭೆಯ ಅಧಿವೇಶನವನ್ನೇ ಬಹಿಷ್ಕರಿಸಿ ಜನರ ಕಡೆಗೆ ಹೊರಟಿದ್ದು ಅವರ ನಿಜವಾದ ಕಾಳಜಿಯನ್ನು ಶ್ರುತಪಡಿಸಿತ್ತು.

ಈ ಜನಜಾಗೃತಿಯ ಪಾದಯಾತ್ರೆಯಲ್ಲಿ ಬೊಮ್ಮಾಯಿ ಅವರಿಗೆ ದಕ್ಕಿದ ಅನುಭವ ದೊಡ್ಡದು.

> ಬಸವರಾಜ ಬೊಮ್ಮಾಯಿ ಅವರಿಗೆ ಎಲ್ಲಕ್ಕಿಂತ ಮುಖ್ಯವಾಗಿ ಆ ಭಾಗದ ಜನರ ಜೀವನಾಡಿಯೇ ಆಗಿರುವ ಸಿಂಗಟಾಲೂರು ಏತ ನೀರಾವರಿ ಮತ್ತು ಕಳಸಾ ಬಂಡೂರಿ ನಾಲೆ ಯೋಜನೆ ಕಾರ್ಯರೂಪಕ್ಕೆ ಬರುವುದು ಎಷ್ಟು ಅತ್ಯಗತ್ಯವಾಗಿದೆ ಎಂಬುದರ ವಾಸ್ತವ ಚಿತ್ರಣ ದಕ್ಕಿದ್ದು ಈ ಪಾದಯಾತ್ರೆಯಿಂದಲೇ.

## ದಕ್ಷ ಆಡಳಿತಕ್ಕೆ ಟೀಮ್ ಸ್ಪಿರಿಟ್!

ರಾಜ್ಯದಲ್ಲಿ ದಕ್ಷ, ಪಾರದರ್ಶಕ, ವಿಶ್ವಾಸಾರ್ಹ ಆಡಳಿತವನ್ನು ನೀಡಬೇಕಾದರೆ ನಾವೆಲ್ಲರೂ ಟೀಮ್ ಸ್ಪಿರಿಟ್‌ನಿಂದ ಕೆಲಸ ಮಾಡಬೇಕು. ಹಾಗಿದ್ದಾಗ ಮಾತ್ರ ಜನರಲ್ಲಿ ವಿಶ್ವಾಸವನ್ನು, ಭರವಸೆಯನ್ನು ಮೂಡಿಸಲು ಸಾಧ್ಯವಾಗುತ್ತದೆ ಎಂಬುದನ್ನು ಮುಖ್ಯಮಂತ್ರಿಯವರು ಅಧಿಕಾರ ವಹಿಸಿಕೊಂಡ ದಿನವೇ ಬೊಟ್ಟು ಮಾಡಿದ್ದಾರೆ.

ಸಚಿವ ಸಂಪುಟದಲ್ಲಿ ಕೈಗೊಂಡ ನಿರ್ಧಾರಗಳು ಕಾಲಮಿತಿಯಲ್ಲಿ ಜಾರಿಗೆ ಬರಬೇಕು. ಅದರ ಅನುಷ್ಠಾನದಲ್ಲಿ ವಿಳಂಬವಾದರೆ ಭ್ರಷ್ಟಾಚಾರಕ್ಕೆ ದಾರಿ ಮಾಡಿಕೊಟ್ಟಂತೆ. ಹಾಗಾಗಿ ಪರಿಸ್ಥಿತಿ ಎಷ್ಟೇ ಕಠಿಣವಾಗಿದ್ದರೂ ಕೂಡ ಸರ್ಕಾರದ ಕಾರ್ಯಕ್ರಮಗಳು ಜನರನ್ನು ತಲುಪಬೇಕು ಎಂದು ಬೊಮ್ಮಾಯಿ ಅವರು ಅಧಿಕಾರಿಗಳಿಗೆ ಖಡಕ್ಕಾಗಿ ತಿಳಿಸಿರುವುದು ಸರ್ಕಾರದ ಮುಂದಿನ ನಿರ್ಧಾರಗಳಿಗೆ ಕನ್ನಡಿ ಹಿಡಿದಂತಾಗಿದೆ.

ಈ ವರ್ಷಾಂತ್ಯದ ವೇಳೆಗೆ ಪ್ರತಿಯೊಂದು ಇಲಾಖೆಯಲ್ಲಿಯೂ ಶೇ.5ರಷ್ಟು ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸುವ ಆದೇಶವನ್ನೂ ಅವರು ಹೊರಡಿಸಿದ್ದಾರೆ. ಈ ಸಂಬಂಧ ಅವರು ಮುಖ್ಯ ಕಾರ್ಯದರ್ಶಿಗಳ ಮೂಲಕ ಮಾರ್ಗಸೂಚಿಯನ್ನೂ ಹೊರಡಿಸಿದ್ದಾರೆ.







Download From : www.kpscvaani.com

ಪ್ರತಿಯೊಂದು ಊರುಗಳಲ್ಲಿಯೂ ಜನರು ಬರದಿಂದಾಗಿ ಅನುಭವಿಸುತ್ತಿರುವ ಕಷ್ಟ ಕೋಟಲೆಗಳನ್ನು ಮಂಡಿಯೂರಿ ಕೇಳಲು ಸಾಧ್ಯವಾಯಿತು. ಆಲೂಗಡ್ಡೆ, ಶೇಂಗಾ, ಉಳ್ಳಾಗಡ್ಡಿ, ಹೆಸರು ಬೆಳೆದು ಮುಂಬೈ ಶಹರಿಗೆ ಮಾರಾಟ ಮಾಡುತ್ತಿದ್ದ ರೈತಾಪಿ ಮಂದಿ ಏನನ್ನೂ ಬೆಳೆಯಲೂ ಆಗದೆ, ರೊಕ್ಕದ ಮುಖವನ್ನೇ ಕಾಣದೇ ಕಂಗಾಲಾಗಿದ್ದನ್ನು ಒಬ್ಬ ನಾಯಕ ಕಣ್ಣಾರೆ ಕಾಣಲು ಸಾಧ್ಯವಾಗುವುದು ಇಂತಹ ಕ್ರಮಗಳ ಮೂಲಕವೇ. ಹಾದಿಯುದ್ದಕ್ಕೂ ಅವರಿಗೆ ಸ್ತಬ್ಧಗೊಂಡ ಎಣ್ಣೆಗಾಣ, ಕೈಮಗ್ಗಗಳು, ಪಂಪ್‌ಸೆಟ್‌ಗಳ ದರ್ಶನವೂ ಆಯಿತು. ಪ್ರತಿ ದಿನದ ಅಂತ್ಯಕ್ಕೆ ಅವರು ನಡೆಸಿದ್ದು ಅಕ್ಷರಶಃ ಗ್ರಾಮ ವಾಸ್ತವ್ಯವೇ ಆಗಿತ್ತು ಎನ್ನುವುದು ಬೇರೆ ಮಾತು. ಆ ಭಾಗದ ಜನರು ಉಣ್ಣುವ ಜೋಳದ ರೊಟ್ಟಿ, ಕೆಂಪು-ಉಚ್ಚೆಳ್ಳು ಚಟ್ನಿ, ಉಪ್ಪಿಟ್ಟು ಸೇವಿಸುತ್ತ, ರೈತರೊಂದಿಗೆ ರೈತನಾಗಿ ಅವರ ಬದುಕನ್ನು ಕಂಡಿದ್ದರು.

ಎಲ್ಲಕ್ಕಿಂತ ಮುಖ್ಯವಾಗಿ ಆ ಭಾಗದ ಜನರ ಜೀವನಾಡಿಯೇ ಆಗಿರುವ ಸಿಂಗಟಾಲೂರು ಏತ ನೀರಾವರಿ ಮತ್ತು ಕಳಸಾ ಬಂಡೂರಿ ನಾಲೆ ಯೋಜನೆ ಕಾರ್ಯರೂಪಕ್ಕೆ ಬರುವುದು ಎಷ್ಟು ಅತ್ಯಗತ್ಯವಾಗಿದೆ ಎಂಬುದರ ವಾಸ್ತವ ಚಿತ್ರಣ ದಕ್ಕಿದ್ದು ಈ ಪಾದಯಾತ್ರೆಯಿಂದಲೇ ಎಂಬುದು ಸತ್ಯ. ಇಷ್ಟು ಮಾತ್ರವಲ್ಲದೇ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಕಾರ್ಯರೂಪಕ್ಕೆ ತಂದರೆ ಲಕ್ಷಾಂತರ ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸಲು ಸಾಧ್ಯವಾಗುತ್ತದೆ ಎಂಬುದೂ ಅವರಿಗೆ ಮನದಟ್ಟಾಯಿತು. ಪಾದಯಾತ್ರೆಯ ಉದ್ದಕ್ಕೂ ಜನ ಹದಿನೈದು ಇಪ್ಪತ್ತು ಅಡಿ ಆಳದ ತಗ್ಗಿನಲ್ಲಿ ಇಳಿದು ವರ್ತಿ ನೀರನ್ನು ಒಂದು ಬಿಂದಿಗೆಗೆ ತುಂಬಲು ಪಡುತ್ತಿದ್ದ ಪಾಡು ಕಣ್ಣಿಗೆ ಕಟ್ಟಿತ್ತು. ಬಹುಶಃ ಇಂತಹ ಸತ್ಯಗಳನ್ನು ಕಣ್ಣಾರೆ ಕಂಡು ಅರಿತದ್ದರಿಂದಲೇ ಬೊಮ್ಮಾಯಿ ಅವರಿಗೆ ಮುಂದೆ ಜಲಸಂಪನ್ಮೂಲ ಖಾತೆ ವರವಾಗಿ ದಕ್ಕಿತ್ತು ಎನ್ನಬಹುದು. ಮತ್ತು ಹಾಗೆ ದಕ್ಕಿದ್ದರಿಂದಲೇ ಉತ್ತರ ಕರ್ನಾಟಕದ ಭಾಗದಲ್ಲಿ ಅನೇಕ ಬೃಹತ್ ನೀರಾವರಿ ಯೋಜನೆಗಳನ್ನು, ಕೆರೆಗಳ ಜೀರ್ಣೋದ್ಧಾರವನ್ನು ಕಾರ್ಯರೂಪಕ್ಕೆ ತರಲು ಅವರಿಗೆ ಸಾಧ್ಯವಾಯಿತು.

ಧಾರವಾಡ, ಶಿರಕೋಳ, ಶ್ಯಾನವಾಡ, ನವಲಗುಂದ, ತುಪ್ಪದ ಕುರಹಟ್ಟಿ, ಗದಗ, ಕದಡಿ, ರೋಣ, ಹೊಳೆಮಣ್ಣೂರ, ಕೌಜಗೇರಿ, ಮದಗುಣಕಿಯನ್ನು ದಾಟಿ ರೈತ ಬಂಡಾಯದ, ರೈತ ಹುತಾತ್ಮನಾದ ತಾಣವಾದ ನರಗುಂದವನ್ನು ತಲುಪುವ ಹೊತ್ತಿಗೆ ಬೊಮ್ಮಾಯಿ ಅವರ ದೇಹ ದಣಿದಿದ್ದು ನಿಶ್ಚಿತವಾದರೂ ಅಷ್ಟೂ ಭಾಗದ ಚಿತ್ರಣ, ಜನರ ಜೀವನ ಅವರ ಕಣ್ಣ ಮುಂದೆ ಅಚ್ಚೊತ್ತಿತ್ತು ಎನ್ನುವುದು ಮಾತ್ರ ದಿಟ. ದಾಸ್ಯ-ದಮನದ ವಿರುದ್ಧ ಯಾವತ್ತೂ ಬಂಡೇಳುವ ಗುಣವನ್ನು ರೂಢಿಸಿಕೊಂಡು ಬಂದಿರುವ ನರಗುಂದದಲ್ಲಿ ಹಾಗೂ ರೈತ ಹುತಾತ್ಮನಾದ ಜುಲೈ 21ರಂದೇ ಜನಜಾಗೃತಿ ಪಾದಯಾತ್ರೆ ಕೊನೆಗೊಳ್ಳುವ ಕಾಲಕ್ಕೆ ಬಸವರಾಜ ಬೊಮ್ಮಾಯಿ ಅವರ ಹಿಂದೆ ರೈತರು, ಮಹಿಳೆಯರು, ಯುವಕರು ಸಹಸ್ರಾರು ಸಂಖ್ಯೆಯಲ್ಲಿ ಸಾಲುಗಟ್ಟಿದ್ದರು. ರಾಜಧಾನಿಯಿಂದ ಬಂದಿದ್ದ ನಾಯಕರ ದೊಡ್ಡ ದಂಡೇ ಅಲ್ಲಿ ಸಮಾರೋಪಕ್ಕೆ ಜಮಾಯಿಸಿತ್ತು.

## ಹಾರ-ತುರಾಯಿಗಳನ್ನು ಬಿಡಿ, ಹೊತ್ತಿಗೆಗಳನ್ನು ಕೊಡಿ!

ಮುಖ್ಯಮಂತ್ರಿಯಾಗಿ ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ ಬಸವರಾಜ ಬೊಮ್ಮಾಯಿ ಅವರು ಕೈಗೊಂಡ ಕೆಲವು ನಿರ್ಧಾರಗಳ ಪೈಕಿ ಮೆಚ್ಚುಗೆಗೆ ಪಾತ್ರವಾಗಿದ್ದು ರಾಜಕಾರಣಿಗಳಿಗೆ, ಸರ್ಕಾರಿ ಸಭೆ ಸಮಾರಂಭಗಳಲ್ಲಿ ಹಾರ-ತುರಾಯಿ, ನೆನಪಿನ ಕಾಣಿಕೆಗಳ ಬದಲಿಗೆ ಪುಸ್ತಕಗಳನ್ನು ಕೊಡಿ ಎಂಬುದು. ಇದರಿಂದಾಗಿ ದುಬಾರಿ ನೆನಪಿನ ಕಾಣಿಕೆಗಳ ಮೂಲಕ ಹಣ ಪೋಲಾಗುವುದು ತಪ್ಪುತ್ತದೆ ಮತ್ತು ಸದಭಿರುಚಿಯ ಪುಸ್ತಕಗಳಿಗೆ ಹೆಚ್ಚಿನ ಪ್ರಾಶಸ್ತ್ಯ ಸಿಕ್ಕಂತಾಗುತ್ತದೆ. ಮುಖ್ಯಮಂತ್ರಿಯವರ ಈ ಆದೇಶದ ಬಳಿಕ ಬೆಂಗಳೂರು ಮಹಾನಗರ ಪಾಲಿಕೆ ಕೂಡ ಇದೇ ಕ್ರಮವನ್ನು ಅನುಸರಿಸಿದೆ. ಇನ್ನಷ್ಟು ಸಂಘ-ಸಂಸ್ಥೆಗಳು ಈ ಕ್ರಮವನ್ನು ಪಾಲಿಸಲು ಮುಂದಾಗಿವೆ.

ಜನರ ನಡುವಿನಿಂದಲೇ ದಣಿದು ಬಂದಿದ್ದ ಜನಪ್ರತಿನಿಧಿಯೊಬ್ಬ ಅಂದು ನಿಜ ಅರ್ಥದಲ್ಲಿ 'ಧಣಿ'ಯಾಗಿದ್ದ, ಅರ್ಥಾತ್ ನಾಯಕನಾಗಿದ್ದ. ಅಂದು ವೇದಿಕೆಯಲ್ಲಿ ಆಸೀನರಾಗಿದ್ದ ದೊಡ್ಡ ಬೊಮ್ಮಾಯಿಯವರು 'ದೊಡ್ಡ ಮಗ'ನ ಹೆಜ್ಜೆ ಗುರುತುಗಳನ್ನು ಕಂಡು ಹನಿಗಣ್ಣಾಗಿದ್ದರು. ರಾಜ ಅಪ್ಪಾಸಾಹೇಬರ ಮುಂದೆ ಕಂದಾಯ ತಗ್ಗಿಸುವಂತೆ ಮನವಿ ಮಾಡುವಾಗ ಯಾವ ಉದ್ದೇಶ ಮತ್ತು ಕಳಕಳಿ ಇತ್ತೋ ಅದೇ ಉದ್ದೇಶ ಮತ್ತು ಕಾಳಜಿ ಮಗನಲ್ಲಿಯೂ ಅವರು ಕಂಡಿದ್ದರು.

ಆ ಬಳಿಕದ ರಾಜಕೀಯ ಜೀವನದಲ್ಲಿ ಬಸವರಾಜ ಬೊಮ್ಮಾಯಿ ಅವರು ಅನೇಕ ಏಳು-ಬೀಳುಗಳನ್ನು ಕಂಡಿದ್ದಾರೆ. ವಿರೋಧ ಪಕ್ಷದಲ್ಲಿದ್ದು, ಆಡಳಿತ ಪಕ್ಷದಲ್ಲಿದ್ದು, ಅಧಿಕಾರದಲ್ಲಿದ್ದು ಜನರನ್ನು ಹತ್ತಿರದಿಂದ ಕಂಡಿದ್ದಾರೆ. ತಮಗೆ ದಕ್ಕಿದ ಅಧಿಕಾರವನ್ನು ಜನರ ಬಳಿಗೇ ಕೊಂಡೊಯ್ದಿದ್ದಾರೆ. ತಾವು ನಡೆದ ಹಾದಿಯ ಉದ್ದಕ್ಕೂ ಇಂಗಿ ಹೋಗಿದ್ದ ಭೂಮಿಯನ್ನು ಕಂಡಿದ್ದ ಅವರು ಅಲ್ಲೆಲ್ಲ ನೀರಾವರಿ ಯೋಜನೆಗಳ ಮೂಲಕ ನೀರು ಒಸರುವಂತೆ ಮಾಡಿದ್ದಾರೆ. ಅದಕ್ಕಾಗಿಯೇ ಅವರು ಪಟ್ಟು ಹಿಡಿದು ಪಡೆದಿದ್ದು ಜಲಸಂಪನ್ಮೂಲ ಖಾತೆಯನ್ನು. ಪಾದಯಾತ್ರೆಯ ಮೂಲಕ ಪ್ರತಿಯೊಂದು ಹಳ್ಳಿಯ, ಪ್ರತಿಯೊಂದು ಊರಿನ ಸ್ಪಷ್ಟ ಚಿತ್ರಣ ಅವರ ಕಣ್ಣ ಮುಂದೆ ಇದ್ದಿದ್ದರಿಂದ ಹತ್ತು-ಹಲವಾರು ಯೋಜನೆಗಳ ರೂಪುರೇಷೆ ಸಿದ್ಧಪಡಿಸಲು ಮತ್ತು ಅವುಗಳನ್ನು ಕಾರ್ಯರೂಪಕ್ಕೆ ತರಲು ಅವರಿಗೆ ಕಷ್ಟವಾಗಲಿಲ್ಲ. ಜನಶಕ್ತಿ ಕೇಂದ್ರವಾದ ವಿಧಾನಮಂಡಲದಲ್ಲಿ ಯಾವುದೇ ವಿಷಯವನ್ನು ಮಂಡನೆ ಮಾಡುವ ಸಂದರ್ಭದಲ್ಲಿ, ಪ್ರತಿಪಾದನೆ ಮಾಡುವ ಕಾಲದಲ್ಲಿ ಅವರಲ್ಲಿ ಬದ್ಧತೆ ಢಾಳಾಗಿ ಕಾಣುತ್ತಿತ್ತು. ಅದೆಲ್ಲದರ ಒಟ್ಟು ಪ್ರತಿಫಲವೇ ಬಸವರಾಜ ಬೊಮ್ಮಾಯಿ ಅವರು ಈ ರಾಜ್ಯದ ಮುಖ್ಯಮಂತ್ರಿಯಾಗಿ ಹೊರಹೊಮ್ಮಿದ್ದಾರೆ ಎಂಬುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ ಮತ್ತು ಈ ಕಾರಣದಿಂದಲೇ ಬೊಮ್ಮಾಯಿ ಸರ್ಕಾರದ ಬಗ್ಗೆ ಹೆಚ್ಚಿನ ಭರವಸೆ ಮೂಡುವಂತೆ ಮಾಡಿದೆ.


Download From : www.kpscvaani.com



Azadi Ka Amrit Mahotsav

**ಸುವರ್ಣ ಸ್ವಾತಂತ್ರ್ಯೋತ್ಸವದ ದಿನಾಚರಣೆಯ ಅಂಗವಾಗಿ ಮುಖ್ಯಮಂತ್ರಿಗಳು ನವಕರ್ನಾಟಕದ ಕನಸನ್ನು ಕಂಡಿದ್ದು, ಅದನ್ನು ಸಾಕಾರಗೊಳಿಸುವ ಉದ್ದೇಶದಿಂದ ಹದಿನಾಲ್ಕು ಅಮೃತ ಯೋಜನೆಯನ್ನು ಘೋಷಣೆ ಮಾಡಿದ್ದಾರೆ.**

# ಅಮೃತ ಘಳಿಗೆಗೆ ಹದಿನಾಲ್ಕು ಹೊಸ ಯೋಜನೆಗಳು

## ಸ್ವಾತಂತ್ರ್ಯ ದಿನಾಚರಣೆಯಂದು ಸರ್ಕಾರದ ಘೋಷಣೆ

ಚಂದ್ರಮುಖಿ

ರಾಜ್ಯದ 750 ಗ್ರಾಮ ಪಂಚಾಯ್ತಿಗಳನ್ನು ಗುರುತಿಸಿ ಅವುಗಳನ್ನು ಮಾದರಿ ಗ್ರಾಮಗಳನ್ನಾಗಿ ರೂಪಿಸುವುದು. ಅಲ್ಲಿ ಜನರಿಗೆ ಅತ್ಯಗತ್ಯವಾಗಿ ಬೇಕಿರುವ ಶುದ್ಧ ಕುಡಿಯುವ ನೀರಿನ ಸರಬರಾಜು, ಬೀದಿ ದೀಪಗಳ ಅಳವಡಿಕೆ, ಸೌರವಿದ್ಯುತ್ ಉತ್ಪಾದನೆ, ಸುಸಜ್ಜಿತ ಶಾಲೆಗಳ ಸ್ಥಾಪನೆ ಮಾಡಿ ಅಲ್ಲಿ ಅತ್ಯಾಧುನಿಕವಾದ ಡಿಜಿಟಲ್ ಗ್ರಂಥಾಲಯಗಳನ್ನು ಸ್ಥಾಪಿಸುವುದು, ಗ್ರಾಮಗಳಲ್ಲಿ ನೂರಕ್ಕೆ ನೂರರಷ್ಟು ಘನ ತ್ಯಾಜ್ಯ ವಿಂಗಡಣೆ ಮತ್ತು ವಿಲೇವಾರಿ ಮಾಡುವುದು. ಒಟ್ಟಾರೆಯಾಗಿ ಸಮಗ್ರ ಮೂಲಸೌಕರ್ಯಗಳ ಜೊತೆಗೆ ಅಭಿವೃದ್ಧಿಯನ್ನು ಸಾಕಾರಗೊಳಿಸುವುದು....

ಇದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕಂಡ ಕನಸಿನ ನವಕರ್ನಾಟಕವಾಗಿದೆ. ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಬೆಂಗಳೂರಿನ ಮಾಣೆಕ್ ಶಾ ಪರೇಡ್ ಮೈದಾನದಲ್ಲಿ ಧ್ವಜಾರೋಹಣ ಮಾಡಿ ಮಾತನಾಡಿದ ಸ್ವಾತಂತ್ರ್ಯದ ಅಮೃತ ಮಹೋತ್ಸವದ ನೆನಪನ್ನು ಶಾಶ್ವತಗೊಳಿಸುವ ದೃಢ ಸಂಕಲ್ಪವನ್ನು ಮಾಡಿದರು. ಅದಕ್ಕಾಗಿ ಅವರು ಪ್ರಕಟಿಸಿದ್ದು ಹದಿನಾಲ್ಕು ಹೊಸ ಯೋಜನೆಗಳನ್ನು. ಇಂತಹ ಯೋಜನೆಗಳಿಗಾಗಿಯೇ 644.5 ಕೋಟಿ ರೂಪಾಯಿಗಳ ವಿಶೇಷ ಅನುದಾನವನ್ನೂ ಅವರು ಘೋಷಿಸಿದರು.



Download From : www.kpscvaani.com



**ಅಮೃತ ಯೋಜನೆಗಳನ್ನು ಕಾಲಮಿತಿಯಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸುವ ಬಗ್ಗೆಯೂ ಸರ್ಕಾರ ತೀರ್ಮಾನ ಮಾಡಿದೆ. ಸ್ವಾತಂತ್ರೋತ್ಸವದ ಅಮೃತ ಮಹೋತ್ಸವವನ್ನು ಎರಡು ವರ್ಷಗಳ ಕಾಲ ಆಚರಿಸುವ ನಿರ್ಧಾರವನ್ನು ಪ್ರಕಟಿಸಿದ ಬೊಮ್ಮಾಯಿ ಅವರು, ಆ ಹೊತ್ತಿಗೆ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಸಾಕಾರಗೊಳಿಸುವುದು ಅವರ ಸಂಕಲ್ಪವಾಗಿದೆ.**



"ಜನಪ್ರಿಯರಾಗುವುದು ಸುಲಭ. ಆದರೆ ಜನೋಪಯೋಗಿಯೂ ಆಗಬೇಕು. ಜನರಿಗಾಗಿ ಜನರ ಕಲ್ಯಾಣಕ್ಕಾಗಿ ನನ್ನ ಆಡಳಿತವನ್ನು ಮೀಸಲಿಡುತ್ತೇನೆ. ಅಂತಹ ಜನಪರವಾದ ಯೋಜನೆಗಳನ್ನು ರೂಪಿಸಿ ಅವುಗಳನ್ನು ಅಕ್ಷರಶಃ ಜಾರಿಗೆ ತರುವುದು ನನ್ನ ಸಂಕಲ್ಪವಾಗಿದೆ. ಆಳುವ ವರ್ಗ ಯಾವತ್ತೂ ಜನಸ್ನೇಹಿಯಾಗಿರಬೇಕು. ಹಾಗಿದ್ದಾಗ ಮಾತ್ರ ಅಭಿವೃದ್ಧಿ ಸಾಧ್ಯವಾಗುತ್ತದೆ."

**–ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ**

ಈ ಹಿನ್ನೆಲೆಯಲ್ಲಿಯೇ ಅವರು ಕಂಡ ಕನಸು 750 ಗ್ರಾಮಗಳ 'ಅಮೃತ ಗ್ರಾಮ ಪಂಚಾಯತಿ' ಯೋಜನೆ. ಈ ಮೂಲಕ ಅತ್ಯಂತ ಹಿಂದುಳಿದ ಹೈದರಾಬಾದ್ ಕರ್ನಾಟಕ, ಉತ್ತರ ಕರ್ನಾಟಕ ಸೇರಿದಂತೆ ರಾಜ್ಯದ ಎಲ್ಲ ಭಾಗಗಳ ಆಯ್ದ ಗ್ರಾಮಗಳನ್ನು ಸಮಗ್ರವಾಗಿ ಅಭಿವೃದ್ಧಿ ಮಾಡಿ ಅವುಗಳನ್ನು ಮುಖ್ಯವಾಹಿನಿಗೆ ತರವುದು ಅವರ ಸಂಕಲ್ಪವಾಗಿದೆ. ಇಷ್ಟು ಮಾತ್ರವಲ್ಲದೆ ಇಂತಹ ಗ್ರಾಮಗಳಲ್ಲಿ ವಸತಿ ರಹಿತರಾಗಿರುವ ಮತ್ತು ಆಶ್ರಯವೇ ಇಲ್ಲದವರನ್ನು ಗುರುತಿಸಿ ಅವರಿಗೆ ವಸತಿ ಸೌಕರ್ಯವನ್ನು ಕಲ್ಪಿಸುವ ಯೋಜನೆಯೂ ಇದರಲ್ಲಿದೆ.

ಈ ಗ್ರಾಮಗಳ ಜೀವನಾಡಿಯಾಗಿರುವ ರೈತರು, ನೇಕಾರರು ಮತ್ತು ಮೀನುಗಾರರನ್ನು ಪ್ರಗತಿ ಪಥದತ್ತ ಕರೆದೊಯ್ಯಲು ಅಮೃತ ರೈತ ಉತ್ಪಾದಕ ಸಂಸ್ಥೆಗಳನ್ನು ಸ್ಥಾಪಿಸುವ ಉದ್ದೇಶವನ್ನೂ ಸರ್ಕಾರ ಹೊಂದಿದೆ. ಈ ಮೂಲಕ ಅವರು ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಪೂರಕ ವಾತಾವರಣ ಕಲ್ಪಿಸಿದಂತಾಗುತ್ತದೆ. ಇಂತಹ 750 ಅಮೃತ ರೈತ ಉತ್ಪಾದಕ ಸಂಸ್ಥೆಗಳನ್ನು ಸ್ಥಾಪನೆ ಮಾಡಿ ಪ್ರತಿಯೊಂದು ಸಂಸ್ಥೆಗೂ 30 ಲಕ್ಷ ರೂ. ನಂತೆ ಮೂರು ವರ್ಷಗಳ ಅವಧಿಗೆ 225 ಕೋಟಿ ರೂ. ನೀಡುವುದಾಗಿ ಅವರು ತಮ್ಮ ಭಾಷಣದಲ್ಲಿ ಪ್ರಕಟಿಸಿದ್ದಾರೆ.

ಅಮೃತ ಶಾಲಾ ಸೌಲಭ್ಯ ಯೋಜನೆ ಕೂಡ ಈ ಮಹತ್ವಾಕಾಂಕ್ಷಿ ಕಾರ್ಯಕ್ರಮಗಳಲ್ಲಿ ಒಳಗೊಂಡಿದ್ದು, 750 ಶಾಲೆಗಳನ್ನು ಆಮೂಲಾಗ್ರವಾಗಿ ಅಭಿವೃದ್ಧಿಗೊಳಿಸುವುದು ಇದರ ಉದ್ದೇಶವಾಗಿದೆ. ಶಾಲೆಗಳಿಗೆ ಸುಸಜ್ಜಿತವಾದ ಕಟ್ಟಡಗಳು, ಶೌಚಾಲಯ, ಪ್ರಯೋಗಾಲಯ, ಗ್ರಂಥಾಲಯಗಳನ್ನು ಒದಗಿಸುವುದಕ್ಕೆ ಆದ್ಯತೆ ನೀಡಲಾಗುತ್ತದೆ. ಇದಕ್ಕಾಗಿ 75 ಕೋಟಿಯನ್ನು ಮೀಸಲಿಡಲಾಗುತ್ತದೆ. ಈ ಮೂಲಕ ಗುಣಮಟ್ಟದ ಶಿಕ್ಷಣದಿಂದ ವಂಚಿತರಾಗುತ್ತಿರುವ ಗ್ರಾಮೀಣ ಭಾಗದ ಮಕ್ಕಳನ್ನು ಶಾಲೆಗಳತ್ತ ಕರೆತರುವುದು ಸರ್ಕಾರದ ಉದ್ದೇಶವಾಗಿದೆ. ಇದೇ ರೀತಿ 750 ಅಂಗನವಾಡಿ ಕೇಂದ್ರಗಳಿಗೂ ಮೂಲ ಸೌಕರ್ಯಗಳನ್ನು ಕಲ್ಪಿಸಿ ಅವುಗಳನ್ನು ಮೇಲ್ದರ್ಜೆಗೆ ಏರಿಸುವ ಗುರಿಯನ್ನು ಹೊಂದಲಾಗಿದೆ.

ರಾಜ್ಯದ ಪ್ರತಿ ಗ್ರಾಮಗಳಲ್ಲಿ ಬೇರು ಬಿಟ್ಟಿರುವ, ಅಲ್ಲಿನ ಬಡವರ, ರೈತಾಪಿ ಮಹಿಳೆಯರ ಹಣಕಾಸು ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಹೋಗಿರುವ ಸ್ವಸಹಾಯ ಗುಂಪುಗಳಿಗೆ ಬೆಂಬಲ ನೀಡುವ ಜನಪರ ಯೋಜನೆಯನ್ನು ಮುಖ್ಯಮಂತ್ರಿ ಬೊಮ್ಮಾಯಿ ಅವರು ರೂಪಿಸಿದ್ದಾರೆ. ಇದರ ಭಾಗವಾಗಿ 7500 ಸ್ವಸಹಾಯ ಗುಂಪುಗಳನ್ನು ಕಿರು ಉದ್ದಿಮೆ ಸಂಸ್ಥೆಯಾಗಿ ರೂಪಿಸಲಾಗುತ್ತದೆ. ಅವುಗಳಿಗೆ ತಲಾ ಒಂದು ಲಕ್ಷ ರೂ. ಧನ ಸಹಾಯ ಮಾಡಲಾಗುತ್ತದೆ.



Download From : www.kpscvaani.com




ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದ ವರ್ಗ ಮತ್ತು ಅಲ್ಪ ಸಂಖ್ಯಾತ ಸಮುದಾಯಗಳ ಯುವಕರನ್ನು ಪ್ರೋತ್ಸಾಹಿಸಲೂ ಸರ್ಕಾರ ಮುಂದಾಗಿದೆ. ಅದಕ್ಕಾಗಿ 75000 ಯುವಕ, ಯುವತಿಯರ ಕೌಶಲ್ಯಾಭಿವೃದ್ಧಿಗೆ ಎರಡು ವರ್ಷಗಳ ತರಬೇತಿ ಯೋಜನೆಯನ್ನು ರೂಪಿಸಲಾಗಿದೆ. ಯುವಜನತೆ ಆರಂಭಿಸುವ 75 ನವೋದ್ಯಮಗಳಿಗೆ ಉತ್ತೇಜನವನ್ನೂ ನೀಡಲಾಗುತ್ತದೆ. ಒಟ್ಟಾರೆ ಈ ಕಾರ್ಯಕ್ರಮಗಳಿಗೆ 112 ಕೋಟಿ ರೂ. ವೆಚ್ಚ ಮಾಡಲು ನಿರ್ಧರಿಸಲಾಗಿದೆ ಎಂದು ಅವರು ತಿಳಿಸಿದರು.

ಇತ್ತೀಚಿನ ಸಾಂಕ್ರಾಮಿಕ ರೋಗಗಳ ಹಿನ್ನೆಲೆಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮಗ್ರವಾಗಿ ಮೇಲ್ದರ್ಜೆಗೆ ಏರಿಸುವ ನಿರ್ಧಾರವನ್ನೂ ಅವರು ಈ ಸಂದರ್ಭದಲ್ಲಿ ಪ್ರಕಟಿಸಿದರು. ರಾಜ್ಯದ 750 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಉನ್ನತೀಕರಣಕ್ಕೆಂದೇ 150 ಕೋಟಿ ರೂ. ತೆಗೆದಿರಿಸಲಾಗುತ್ತದೆ. ಬೆಂಗಳೂರಿನಲ್ಲಿರುವ 75 ಕೊಳೆಗೇರಿ ಅಭಿವೃದ್ಧಿ, 75 ಕೆರೆ/ಉದ್ಯಾನಗಳ ಅಭಿವೃದ್ಧಿ ಮಾಡುವ ಯೋಜನೆಯಿದ್ದು ಅದಕ್ಕಾಗಿ ಅಮೃತ ನಗರೋತ್ಥಾನ ಯೋಜನೆಯನ್ನು ರೂಪಿಸಲಾಗಿದೆ.

ಆಯ್ದ 750 ಶಾಲಾ–ಕಾಲೇಜುಗಳ ವಿದ್ಯಾರ್ಥಿಗಳನ್ನು ಗುರುತಿಸಿ ಅವರನ್ನು ರಚನಾತ್ಮಕ ಸಾಮುದಾಯಿಕ ಸೇವೆಗಳಲ್ಲಿ ತೊಡಗಿಸಿಕೊಳ್ಳುವಂತೆ ಮಾಡಲು ಅಮೃತ ಸಮುದಾಯ ಅಭಿವೃದ್ಧಿ ಯೋಜನೆ, ಅಮೃತ ಕ್ರೀಡಾ ದತ್ತು ಯೋಜನೆ, ಸಂಗೊಳ್ಳಿ ರಾಯಣ್ಣ ಜಯಂತಿ ಆಚರಣೆ, ಆಯ್ದ 75 ನಗರಗಳ ಸ್ಥಳೀಯ ಸಂಸ್ಥೆಗಳ ಸ್ವಚ್ಛತೆ ಮತ್ತು ಸೌಂದರ್ಯಕ್ಕೆ ಆದ್ಯತೆಯನ್ನು ನೀಡಲು ಅಮೃತ ನಿರ್ಮಲ ನಗರ ಯೋಜನೆಯನ್ನೂ ಮುಖ್ಯಮಂತ್ರಿಯವರು ಈ ಸಂದರ್ಭದಲ್ಲಿ ಘೋಷಿಸಿದರು.

ಇವಿಷ್ಟೂ ಯೋಜನೆಗಳನ್ನು ಕಾಲಮಿತಿಯಲ್ಲಿ ಕೈಗೆತ್ತಿಕೊಂಡು ಪೂರ್ಣಗೊಳಿಸುವ ಬಗ್ಗೆಯೂ ಸರ್ಕಾರ ತೀರ್ಮಾನ ಮಾಡಿದೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವವನ್ನು ಎರಡು ವರ್ಷಗಳ ಕಾಲ ಆಚರಿಸುವ ನಿರ್ಧಾರವನ್ನು ಪ್ರಕಟಿಸಿದ ಬೊಮ್ಮಾಯಿ ಅವರು, ಆ ಹೊತ್ತಿಗೆ ರಾಜ್ಯದ ಸಮಗ್ರ ಅಭಿವೃದ್ಧಿಯನ್ನು ಸಾಕಾರಗೊಳಿಸುವುದು ಅವರ ಸಂಕಲ್ಪವಾಗಿದೆ.

## ರೈತರ ಮಕ್ಕಳಿಗೆ ವಿದ್ಯಾನಿಧಿ

**ರಾಜ್ಯದ ರೈತರ ಮಕ್ಕಳು ಉನ್ನತ ಮಟ್ಟದ ವ್ಯಾಸಂಗವನ್ನು ಕೈಗೊಳ್ಳಲು ಅವರಿಗೆ ಬೆಂಬಲವಾಗಿ ನಿಲ್ಲಲು ಸರ್ಕಾರ ತೀರ್ಮಾನಿಸಿದೆ. ಅದಕ್ಕಾಗಿ ವಾರ್ಷಿಕ 2500 ರೂ.ಗಳಿಂದ 11 ಸಾವಿರ ರೂ. ತನಕ ವಿದ್ಯಾನಿಧಿಯಲ್ಲಿ ನೆರವಾಗಲು ಸರ್ಕಾರ ಈಗಾಗಲೇ ಆದೇಶ ಹೊರಡಿಸಿದೆ. ಈ ನಿಧಿಗಾಗಿ ಒಂದು ಸಾವಿರ ಕೋಟಿ ನಿಗದಿ ಮಾಡಲಾಗಿದೆ. ಇದರಿಂದ ಪ್ರಯೋಜನ ಪಡೆಯುವ ವಿದ್ಯಾರ್ಥಿಗಳ ಸಂಖ್ಯೆ 17 ಲಕ್ಷಕ್ಕೂ ಅಧಿಕ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅವರು ಇದೇ ಸಂದರ್ಭದಲ್ಲಿ ವಿವರಿಸಿದರು.**



Download From : www.kpscvaani.com

# ದಂಡಿ ಸತ್ಯಾಗ್ರಹದಲ್ಲಿ ಕನ್ನಡದ ಏಕೈಕ ಕುವರ

# ಮೈಲಾರ ಮಹದೇವ

● ಸಂಕಮ್ಮ ಜಿ.ಎಸ್.




**ದಂಡಿಯಾತ್ರೆ ಸತ್ಯಾಗ್ರಹದಲ್ಲಿ ಭಾಗವಹಿಸಿದ ಕರ್ನಾಟಕದ ಏಕೈಕ ಕನ್ನಡದ ಕುವರನೆಂಬ ಹೆಗ್ಗಳಿಕೆಯನ್ನು ಗಳಿಸಿರುವ ಮೈಲಾರ ಮಹದೇವ ಅವರಿಗೆ ಸ್ವಾತಂತ್ರ್ಯ ಆಂದೋಲನದ ಚರಿತ್ರೆಯಲ್ಲಿ ಒಂದು ವಿಶಿಷ್ಟ ಸ್ಥಾನ.**

ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂಭ್ರಮದಲ್ಲಿರುವ ನಾವಿಂದು ಉಸಿರಾಡುತ್ತಿರುವ ಸ್ವಾತಂತ್ರ ದ ಉಸಿರಿಗೆ ಕಾರಣವಾದ ಸ್ವಾತಂತ್ರ್ಯಾಂದೋಲನದ ಇತಿಹಾಸವನ್ನು ನೆನಪಿಸಿಕೊಳ್ಳಲೇಬೇಕು. ಸಂಗ್ರಾಮದ ಚರಿತ್ರೆಯನ್ನು ಬಗೆಯುತ್ತಾ ಹೋದಾಗ ಅಲ್ಲಿ ಬ್ರಿಟಿಷರ ಹಿಂಸೆ, ಕೌರ್ಯಗಳಿಂದ ತತ್ತರಿಸಿದ್ದ ಸೆರೆಮನೆಗೋಡೆಗಳು, ಬಂದೂಕಿನ ನಳಿಕೆಗೆ ಎದೆಗೊಟ್ಟು, ವೈಯಕ್ತಿಕ ಬದುಕನ್ನೇ ಸುಟ್ಟು ಭೂಗತ ವಾಸದಲ್ಲೇ ಉಂಡುಟ್ಟು, ಸ್ವಾತಂತ್ರ್ಯದ ಕನಸ ಕಂಗಳಲ್ಲಿ ನೆಟ್ಟು ದೇಶಕ್ಕಾಗಿ ಇಡೀ ಜೀವನವನ್ನೇ ಸಮರ್ಪಿಸಿ ವೀರಮರಣವನ್ನಪ್ಪಿದ ಅಸಂಖ್ಯಾತ ಭಾರತೀಯರ ಚಿತ್ರ ಕಣ್ಮುಂದೆ ಬಂದು ಕಣ್ತುಂಬುತ್ತವೆ. ಅವರ ತ್ಯಾಗ, ಬಲಿದಾನಗಳಿಂದ ಸಮರ್ಪಣಾ ಮನೋಭಾವದಿಂದ ನಮಗಾಗಿ ಸ್ವಾತಂತ್ರ್ಯದ ಅರವಟ್ಟಿಗೆ ಹಚ್ಚಿಟ್ಟು ಹೋದರು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ತಿರುಗಿದಷ್ಟು ವೇಗವಾಗಿ ಯಾವ ಕಾಲದಲ್ಲಿ ಚರಿತ್ರೆಯ ಪುಟಗಳು ತಿರುಗಿರಲಿಲ್ಲ. ಆಗಿನ ಕ್ರಾಂತಿಕಾರಿಗಳ ಚರಿತ್ರೆಯನ್ನೇನಾದರೂ ಬರೆದರೆ ರಾಮಾಯಣ, ಮಹಾಭಾರತಗಳನ್ನು ಹಿಂದಿಕ್ಕಬಹುದು. ಈ ಹೋರಾಟದಲ್ಲಿ ತುಂಗಭದ್ರೆಯಿಂದಾಚೆಗಿನ ಹೋರಾಟದ ಬಹುದೊಡ್ಡ ಕೊಡುಗೆಯನ್ನಂತೂ ಮರೆಯಲು ಸಾಧ್ಯವಿಲ್ಲ. ಹಿಂದಿನ ಅವಿಭಜ ಧಾರವಾಡ ಜಿಲ್ಲೆ ಈಗಿನ ಹಾವೇರಿ ಜಿಲ್ಲೆಯ ಹೋರಾಟಗಾರರ ದೊಡ್ಡ ಪಡೆಯೇ ಗಾಂಧೀಜಿಯ ಹೋರಾಟಕ್ಕೆ ಬಲತುಂಬಿತ್ತು. ಕೆ.ಎಫ್. ಪಾಟೀಲರಂಥ ಗುರುಗಳು ಶಿಷ್ಯರಲ್ಲಿ ದೇಶಪ್ರೇಮ ತುಂಬಿ ಹೋರಾಟಕ್ಕೆ ತಯಾರು ಮಾಡುತ್ತಿದ್ದರು. ಓ.ಆರ್.ನೇಸ್ವಿ, ಹಳ್ಳಕೇರಿ ಗುದ್ಲೆಪ್ಪ, ಹೊಸಮನಿ ಸಿದ್ದಪ್ಪ, ಕಚವಿ ವೀರನಗೌಡರು, ಮೆಳಸಿನಹಾಳ ತಿಮ್ಮನಗೌಡರು, ಸಂಗೂರ ಕರಿಯಪ್ಪ, ರಮಾನಂದ ಮನ್ನಂಗಿ ಹೀಗೆ ಇನ್ನೂ ಸಾವಿರಾರು ದೇಶಭಕ್ತರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ್ದರು. ಇವರಿಗೆಲ್ಲ ಮುಖಂಡ ಮೋಟೆಬೆನ್ನೂರಿನ ಮೈಲಾರ ಮಹದೇವರು ಎಂಬುದು ಹೆಮ್ಮೆ.

ಇವರು ಗಾಂಧಿಯ ಅಹಿಂಸಾ ಮಾರ್ಗವನ್ನು ಅನುಸರಿಸಿ ಹೋರಾಡಿದ ಕೆಚ್ಚೆದೆಯ ಧೀರ. ಹೆಂಡತಿ– ಮನೆ ತೊರೆದು ಧಾರವಾಡದ 'ಭಾರತೀಯ ತರುಣ ಸಂಘ' ಸೇರಿದ ಇವರು ನೂಲುವುದು, ನೇಯೋದನ್ನು ಕಲಿತರು. ಈ ಸಂಘ ಮಹದೇವರನ್ನು ರಾಷ್ಟ್ರಮಟ್ಟದ ವೀರರನ್ನಾಗಿಸಿದ ಮೆಟ್ಟಿಲಾಯಿತು. 1929ರಲ್ಲಿ ಗಾಂಧೀಜಿಯವರಿಂದ ಧಾರವಾಡದ ಈ ಸಂಘಕ್ಕೆ ಪತ್ರವೊಂದು ಬಂದಿತು. ನಿಮ್ಮ ಸಂಘದ ಪ್ರತಿನಿಧಿಯಾಗಿ ಸಾಬರಮತಿಗೆ ತರಬೇತಿಗಾಗಿ ಒಬ್ಬರನ್ನು ಕಳಿಸಿರಿ, ಎಂದು ಅದರಲ್ಲಿತ್ತು. ಮಹದೇವರಿಗೆ





Download From : www.kpscvaani.com

ಸ್ವರ್ಗಸಿಕ್ಕಷ್ಟೇ ಸಂತೋಷವಾಯಿತು. ನೀನಿನ್ನೂ ಚಿಕ್ಕವನು ಬೇಡ ಎಂದು ಎಲ್ಲರೂ ಹೇಳಿದರೂ ಕೇಳದೇ ಹಟಹಿಡಿದು ಹೊರಟೇಬಿಟ್ಟ. ಸಾಬರಮತಿ ತಲುಪಿ ಗಾಂಧಿ ಎದುರುನಿಂತಾಗ ಧನ್ಯತೆಯ ಭಾವ ಮೂಡಿಸಿತು.

ಗಾಂಧೀಜಿ ಇವರನ್ನು ಬಗೆಬಗೆಯಾಗಿ ಪ್ರಶ್ನಿಸಿದರು. ಗಾಂಧಿ ನಡೆಸಿದ ಪರೀಕ್ಷೆಯಲ್ಲಿ ಗೆದ್ದು, ಬೆನ್ನುತಟ್ಟಿಸಿಕೊಂಡು ಮಹದೇವ ಅವರು ಆಶ್ರಮದ ಕೆಲಸಕಾರ್ಯಗಳಿಗೆ ಕೈ ಹಾಕಿದರು. ಇವರಲ್ಲಿರುವ ಸ್ವಾತಂತ್ರ್ಯದ ದಾಹ ಮತ್ತು ದೇಶಾಭಿಮಾನವನ್ನು ಗಾಂಧೀಜಿ ಅವರು ಗುರುತಿಸಿದರು. ಗಾಂಧೀಜಿಯವರಿಗೆ ಇಂಥ ಉತ್ಸಾಹಿ ಯುವಕರೇ ಬೇಕಿತ್ತು.

ಈ ವೇಳೆಯಲ್ಲಿಯೇ ಬ್ರಿಟಿಷರನ್ನು ಎಚ್ಚರಿಸಲು ಗಾಂಧೀಜಿಯವರು ಯೋಜನೆ ಹಾಕಿದರು. ಈ ಬಾರಿ ಅವರು 'ಮಹಿಳಾ ಮಾರ್ಗ' ಅನುಸರಿಸಿದರು. ಉಪವಾಸ ಸತ್ಯಾಗ್ರಹ ಇದರ ಭಾಗವಾಗಿದ್ದು ಹೇಗೆಂದರೆ ಮಹಿಳೆಯರು ಮನೆಯಲ್ಲಿ ತಮ್ಮ ಬೇಡಿಕೆ ಈಡೇರದಿದ್ದರೆ ಮೌನವಾಗಿದ್ದು ಉಪವಾಸವಿರುತ್ತಾರೆ. ಅದೇ ರೀತಿ ಉಪ್ಪಿಲ್ಲದ ಅಡುಗೆ ಹೇಗೆ, ರುಚಿಸುವುದಿಲ್ಲವೋ ಸ್ವಾತಂತ್ರ್ಯ ಇಲ್ಲದ ಬದುಕು ಕೂಡಾ ಅರ್ಥಹೀನ ಎಂದುಕೊಂಡ ಅವರು 'ಉಪ್ಪಿನ ಸತ್ಯಾಗ್ರಹ' ಮಾಡಲು ನಿರ್ಧರಿಸಿದರು.

1930 ಮಾರ್ಚ್ 12 ರಂದು ಮುಂಜಾನೆ 9.30ಕ್ಕೆ ದಂಡಿಯಾತ್ರೆಯು ಸಾಬರಮತಿಯಿಂದ ಪ್ರಾರಂಭವಾಯಿತು. ಸಾಬರಮತಿಯಿಂದ 250 ಮೈಲುಗಳಷ್ಟು ದೂರವಿದ್ದ ದಂಡಿಗೆ ಕಾಲ್ನಡಿಗೆಯಲ್ಲಿ ಪ್ರಾರಂಭವಾದಾಗ ಗಾಂಧೀಜಿಯ ತಂಡದಲ್ಲಿದ್ದ 79 ಸತ್ಯಾಗ್ರಹಿಗಳಲ್ಲಿ ಅತೀ ಚಿಕ್ಕವಯಸ್ಸಿನ 19ರ ಬಾಲಕ ಮಹದೇವರೂ ಇದ್ದದ್ದು ವಿಶೇಷ. ಎಲ್ಲಾ ಗದ್ದಲ ಹಿಂಸೆಗಳಿಗೆ ಆಸ್ಪದವಿಲ್ಲದೇ ಗಾಂಧೀಜಿವರ ನೇತೃತ್ವದಲ್ಲಿ ಯಾತ್ರೆ ಯಶಸ್ವಿಯಾಗತೊಡಗಿತ್ತು. 'ಗುರಿ ಸಾಧಿಸಲೇಬೇಕು, ಇಲ್ಲವೇ ನನ್ನ ಹೆಣ ಕಡಲಮೇಲೆ ತೇಲಬೇಕು. ದಾಂಡಿ ಪ್ರದೇಶದಲ್ಲಿ ಸರಕಾರದ ಉಪ್ಪಿನ ಕಾರ್ಖಾನೆಯಿತ್ತು. ಉಪ್ಪಿನ ಕೊಠಡಿ ನನಗೆ ಒಪ್ಪಿಸಿ ಇಲ್ಲವಾದರೆ ಅದನ್ನು ವಶಪಡಿಸಿಕೊಳ್ಳುವೆ ಎಂದು ಗಾಂಧಿ ಹೇಳಿದ ಮಾತಿಗೆ ಬ್ರಿಟಿಷರು ಬೆಚ್ಚಿಬಿದ್ದರು.

ಈ ಯಾತ್ರೆಯಲ್ಲಿ ಅಲ್ಲಲ್ಲಿ ಜನಸಂದಣಿ ದಟ್ಟವಾಗಿ ಸೇರುತ್ತಿತ್ತು. ಆಂಗ್ಲರು ಅಲ್ಲಿ ನುಗ್ಗಿ ಲಾಠಿಯಿಂದ ಕ್ರೂರಕೃತ್ಯಕ್ಕೆ ಮುಂದಾಗುತ್ತಿದ್ದರು. ಮಹದೇವರಿಗೂ ಏಟು ಬೀಳುತ್ತಿತ್ತು. ಇಪ್ಪತ್ತೈದು ದಿನಗಳ ಪಾದಯಾತ್ರೆ ಏಪ್ರಿಲ್ ಐದರಂದು ದಂಡಿ ತಲುಪಿತು. ಈ ದಿನ ಹನ್ನೊಂದು ವರ್ಷಗಳ ಹಿಂದೆ ನಡೆದ ಜಲಿಯನ್‌ವಾಲಾಬಾಗ್ ಹತ್ಯಾಕಂಡದ ಮಹಾ ದುರಂತದ ದಿನವಾಗಿತ್ತು. ಅದಕ್ಕೆ ಉಪ್ಪಿನ ಸತ್ಯಾಗ್ರಹವೂ ಒಂದು ಐತಿಹಾಸಿಕ ಘಟನೆ ಆಗಿಹೋಗಿತ್ತು. ಅಂದು ಭಾಗವಹಿಸಿದವರೆಲ್ಲರನ್ನು ಬಂಧಿಸಿ ಆರು ತಿಂಗಳು ಕಠಿಣ ಶಿಕ್ಷೆ ವಿಧಿಸಲಾಯಿತು. ಕರ್ನಾಟಕದಿಂದ ದಂಡಿಯಾತ್ರೆಯಲ್ಲಿ ಭಾಗವಹಿಸಿದ ಏಕೈಕ ಕನ್ನಡದ ಕುವರನೆಂಬ ಬಹುದೊಡ್ಡ ಭಾಗ್ಯ ಮಹದೇವರದಾಯ್ತು. ಸ್ವಾತಂತ್ರ್ಯಾಂದೋಲನದ ಚರಿತ್ರೆಯಲ್ಲಿ ಅವರಿಗೆ ಒಂದು ವಿಶಿಷ್ಟ ಸ್ಥಾನ ಗಳಿಸಿಕೊಟ್ಟಿತು.

ಅದೇ ದಿನ ಕರ್ನಾಟಕದಲ್ಲೂ ಡಾ.ಎನ್.ಎಸ್.ಹರ್ಡಿಕರರ ನೇತೃತ್ವದಲ್ಲಿ ಕಾರವಾರದ ಅಂಕೋಲಾದಲ್ಲಿ ಉಪ್ಪಿನ ಸತ್ಯಾಗ್ರಹ ಅಭೂತಪೂರ್ಣವಾಗಿ ಯಶಸ್ವಿಯಾಗಿತ್ತು. 9 ತಿಂಗಳ ಸೆರೆವಾಸದ ನಂತರ ಬಿಡುಗಡೆಗೊಂಡು ಕರ್ನಾಟಕಕ್ಕೆ ಬಂದ ಮಹದೇವರಿಗೆ ಧಾರವಾಡ, ಹಾವೇರಿ, ಬ್ಯಾಡಗಿ, ಮೋಟೆ ಬೆನ್ನೂರುಗಳಲ್ಲಿ ಅಭೂತಪೂರ್ವ ಸ್ವಾಗತ ಕೋರಲಾಗಿತ್ತು.

ನಂತರ ಪುನಃ ಪತ್ನಿ ಸಿದ್ದಮ್ಮರನ್ನು ಕರೆದುಕೊಂಡು ಸಾಬರಮತಿಗೆ ಹೋದರು. ಅಲ್ಲಿ ಸಿದ್ದಮ್ಮರನ್ನು ಬಾಪು 'ಸಿದ್ದಮತಿ' ಎಂದು ಕರೆದರು. ಅವರೂ ಕೂಡಾ ಹಿಂದಿ, ಗುಜರಾತಿ ಕಲಿತು ಬಾಪೂ ಮತ್ತು ಕಸ್ತೂರ ಬಾರೊಂದಿಗೆ ಆಶ್ರಮದ ಎಲ್ಲ ಕಠಿಣ ನಿಯಮಗಳನ್ನು ಪಾಲಿಸಿ ಎಲ್ಲರಿಗೂ ಪ್ರೀತಿಪಾತ್ರರಾದರು. ಕಸ್ತೂರಬಾರೊಂದಿಗೆ 'ಕಾಯ್ದೆಭಂಗ' ಚಳುವಳಿಯಲ್ಲಿ ಭಾಗವಹಿಸಿ 9 ತಿಂಗಳ ಕಾಲ ಅಹಮದಾಬಾದ್ ಜೈಲಿನಲ್ಲಿ 15 ಮಹಿಳೆಯರೊಂದಿಗೆ ಸೆರೆವಾಸ ಅನುಭವಿಸಿದರು.

ನಂತರ ಗಾಂಧಿ ಆದೇಶದಂತೆ ತಾಯ್ನಾಡಿಗೆ ಬಂದು ಹೊಸರಿತ್ತಿ ಪಕ್ಕದ ಕೊರಡೂರಲ್ಲಿ ಗ್ರಾಮಸೇವಾಶ್ರಮ ಸ್ಥಾಪಿಸಿ ವಿಧಾಯಕ ಕಾರ್ಯಗಳಲ್ಲಿ ತೊಡಗಿಕೊಂಡರು. ಮಹದೇವಪ್ಪರದು ಗಾಂಧಿಮಾರ್ಗ, ಅಹಿಂಸಾತ್ಮಕ ಹೋರಾಟವಾಗಿತ್ತು. ಅವರ ಭೂಗತ ಚಟುವಟಿಕೆಗಳಿಗೆ ಬ್ರಿಟಿಷರು ಬೆಚ್ಚಿಬಿದ್ದರು. ಬಿಳಿಯರಿಗೆ ಮಾರುವೇಷದಲ್ಲಿ ಚಳ್ಳೆಹಣ್ಣು ತಿನ್ನಿಸಿ ಪಾರಾಗುತ್ತಿದ್ದ ಮಹಾದೇವಪ್ಪರನ್ನು ಹಿಡಿದುಕೊಟ್ಟವರಿಗೆ 500ರೂ ಬಹುಮಾನ ಘೋಷಿಸಿದರು. ಬ್ರಿಟಿಷರು ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಹೊರಗಿನಿಂದ ಪೊಲೀಸ್ ಪಡೆ ಕರೆಸಿದ್ದು (ಇವರನ್ನು ಹಿಡಿಯಲು) ಐತಿಹಾಸಿಕವಾಯಿತು.

ಕೊನೆಗೆ 1943 ಏಪ್ರಿಲ್ ಒಂದರಂದು ಹೊಸರಿತ್ತಿಯ ವೀರಭದ್ರ ದೇವಸ್ಥಾನದಲ್ಲಿ ಕಂದಾಯ ಹಣ ದೋಚಲು ಬಂದಿದ್ದ ಮಹದೇವರನ್ನು ಮೋಸದಿಂದ ಗುಂಡುಹಾರಿಸಿ ಕೊಲ್ಲಲಾಯಿತು. ಇವರೊಂದಿಗೆ ತಿರಕಪ್ಪ ಮಡಿವಾಳರು, ವೀರಯ್ಯ ಹಿರೇಮಠರು ಗುಂಡಿಗಾಹುತಿಯಾದರು. ಮಹದೇವರು 'ಹೇ ಬಾಪೂ' ಎನ್ನುತ್ತಲೇ ಪ್ರಾಣಬಿಟ್ಟ ಸುದ್ದಿ ಕೇಳಿದ ಬಾಪೂ ಮಹದೇವ ನನ್ನ ಪ್ರಿಯ ಶಿಷ್ಯ ಎಂದು ಕಂಬನಿ ಮಿಡಿದರು. ಕುಟುಂಬದವರಿಗೆ ದೇಹಗಳನ್ನು ಕೊಡದೇ ಹಾವೇರಿ ಎಲ್ಲಾಪುರದಲ್ಲಿ ಮೂರು ದೇಹಗಳನ್ನು ಒಂದೇ ತಗ್ಗಿಗಾಕಿ ಬ್ರಿಟಿಷರೇ ಮಣ್ಣು ಹಾಕಿದರು. ಮಹದೇವರ ಸಾವು ಸಾವಲ್ಲ. ಕೆಚ್ಚಿನ ದೇಶಭಕ್ತಿಯ ರಸಭರಿತ ರಾಷ್ಟ್ರಪ್ರತಿಜ್ಞೆಯ ರೋಮಾಂಚನಕಾರಿ ಬದುಕಿಗೆ ಮಹೋನ್ನತ ಮುಕ್ತಾಯ. ಭಗತ್‌ಸಿಂಗ್, ಚಂದ್ರಶೇಖರ ಆಜ಼ಾದ್‌ರ ಸಾಲಿಗೆ ನಮ್ಮ ನೆಲದ ದಿಟ್ಟಧೀರನ ಸಾಹಸ ಸೇರಿಹೋಯ್ತು.

ಅವರ ಸ್ಮರಣೆಗಾಗಿ ಈಗ ಘನ ಸರ್ಕಾರ ಹುತಾತ್ಮ ಮಹದೇವ ಮೈಲಾರ ರಾಷ್ಟ್ರೀಯ ಟ್ರಸ್ಟ್(ರಿ) ಮಾಡಿ ಅಲ್ಲಿ ವೀರಸೌಧ ನಿರ್ಮಿಸಿದೆ. ನಿರಂತರ ಚಟುವಟಿಕೆಗಳಿಗಾಗಿ ಯೋಜನೆ ರೂಪಿಸಿದೆ. ಹಾವೇರಿಯ ರೈಲು ನಿಲ್ದಾಣಕ್ಕೆ "ಮಹದೇವ ಮೈಲಾರ ರೇಲ್ವೆ ನಿಲ್ದಾಣ" ಎಂದು ನಾಮಕರಣ ಮಾಡಿದೆ. 'ಕನ್ನಡದ ಹುಲಿ ಮಹದೇವ ಮೈಲಾರ' ಚಲನಚಿತ್ರವಾಗಿದೆ. ಹಿಂದಿಯಲ್ಲಿ ಅವರ ಚರಿತ್ರೆ ಅನುವಾದಗೊಂಡಿದೆ.

ಸ್ವಾತಂತ್ರ್ಯದ ಅಮೃತಘಳಿಗೆಯ ಈ ಸಮಯಕ್ಕೆ ನಮ್ಮ ಯುವಜನಾಂಗ ಅಂದಿನ ಹೋರಾಟಗಾರರ ದಿವ್ಯಾಚೈತನ್ಯದ ಬಗ್ಗೆ ರಾಷ್ಟ್ರ ಭಕ್ತಿಯ ಕುರಿತು ಅರಿತುಕೊಳ್ಳಬೇಕು. ನಮ್ಮ ನೆಲದ ಮಹದೇವರಂತ ಅನೇಕ ದಿಟ್ಟ ಹೋರಾಟಗಾರರಿಂದಾಗಿ ಹಾವೇರಿ ನೆಲದಲ್ಲಿ ಗಾಂಧಿ ಹೆಜ್ಜೆಗಳು ಮೂಡಿವೆ. ■



Download From : www.kpscvaani.com

## ಹಂಪಿ ಶಿಲ್ಪಕಲಾ ಸ್ಮಾರಕಗಳ ವೀಕ್ಷಣೆಗಾಗಿ

# 'ಹಂಪಿ ಆನ್ ವೀಲ್ಸ್'

**ಹಂಪಿ ಶಿಲ್ಪಕಲಾ ಸ್ಮಾರಕಗಳನ್ನು ವೀಕ್ಷಣೆ ಮಾಡಲು ಪ್ರವಾಸಿಗರು ಮೈಲಿಗಟ್ಟಲೆ ನಡೆದಾಡಬೇಕು. ಹಾಗಾಗಿ ಈ ಪ್ರೇಕ್ಷಣೀಯ ಸ್ಥಳವನ್ನು ನೋಡಲು ನಮ್ಮ ಕಾಲು ಬಹಳ ಬಲಿಷ್ಟವಾಗಿರಬೇಕು. ಬಹುದೂರ ನಡೆಯಲು ಸಾಧ್ಯವಾಗದ ಹಿರಿಯ ನಾಗರಿಕರು, ವಿಕಲಚೇತನರು ಮತ್ತು ಮಕ್ಕಳನ್ನು ಮನಸ್ಸಿನಲ್ಲಿಟ್ಟುಕೊಂಡು ಹಂಪಿ ಪ್ರದೇಶ ನಿರ್ವಹಣಾ ಪ್ರಾಧಿಕಾರವು 'ಹಂಪಿ ಆನ್ ವೀಲ್ಸ್' ಸೇವೆಯನ್ನು ಆರಂಭಿಸಿದೆ.**

ಡಾ.ವರಪ್ರಸಾದ್ ರಾವ್ ಪಿ ವಿ

ವಿಶ್ವ ಪರಂಪರೆ ಪಟ್ಟಿಯಲ್ಲಿ ಸೇರಿರುವ ವಿಶ್ವ ವಿಖ್ಯಾತ ಹಂಪಿಯ ಐತಿಹಾಸಿಕ ಸ್ಮಾರಕಗಳ ವೈಭವವನ್ನು ಇನ್ನು ಮುಂದೆ ವಾಹನದಲ್ಲಿಯೇ ಕುಳಿತು ಆರಾಮವಾಗಿ ಕಣ್ತುಂಬಿ ಕೊಳ್ಳಬಹುದಾಗಿದೆ.

"ಕಾಲಿದ್ದವರು ಹಂಪೆ ಸುತ್ತಿ ನೋಡಬೇಕು ಮತ್ತು ಕಣ್ಣಿದ್ದವರು ಕನಕಗಿರಿ ನೋಡಬೇಕು" ಎಂಬ ನಾಣ್ಣುಡಿ ಉತ್ತರ ಕರ್ನಾಟಕದಲ್ಲಿ ಬಹಳ ಪ್ರಚಲಿತವಾಗಿದೆ. ಈ ಹಿನ್ನಲೆಯಲ್ಲಿ ಹಂಪಿಯನ್ನು ಬರಿಗಾಲಿನಲ್ಲಿ ಸುತ್ತಿ ನೋಡಬೇಕು ಎಂದರೇ ಹಲವು ದಿನಗಳೇ ಬೇಕು. ಆದರೆ ಇದೀಗಾ ರೈಲು ಮಾದರಿಯ ಬಸ್‌ನಲ್ಲಿ ಕುಳಿತು ವಿಶ್ವ ವಿಖ್ಯಾತ ಹಂಪಿ ಶಿಲ್ಪಕಲಾ ಸ್ಮಾರಕಗಳನ್ನು ವೀಕ್ಷಣೆ ಮಾಡುವ 'ಹಂಪಿ ಆನ್ ವೀಲ್ಸ್' ಯೋಜನೆಯನ್ನು ಹಂಪಿ ಪ್ರದೇಶ ನಿರ್ವಹಣಾ ಪ್ರಾಧಿಕಾರವು ಕಾರ್ಯಾರಂಭ ಮಾಡಿದೆ.

ಸೆಪ್ಟೆಂಬರ್ 27 ರಂದು "ವಿಶ್ವ ಪ್ರವಾಸೋದ್ಯಮ ದಿನದ" ಹಿನ್ನಲೆಯಲ್ಲಿ ವಿಶ್ವದಲ್ಲಿಯೇ ಗಮನ ಸೆಳೆಯುತ್ತಿರುವ ವಿಶ್ವ ವಿಖ್ಯಾತ ಹಂಪಿಯ ಪರಿಸರದಲ್ಲಿ ವಿನೂತನವಾಗಿ ಜಾರಿಗೆ ತಂದಿರುವ "ಹಂಪಿ ಆನ್ ವೀಲ್ಸ್ " ಕುರಿತು ವಿಶೇಷ ವರದಿ ಇಲ್ಲಿದೆ...

ವಿಶ್ವ ವಿಖ್ಯಾತ ಹಂಪಿ ಶಿಲ್ಪಕಲಾ ಸ್ಮಾರಕಗಳು ಹೆಚ್ಚು ಜನಪ್ರಿಯತೆ ಪಡೆದುಕೊಂಡು ಪ್ರವಾಸಿಗರನ್ನು ಆಕರ್ಷಿಸುತ್ತಿರುವುದು ತಿಳಿದಿರುವ ವಿಷಯವೆ. ಆದರೆ ಇದೀಗ ಇಲ್ಲಿನ ವಿಶೇಷತೆಗಳು ಮತ್ತಷ್ಟು ಮೇರು ಪಡೆದುಕೊಂಡಿವೆ. ಕಾರಣ ವಿಶ್ವ ವಿಖ್ಯಾತ ಹಂಪಿಯಲ್ಲಿ ರೈಲು ಮಾದರಿಯ ವಿಶೇಷ ವಾಹನಗಳು ಸಂಚಾರ ಆರಂಭಿಸಿವೆ. ಒಂದು ಡೀಸೆಲ್, ಎಲೆಕ್ಟ್ರಿಕ್ ಹಾಗೂ ಬ್ಯಾಟರಿಚಾಲಿತ ಪರಿಸರ ಸ್ನೇಹಿ ವಾಹನಗಳು ಇವಾಗಿದ್ದು, ಈ 3 ವಾಹನಗಳನ್ನು ರೈಲು ಮಾದರಿಯಲ್ಲಿ ಅಭಿವೃದ್ಧಿ ಪಡಿಸಲಾಗಿರುವುದು ವಿಶೇಷವಾಗಿದೆ.

ಪೆಟ್ರೋಲ್ ಬಳಕೆಯ ವಾಹನಗಳು ಹೊರಸೂಸುವ ಹೊಗೆಯಿಂದ ಹಂಪಿಯ ಶಿಲ್ಪ ಸ್ಮಾರಕಗಳಿಗೆ ಭವಿಷ್ಯದಲ್ಲಿ ಧಕ್ಕೆ ಉಂಟಾಗುತ್ತದೆ ಎಂಬ ನಿಟ್ಟಿನಲ್ಲಿ ಪರಿಸರ ಸ್ನೇಹಿ  ವಾಹನಗಳನ್ನು ಈ ಯೋಜನೆಯಲ್ಲಿ ಬಳಸಲಾಗುತ್ತಿದೆ. ಈಗಾಗಲೇ ಈ ವಾಹನಗಳು ಹಂಪಿ ಪ್ರವಾಸಿ ಪರಿಸರದಲ್ಲಿ ಓಡಾಟ ಆರಂಭಿಸಿವೆ.






Download From : www.kpscvaani.com




**ಟಿಕೆಟ್ ಕೌಂಟರ್ ಮತ್ತು ಸಮಯ:**

ಎಂಜಿನ್ ಒಳಗೊಂಡಂತೆ ಒಟ್ಟು ಎರಡು ಬೋಗಿಗಳನ್ನು ಒಳಗೊಂಡ ಈ ರೈಲು ಬಸ್‌ನಲ್ಲಿ ಒಂದೇ ಸಲ ಒಟ್ಟು 30 ಜನ ಪ್ರಯಾಣಿಸಬಹುದು. ಹಂಪಿ ಪ್ರದೇಶ ನಿರ್ವಹಣಾ ಪ್ರಾಧಿಕಾರ ಮತ್ತು ಪ್ರಿವಿಲೆಲ್ಸ್ ಗ್ರೀನ್ ಸಲ್ಯೂಷನ್ ಪ್ರೈ.ಲಿ ಸಂಸ್ಥೆ ಜಂಟಿಯಾಗಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತಂದಿದ್ದು, ಇದಕ್ಕೆ 'ಹಂಪಿ ಆನ್ ವೀಲ್ಸ್' ಎಂದು ಹೆಸರಿಡಲಾಗಿದೆ.

ಶ್ರೀ ವಿರೂಪಾಕ್ಷೇಶ್ವರ ರಥ ಬೀದಿಯಲ್ಲಿ ಟಿಕೆಟ್ ಕೌಂಟರ್ ತೆರೆಯಲಾಗಿದ್ದು, 18 ವರ್ಷ ಮೇಲ್ಪಟ್ಟವರಿಗೆ ತಲಾ ಒಬ್ಬರಿಗೆ 355 ರೂ. ಟಿಕೆಟ್ ದರ ನಿಗದಿಪಡಿಸಲಾಗಿದೆ. ಇನ್ನೂ 5 ವರ್ಷದೊಳಗಿನ ಮಕ್ಕಳು ಉಚಿತವಾಗಿ ಪ್ರಯಾಣಿಸಬಹುದು. 6 ವರ್ಷದಿಂದ 17 ವರ್ಷದ ಮಕ್ಕಳಿಗೆ ತಲಾ 175 ರೂ ಟಿಕೆಟ್ ದರ ನಿಗದಿಪಡಿಸಲಾಗಿದೆ. ನಿತ್ಯ ಬೆಳಗ್ಗೆ 8 ಗಂಟೆಯಿಂದ ಆರಂಭಗೊಳ್ಳುವ ಪರಸರ ಸ್ನೇಹಿ ರೈಲು ಬಸ್ ಪ್ರಯಾಣ ಸಂಜೆ 6 ಗಂಟೆಗೆ ಕೊನೆಗೊಳ್ಳಲಿದೆ.

**30:70 ಅನುಪಾತದಲ್ಲಿ ನಿರ್ವಹಣೆ:**

ಪ್ರಾಧಿಕಾರವು ಈ ಹಿಂದೆ ಚೆನ್ನೈ ಹಾಗೂ ಬೆಂಗಳೂರಿನ ಕಂಪೆನಿಯೊಂದಿಗೆ ಈ ಯೋಜನೆ ಕುರಿತು ಮಾತುಕತೆ ನಡೆಸಿತ್ತು. ಆದರೆ, ಅಂತಿಮವಾಗಿ ಪ್ರಿವಿಲೆಲ್ಸ್ ಗ್ರೀನ್ ಸಲ್ಯೂಷನ್ ಪ್ರೈ.ಲಿ ಕಂಪೆನಿಯ ವಾಹನಗಳು ಅಂತಿಮಗೊಂಡಿವೆ. ಪ್ರಾಧಿಕಾರ ಮತ್ತು ಖಾಸಗಿ ಕಂಪೆನಿಯು 30:70 ಅನುಪಾತದಲ್ಲಿ ನಿರ್ವಹಣೆ ಮಾಡಲಿದೆ. ಕೋವಿಡ್ ಕಾರಣದಿಂದ ಈ ಯೋಜನೆಯ ಅನುಷ್ಠಾನಕ್ಕೆ ಸ್ವಲ್ಪ ಹಿನ್ನಡೆಯಾಗಿದ್ದರೂ ಕೂಡ ಪ್ರಾಯೋಗಿಕವಾಗಿ ಚಾಲನೆ ನೀಡಲಾಗಿದೆ. ಇವುಗಳ ಓಡಾಟದ ಸಾಧಕ ಬಾಧಕ ನೋಡಿಕೊಂಡು ಮುಂದಿನ ದಿನ ಮತ್ತಷ್ಟು ವಾಹನಗಳನ್ನು ವಿಸ್ತರಿಸಲಾಗುವುದು ಎಂದು ಹಂಪಿ ಪ್ರಾಧಿಕಾರದ ಪ್ರಭಾರ ಆಯುಕ್ತ ಸಿದ್ಧರಾಮೇಶ್ವರ ಹೇಳಿದ್ದಾರೆ.

**ವಿರೂಪಾಕ್ಷೇಶ್ವರ ದೇವಸ್ಥಾನ, ಬಸವಣ್ಣ ಮಂಟಪ, ರಾಣಿ ಸ್ನಾನಗೃಹ, ಮಹಾನವಮಿ ದಿಬ್ಬ, ಆನೆಸಾಲು ಮಂಟಪ, ನೆಲಸ್ತರ ಶಿವ ದೇವಾಲಯ, ಉಗ್ರ ನರಸಿಂಹ, ಸಾಸಿವೆಕಾಳು, ಕಡಲೆಕಾಳು ಗಣಪ ಸ್ಮಾರಕ ಸೇರಿದಂತೆ ಇತರೆ ಪ್ರಮುಖ ಸ್ಮಾರಕಗಳ ದರ್ಶನ ಮಾಡಿಸಲಿವೆ ಈ 'ಹಂಪಿ ಆನ್ ವೀಲ್ಸ್'.**

ಜಮ್ಮು ಕಾಶ್ಮೀರದ ವೈಷ್ಣೋದೇವಿ ದೇಗುಲದ ದರ್ಶನಕ್ಕೆ ಇದೇ ಪ್ರಿವಲೆನ್ಸ್ ಗ್ರೀನ್ ಸಲ್ಯೂಶನ್ ಸಂಸ್ಥೆ ಭಕ್ತರಿಗೆ ಬಸ್ ರೈಲಿನ ವ್ಯವಸ್ಥೆ ಕಲ್ಪಿಸಿದೆ. ಇನ್ನು ಬೆಂಗಳೂರಿನ ಲಾಲ್‌ಬಾಗ್‌ನಲ್ಲೂ ಸದ್ಯದಲ್ಲೇ ಈ ಬಸ್ ರೈಲಿನ ವ್ಯವಸ್ಥೆ ಮಾಡಲಿದೆ. ಈಗ ಹಂಪಿಯಲ್ಲಿ ಬಸ್ ರೈಲಿನ ವ್ಯವಸ್ಥೆ ಕಲ್ಪಿಸಿದೆ. ಕೊರೊನಾ ಹಿನ್ನೆಲೆ ಯೋಜನೆ ಆರಂಭಕ್ಕೆ ವಿಳಂಬವಾಗಿತ್ತು. ಪ್ರವಾಸಿಗರು ಹೆಚ್ಚು ಸ್ಪಂದಿಸಿದರೆ ಬಸ್ ರೈಲುಗಳ ಸಂಖ್ಯೆ ಹೆಚ್ಚಿಸಲಾಗುವುದು ಎಂದು ಪ್ರಿವಲೆನ್ಸ್ ಗ್ರೀನ್ ಸಲ್ಯೂಶನ್ ಸಂಸ್ಥೆಯ ಮಾಲೀಕರಾದ ಗಿರೀಶ್ ಹೆಚ್. ಕೆ. ತಿಳಿಸಿದ್ದಾರೆ.

ಹಂಪಿಯ ಶ್ರೀವಿರೂಪಾಕ್ಷೇಶ್ವರ ದೇಗುಲದ ರಥಬೀದಿಯಿಂದ ಆರಂಭಗೊಳ್ಳುವ ಪ್ರಯಾಣವು ಬಸವಣ್ಣ ಮಂಟಪ, ಕಡಲೆ ಕಾಳು ಗಣಪ, ಸಾಸಿವೆ ಕಾಳು ಗಣಪ, ಶ್ರಿಕೃಷ್ಣ ದೇಗುಲ, ಬಡವಿ ಲಿಂಗ, ಉಗ್ರ ನರಸಿಂಹ, ಹಜಾರ ರಾಮ ದೇಗುಲ, ಉದ್ದಾನ ವೀರಭದ್ರೇಶ್ವರ ದೇಗುಲ, ನೆಲಸ್ತರದ ಶಿವ ದೇಗುಲ, ಕಮಲ ಮಹಲ್, ಆನೆಲಾಯ, ಮಹಾನವಮಿ ದಿಬ್ಬ, ರಾಣಿಯರ ಸ್ನಾನಗೃಹದಿಂದ ಗೆಜ್ಜಲ ಮಂಟಪದವರೆಗೆ ಸಾಗಲಿದೆ. ಗೆಜ್ಜಲ ಮಂಟಪದಿ0ದ ವಿಜಯ ವಿಠ್ಠಲ, ಕಲ್ಲಿನತೇರು, ಪುರಂದರದಾಸರ ಮಂಟಪಗಳನ್ನು ಬ್ಯಾಟರಿ ಚಾಲಿತ ವಾಹನದಲ್ಲಿ ತೆರಳಿ ನೋಡುವ ವ್ಯವಸ್ಥೆ ಕೂಡ ಮಾಡಲಾಗಿದೆ. ಪ್ರವಾಸಿಗರಿಗೆ ಸ್ಮಾರಕದ ಮಾಹಿತಿ ನೀಡಲು ಓರ್ವ ಮಾರ್ಗದರ್ಶಿ ಇರುತ್ತಾರೆ.

ಪ್ರವಾಸಿಗರ ಸಂತಸ: ಹಂಪೆ ಪ್ರಾಧಿಕಾರ ತಡವಾಗಿಯಾದರೂ ಹಂಪಿ ಪರಿಸರದಲ್ಲಿ ಪ್ರವಾಸಿಗರ ಓಡಾಟಕ್ಕಾಗಿ ವಾಹನಗಳ ವ್ಯವಸ್ಥೆಗೆ ಮುಂದಾಗಿರುವುದಕ್ಕೆ ಹಿರಿಯ ನಾಗರಿಕರು ಸಂತಸ ವ್ಯಕ್ತ ಪಡಿಸಿದ್ದಾರೆ. ಈ ಬಸ್ ರೈಲಿನಲ್ಲಿ ಪ್ರಯಾಣಿಸಿದ ಬೆಂಗಳೂರಿನ ಹಿರಿಯ ನಾಗರಿಕ ಜಯರಾಂ ಅವರು ಈ ಬಗ್ಗೆ ಪ್ರತಿಕ್ರಿಯೆ ನೀಡಿ, ಈ ಭಾಗದಲ್ಲಿ ಸದಾ ಕಾಲ ಬಿಸಿಲು ಇರುತ್ತದೆ. ಹಿರಿಯರು, ಮಹಿಳೆಯರು ಮತ್ತು ಸಣ್ಣ ಮಕ್ಕಳು ನಡೆದುಕೊಂಡು ಹೋಗಿ ವಿಕ್ಷಿಸಲು ಆಗುವುದಿಲ್ಲ. ಇದೀಗ ಈ ವಾಹನಗಳ ಮೂಲಕ ಸ್ಮಾರಕಗಳ ಸಮೀಪವೇ ಪ್ರವಾಸಿಗರನ್ನು ಇಳಿಸುವಂತಹ ವ್ಯವಸ್ಥೆಯನ್ನು ಸರಕಾರ ಮಾಡಿರುವುದು ತುಂಬ ಅನುಕೂಲವಾಗಿದೆ ಎಂದು ಪ್ರತಿಕ್ರಿಯಿಸಿದ್ದಾರೆ.

ಒಟ್ಟಿನಲ್ಲಿ ಬಹು ನಿರೀಕ್ಷೆಯ ನಂತರ ಕೊನೆಗೂ ವಿಶ್ವ ಪ್ರಸಿದ್ಧ ಹಂಪಿಗೆ ರೈಲು ಮಾದರಿಯ ವಾಹನಗಳು ಬಂದಿಳಿದಿವೆ. ಇದರ ಪ್ರಯೋಜನವನ್ನು ಪ್ರವಾಸಿ ಪಡೆದುಕೊಂಡು ಹಂಪಿಯ ಕಲಾ ವೈಭವವನ್ನು ಕಣ್ತುಂಬಿಕೊಳ್ಳಬಹುದು. ■



Download From : www.kpscvaani.com

**ಪ್ರವಾಸವು, ವರ್ಷವಿಡೀ ದುಡಿಯುವ ಮೈಮನಕ್ಕೆ ಉಲ್ಲಾಸ ನೀಡುತ್ತದೆ. ಅಲ್ಲದೆ ಪ್ರವಾಸವು ಪುಸ್ತಕ ಓದಿದಷ್ಟೇ ಜ್ಞಾನಾರ್ಜನೆಯನ್ನು ಒದಗಿಸುತ್ತದೆ. ಹಾಗಾಗಿಯೇ ದೇಶ ಸುತ್ತು-ಕೋಶ ಓದು ಎಂದು ಹೇಳುವುದು. ಸೆಪ್ಟೆಂಬರ್ 27 ರ ವಿಶ್ವ ಪ್ರವಾಸೋದ್ಯಮ ದಿನಾಚರಣೆ ನಿಮಿತ್ತ ಲೇಖಕರು ಈ ಲೇಖನದಲ್ಲಿ ಹಾವೇರಿ ಜಿಲ್ಲೆಯ ಪ್ರವಾಸಿ ತಾಣಗಳನ್ನು ಪರಿಚಯಿಸಿದ್ದಾರೆ.**


ಉತ್ತರ ಕರ್ನಾಟಕದ ಹೆಬ್ಬಾಗಿಲು ಹಾವೇರಿ ಜಿಲ್ಲೆ ಪ್ರವಾಸಿಗರ ನೆಚ್ಚಿನ ತಾಣವಾಗಿದೆ. ಏಲಕ್ಕಿ ಕಂಪಿನ ನಾಡು ಎಂದೇ ಜನಮನ್ನಣೆ ಪಡೆದಿರುವ ಹಾವೇರಿ ಜಿಲ್ಲೆ ಪುರಾಣ ಪ್ರಸಿದ್ಧ ಹಲವು ಧಾರ್ಮಿಕ, ಕಲಾತ್ಮಕ ಐತಿಹಾಸಿಕ ತಾಣಗಳ ಜೊತೆಗೆ ವೈವಿಧ್ಯಮಯ ಅಪರೂಪದ ಜೀವಸಂಕುಲಗಳ ನಿಸರ್ಗ ತಾಣಗಳ ಮಾಲೆಯನ್ನು ಧರಿಸಿದೆ.

ರಾಣೇಬೆನ್ನೂರಿನಲ್ಲಿರುವ "ಕೃಷ್ಣಮೃಗ ಅಭಯಾರಣ್ಯ", ಬಂಕಾಪುರದ "ನವಿಲುಧಾಮ" ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿದರೆ ಹಾವೇರಿಯ ಘಮಘಮಿಸುವ "ಯಾಲಕ್ಕಿಹಾರ"ದ ಕಂಪು, ಅಂತರಾಷ್ಟ್ರೀಯ ಮನ್ನಣೆ ಪಡೆದಿರುವ ಬ್ಯಾಡಗಿಯ "ಕೆಂಪು ಮೆಣಸಿಕಾಯಿ" ಮಾರುಕಟ್ಟೆ, ಸವಣೂರಿನ "ವಿಳ್ಯದೆಲೆ" ನಾಡಿನ ಜನತೆಯ ನಾಲಿಗೆಯನ್ನು ಕೆಂಪಾಗಿಸಿವೆ.

ಬಾಡದ "ಕನಕದಾಸರ ಅರಮನೆ", ಕಾಗಿನಲೆಯ "ಕನಕ ಪರಿಸರ ಸ್ನೇಹಿ ಥೀಮ್ ಪಾರ್ಕ್" ಹಾಗೂ ಕೆ.ಆರ್.ಎಸ್. ಮಾದರಿಯ "ಸಂಗೀತ ಕಾರಂಜಿ", ಶಿಗ್ಗಾಂವ್ ತಾಲೂಕಿನ ಗೊಟಗೋಡಿಯಲ್ಲಿರುವ ವೈವಿಧ್ಯಮಯ ಶಿಲ್ಪಕಲೆ ಹಾಗೂ ಗ್ರಾಮೀಣ ಬದುಕಿನ ಅನಾವರಣ ತಾಣ "ರಾಕ್ ಗಾರ್ಡನ್", ಏಷ್ಯಾದ ಮೊದಲ ಜಾನಪದ ವಿಶ್ವವಿದ್ಯಾಲಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಗೋಟಗೋಡಿಯ "ಕರ್ನಾಟಕ ಜಾನಪದ ವಿಶ್ವವಿದ್ಯಾಲಯ", ಕೃಷಿ ಮತ್ತು ಮನರಂಜನೆಯ ಯಾನವಾಗಿರುವ "ಅಗಡಿ ತೋಟ", ಸವಣೂರಿನ "ನವಾಬರ ಐತಿಹಾಸಿಕ ಕೋಟೆ", ಮಾಸೂರಿನ "ಮದಗದ ಕೆರೆ" ನಿಸರ್ಗ ಪ್ರಿಯರ ಮೈಮನಗಳಿಗೆ ಮುದನೀಡುತ್ತವೆ.

# ಯಾಲಕ್ಕಿ ಕಂಪಿನ ಹಾವೇರಿ ಜಿಲ್ಲೆಯ ವೈವಿಧ್ಯಮಯ ತಾಣಗಳಿಗೆ ಪ್ರವಾಸಿಯಾನ

ಡಾ. ರಂಗನಾಥ್ ಕುಳಗಟ್ಟೆ









Download From : www.kpscvaani.com







ತುಂಗ-ಭದ್ರ, ವರದಾ, ಧರ್ಮಾ, ಕುಮದ್ವತಿ ಪಂಚನದಿಗಳು ಹರಿಯುವ ಹಾವೇರಿ ಜಿಲ್ಲೆ ಕೃಷಿ ಪ್ರಧಾನವಾಗಿದೆ. ಮಲೆನಾಡು, ಅರೆಮಲೆನಾಡು, ಬಯಲು ಪ್ರದೇಶ ವ್ಯಾಪ್ತಿ ಒಳಗೊಂಡಿದೆ. ಪ್ರವಾಸದ ದಾರಿಯುದ್ದಕ್ಕೂ ನಿತ್ಯ ಹರಿದ್ವರ್ಣದಂತೆ ವರ್ಣಾತೀತ ಹಚ್ಚ-ಹಸಿರಿನಿಂದ ಕಂಗೊಳಿಸುವ ಪ್ರಾಕೃತಿಕ ಸಿರಿಯ ಹೂಬಳ್ಳಿ ತೆನೆ ತೂಗುವ ಸೊಬಗು ಮೈಮನಗಳನ್ನು ಮುದಗೊಳಿಸುವ ವಾತಾವರಣ ಪ್ರವಾಸಿಗರಿಗೆ ಅಹ್ಲಾದಕರ ಹಿತಉಣಿಸುತ್ತದೆ. ಎಲ್ಲ ಅಭಿರುಚಿಯ ಮನಸ್ಥಿತಿಗಳಿಗೆ ಮುದನೀಡುವ ತಾಣಗಳ ಅತ್ಯುತ್ತಮ ಪ್ರವಾಸಿ ಪ್ಯಾಕೇಜ್ ಆಗಿ ಹಾವೇರಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಬಹುದಾಗಿದೆ.

ಬೆಂಗಳೂರು-ಪುಣೆ(ಪೂನಾ) ರಾಷ್ಟ್ರೀಯ ಹೆದ್ದಾರಿ ಹಾದುಹೋಗುವ ಹಾವೇರಿ ಜಿಲ್ಲೆಯ ಎಲ್ಲ ಪ್ರವಾಸಿ ತಾಣಗಳಿಗೂ ಅತ್ಯುತ್ತಮ ರಸ್ತೆ ಸಂಪರ್ಕ ಹಾಗೂ ಸಾರಿಗೆ ವ್ಯವಸ್ಥೆ ಇದೆ. ರೈಲು ಸಂಪರ್ಕದ ಜೊತೆಗೆ ಹಾವೇರಿಯಿಂದ ಅನತಿ ದೂರದಲ್ಲಿರುವ ಹುಬ್ಬಳ್ಳಿ ವಿಮಾನ ನಿಲ್ದಾಣ (40 ಕಿ.ಮೀ) ಸಂಪರ್ಕಿಸಬಹುದು. ಸ್ವಂತ ವಾಹನದಲ್ಲಿ ಬರುವವರಿಗೆ ಉತ್ತಮ ರಸ್ತೆಗಳಿಂದಾಗಿ ಆಯಾಸವಿಲ್ಲದೆ ಪ್ರಯಾಣಿಸಬಹುದು.

ಜಿಲ್ಲಾ ಕೇಂದ್ರ ಹಾವೇರಿಯಿಂದ ಗರಿಷ್ಠ 40 ಕಿ.ಮಿ.ಅಂತರದೊಳಗೆ ಎಲ್ಲ ಪ್ರವಾಸಿ ತಾಣಗಳನ್ನು ಸಂಪರ್ಕಿಸಬಹುದಾಗಿದೆ. ರಾಷ್ಟ್ರೀಯ ಹೆದ್ದಾರಿಯ ಇಕ್ಕೆಲಗಳಲ್ಲಿ ಬಹುಪಾಲು ಪ್ರವಾಸಿ ತಾಣಗಳು ಕಾಣಸಿಗುವುದರಿಂದ ಆಯಾಸವಾಗದು. ಉತ್ತಮ ವಸತಿ ವ್ಯವಸ್ಥೆ ಜೊತೆಗೆ ಉತ್ತರ ಕರ್ನಾಟಕ ಶೈಲಿಯ ತಿನಿಸುಗಳನ್ನು ಸವಿಯಬಹುದು.

ಬೆಂಗಳೂರು ಮಾರ್ಗದಿಂದ ಪ್ರವಾಸ ಹೊರಡುವವರಿಗೆ ಹರಿಹರದ ಸಮೀಪ ತುಂಗಾ ನದಿ ದಾಟಿದರೆ ಹಾವೇರಿ ಜಿಲ್ಲೆಯ ಕುಮಾರಪಟ್ಟಣಂ ತಲುಪಬಹುದು. ಬೃಹತ್ ಪ್ರಮಾಣದ ಕೈಗಾರಿಕಾ ಕೇಂದ್ರಗಳು, ಪ್ರಸಿದ್ಧವಾದ ಇಟ್ಟಂಗಿ ಭಟ್ಟಿಗಳನ್ನು ಕಾಣಬಹುದು. ಅನತಿ ದೂರದಲ್ಲಿ ತುಂಗಭದ್ರಾ ತೀರದಲ್ಲಿರುವ "ಐರಣಿ" ವೀರಶೈವರ ಪವಿತ್ರ ಕ್ಷೇತ್ರ ನೋಡಬಹುದು. ಹತ್ತಿ ಹಾಗೂ ಉಣ್ಣೆಯ ಬಟ್ಟೆಗಳಿಗೆ ಹಿಂದೆ ಪ್ರಸಿದ್ಧವಾಗಿದ್ದ ಈ ಊರಿನಲ್ಲಿ ಪುರಾತನವಾದ ಕೋಟೆಯ ಅವಶೇಷಗಳು ಪ್ರವಾಸಿಗರಿಗೆ ಇಷ್ಟವಾಗುತ್ತವೆ.

ರಾಣೇಬೆನ್ನೂರ ಪಟ್ಟಣ ಪ್ರವೇಶ ಮಾಡಿದರೆ ಕುರಿ ಉಣ್ಣೆಯಿಂದ ತಯಾರಾಗುವ ರಗ್ಗುಗಳು, ಕಂಬಳಿಗಳು ಹಾಗೂ ಕೌದಿ ಖರೀದಿಸಬಹುದಾಗಿದೆ. ಸಮೀಪದಲ್ಲೇ ಕೃಷ್ಣಮೃಗ ಅಭಯಾರಣ್ಯ ಪರಿಸರ ಹಾಗೂ ವನ್ಯ ಜೀವಿ ಪ್ರೇಮಿಗಳಿಗೆ ಹೇಳಿ ಮಾಡಿಸಿದ ತಾಣವಾಗಿದೆ. ಇಲ್ಲಿ ಅಪರೂಪದ ಕೃಷ್ಣಮೃಗಗಳು, ತೋಳ, ಮುಂಗುಸಿ, ಕಾಡು ಹಂದಿ, ಮುಳ್ಳುಹಂದಿ, ನವಿಲು ಮುಂತಾದ ಪ್ರಾಣಿ ಪಕ್ಷಿಗಳಿಗೆ ಸಂರಕ್ಷಿತ ಪ್ರದೇಶವಾಗಿದೆ. ದೇಶ, ವಿದೇಶಿ ಪ್ರವಾಸಿಗರು ಇಲ್ಲಿಗೆ ಆಗಮಿಸುವರು. ಕೃಷ್ಣಮೃಗ ವನ್ಯಜೀವಿಧಾಮದ ವೀಕ್ಷಣೆಗಾಗಿ ಅಭಯಾರಣ್ಯ ವ್ಯಾಪ್ತಿಯಲ್ಲಿ "ನೇಚರ್ ಕ್ಯಾಂಪ್" ನಿರ್ಮಾಣ ಮಾಡಲಾಗಿದೆ.

ಹೆದ್ದಾರಿ ಮಾರ್ಗದಲ್ಲಿರುವ ಕರ್ನಾಟಕದ ಹುಲಿ ಎಂದೆ ಖ್ಯಾತಿ ಪಡೆದ ದಂಡಿ ಯಾತ್ರೆಯಲ್ಲಿ ಭಾಗವಹಿಸಿದ ಕರ್ನಾಟಕದ ಏಕೈಕ ಸ್ವಾತಂತ್ರ್ಯ ಯೋಧ ಮೈಲಾರ ಮಹದೇವ ಅವರ ಜನ್ಮಸ್ಥಳವಾದ ಮೊಟೇಬೆನ್ನೂರಿನಲ್ಲಿ ಮೈಲಾರ ಮಹದೇವ ಸ್ಮಾರಕವನ್ನು ವೀಕ್ಷಿಸಬಹುದಾಗಿದೆ. ಮುಂದೆ ಮೂರು ಕಿ.ಮೀ. ಕ್ರಮಿಸಿದರೆ ಅರಣ್ಯ ಇಲಾಖೆ ನಿರ್ಮಿತ "ಸಾಲುಮರದ ತಿಮ್ಮಕ್ಕ" ಉದ್ಯಾನವನ ವೀಕ್ಷಣೆ ಮಾಡಬಹುದು.

"ಏಳು ಕೋಟಿ ಏಳು ಕೋಟಿ.." ಎಂಬ ಘೋಷಣೆಯೊಂದಿಗೆ ಸ್ತುತಿಸಲ್ಪಡುವ "ದೇವರಗುಡ್ಡ ಶ್ರೀ ಮಾಲತೇಶ" ಪ್ರಖ್ಯಾತ ಧಾರ್ಮಿಕ ಸ್ಥಳವಾಗಿದೆ. ಪ್ರತಿ ವರ್ಷ ದೊಡ್ಡಪ್ರಮಾಣದಲ್ಲಿ ಜಾತ್ರೆ ನಡೆಯುತ್ತದೆ. ಇಲ್ಲಿನ "ಕಾರ್ಣಿಕ" ನಾಡಿಗೆ ಪ್ರಸಿದ್ಧವಾಗಿದೆ. ತುಂಗಭದ್ರಾ ನದಿ ತಟದಲ್ಲಿರುವ ಮತ್ತೊಂದು ಪುಣ್ಯಕ್ಷೇತ್ರ ಚೌಡದಾನಪುರ. ಶಿವಶರಣ ಅಂಬಿಗರ ಚೌಡಯ್ಯ ನೆಲಸಿ ಲಿಂಗೈಕ್ಯ ಸ್ಥಳವಾದ ಈ ಕ್ಷೇತ್ರದಲ್ಲಿರುವ ದೇವಾಲಯಗಳ ಶಿಲ್ಪಗಳ ಕೆತ್ತನೆ ಪ್ರವಾಸಿಗರ ಗಮನ ಸೆಳೆಯುತ್ತವೆ. ರಾಣಿಬೆನ್ನೂರು ಪಟ್ಟಣದಿಂದ 27ಕಿ.ಮಿ. ಕ್ರಮಿಸಿದರೆ ತುಂಗಾಭದ್ರಾ ದಂಡೆಯಲ್ಲಿರುವ ಹರಹಳ್ಳಿಯಲ್ಲಿ ಹೊಯ್ಸಳ ಶೈಲಿಯ ನಿರ್ಮಾಣದ ಕಲ್ಯಾಣ ಚಾಲುಕ್ಯರ ಕಾಲದ "ಈಶ್ವರ ದೇವಸ್ಥಾನ" ಪ್ರವಾಸಿಗರ ಗಮನ ಸೆಳೆಯುತ್ತದೆ.

ಹಿರೇಕೇರೂರಿನಿಂದ ಸುಮಾರು 2 ಕಿ.ಮಿ, ದೂರದಲ್ಲಿರುವ ಶ್ರೀ ದುರ್ಗಾದೇವಿ ಕೆರೆ ಸುಮಾರು ಎರಡು ಸಾವಿರ ವರ್ಷದಷ್ಟು ಹಳೆಯದಾಗಿದೆ. ಈ ಕೆರೆಯ ವೀಕ್ಷಣೆಯೇ ಒಂದು ಅವರ್ಣನೀಯ ಅನುಭವ. ಕೆರೆಯ ದಂಡೆಯ ಮೇಲೆ ಶ್ರೀ ದುರ್ಗಾದೇವಿ ದೇವಾಲಯವಿದ್ದು, ಇದರ ಪ್ರವೇಶದ್ವಾರದ ಮೇಲೆ ಮಹಿಷನ ಸಂಹಾರದಲ್ಲಿ ನಿರತಳಾಗಿರುವ ಸಿಂಹವಾಹಿನಿ ಅಷ್ಟಾದಶಭುಜ ಮಹಿಷಮರ್ಧಿನಿಯ ಆಧುನಿಕ ಶಿಲ್ಪ ಅತ್ಯಾಕರ್ಷಕವಾಗಿದೆ.

ರಟ್ಟಿಹಳ್ಳಿಯಿಂದ ಹತ್ತಿರದಲ್ಲಿಯೇ ಇರುವ "ಮಗದ



Download From : www.kpscvaani.com

ಮಾಸೂರು" ಕೆರೆ ಆಕರ್ಷಕ ನಿಸರ್ಗ ಪ್ರವಾಸಿ ತಾಣವಾಗಿದೆ. ಮಾಸೂರು ಕೆರೆ, ಕೆಂಚಮ್ಮನ ಕೆರೆ ಮುಂತಾದ ಹೆಸರಿನಲ್ಲಿ ಕರೆಯಲ್ಪಡುವ ಈ ಕೆರೆ ಸುಮಾರು ಹತ್ತು ಸಾವಿರ ಎಕರೆ ಪ್ರದೇಶಕ್ಕೆ ನೀರು ಒದಗಿಸುತ್ತದೆ. ಕುಮುದ್ವತಿ ನದಿಯಿಂದಾಗಿ ರೂಪಗೊಂಡಿರುವ ಈ ಕೆರೆ ಮಳೆಗಾಲದಲ್ಲಿ ಮೈದುಂಬಿ ಜಲಪಾತ ಮಾದರಿಯಲ್ಲಿ ಬೀಳುವಾಗ ಅದರ ವೈಭವ ನೋಡಲು ರಮಣೀಯವಾಗಿರುತ್ತದೆ. ಕೆರೆಯ ಮಧ್ಯದಲ್ಲಿ ಹಾಗೂ ಕೆರೆಯ ದಡದಲ್ಲಿ ಈ ಕೆರೆಯ ನಿರ್ಮಾಣಕ್ಕಾಗಿ ಬಲಿದಾನಗೈದರು ಎಂಬ ಐತಿಹ್ಯ ಇರುವ ಕೆಂಚಮ್ಮನ ದೇವಸ್ಥಾನವಿದೆ.

ಹಿರೇಕೆರೂರಿನಿಂದ ಸುಮಾರು 9 ಕಿ.ಮೀ ದೂರದಲ್ಲಿರುವ ಕಲ್ಯಾಣ ಚಾಲುಕ್ಯರ ಕಾಲದಲ್ಲಿ ನಿರ್ಮಿತವಾಗಿರುವ ಸಾತೇನಹಳ್ಳಿ ಗ್ರಾಮದ ಶ್ರೀ ಶಾಂತೇಶ ದೇವಾಲಯ ವಿಜಯನಗರ ಕಾಲದ ಹನುಮಂತನ ವಿಗ್ರಹ ಪೀಠಸ್ಥ ಚತುರ್ಮುಖ ಬ್ರಹ್ಮಶಿರ ಮೂರ್ತಿ ಪ್ರವಾಸಿಗರ ಗಮನ ಸೆಳೆಯುತ್ತದೆ.

**ರಟ್ಟಿಹಳ್ಳಿ ಶ್ರೀ ಕದಂಬೇಶ್ವರ ದೇವಸ್ಥಾನ:** ಮಲೆನಾಡಿನ ಅಂಚಿನಲ್ಲಿ ಕುಮುದ್ವತಿ ನದಿಯ ದಡದಲ್ಲಿರುವ ರಟ್ಟಿಹಳ್ಳಿ ಪಟ್ಟಣ ಹಿಂದೆ ನೂರುಂಬಾಡ ನಾಡಿನ ರಾಜಧಾನಿಯಾಗಿತ್ತು. ಇಲ್ಲಿಯ ಕದಂಬೇಶ್ವರ ದೇವಾಲಯವು ಚಾಲುಕ್ಯ ಶೈಲಿಯ ಪರಿಪೂರ್ಣ ಕಟ್ಟಡವಾಗಿದೆ.

ಅಬಲೂರು ಸರ್ವಜ್ಞ ಜನ್ಮ ತಾಣ. ಹಿರೇಕೇರೂರು ಪಟ್ಟಣದಿಂದ ನಾಲ್ಕು ಕಿ.ಮಿ. ದೂರದಲ್ಲಿನ ಅಬಲೂರ ಪ್ರಾಚೀನ ಕಾಲದಲ್ಲಿ ಶೈವ ಹಾಗೂ ಜೈನರ ಪ್ರಮುಖ ಕೇಂದ್ರವಾಗಿದ್ದು, ಹಲವು ದೇವಾಲಯಗಳು ಗಮನ ಸೆಳೆಯುತ್ತವೆ.



"ತ್ರಿಪದಿ ಸಾಹಿತ್ಯ ಕವಿ ಸರ್ವಜ್ಞ" ನೆಲೆಸಿದ್ದ ಊರು ಎಂಬ ಪ್ರತೀತಿ ಇದೆ. ಕ್ರಿ. ಶ. 16 ನೇ ಶತಮಾನದಲ್ಲಿ ಜೀವಿಸಿದ್ದ ಈ ಕವಿಯ 2000 ಕ್ಕೂ ಹೆಚ್ಚಿನ ತ್ರಿಪದಿಗಳು ಸರಳ ಭಾಷೆಯಲ್ಲಿ ಅಘಾದವಾದ ಜ್ಞಾನವನ್ನು ಜನರಿಗೆ ತಲುಪಿಸಿದ ಕವಿಯ ಜನ್ಮಭೂಮಿ ವೀಕ್ಷಣೆ ಮಾಡಬಹುದು.

**ಹೆಗ್ಗೆರೆ ಕೆರೆ:** ಹಾವೇರಿ ಪಟ್ಟಣದಿಂದ 2.5 ಕಿ.ಮಿ. ದೂರದಲ್ಲಿರುವ ಹೆಗ್ಗೆರೆ ಕೆರೆಗೆ ಪ್ರಾಚೀನ ಶಾಸನವೊಂದರಲ್ಲಿ ನಲ್ಲಹಳಕೆರೆ ಎಂದು ಕೂಡ ಕರೆಯಲಾಗಿದೆ. ಹೆಗ್ಗೆರೆ ಕೆರೆ ವನಭೋಜನ, ವಿಹಾರಗಳಿಗೆ ಉತ್ತಮ ತಾಣವಾಗಿದೆ. ಸೆಪ್ಟೆಂಬರ್‌ನಿಂದ ಡಿಸೆಂಬರ್‌ವರೆಗೆ ದೇಶ ವಿದೇಶದಿಂದ ಅಪರೂಪದ ವಲಸೆ ಹಕ್ಕಿಗಳು ಇಲ್ಲಿ ನೆಲೆ ನಿಲ್ಲುತ್ತವೆ. ಪ್ರವಾಸಿಗರನ್ನು ಆಕರ್ಷಿಸುತ್ತವೆ.

ಹಾವೇರಿ ಪಟ್ಟಣದಲ್ಲಿ ಪಾರಂಪರಿಕ ಸಂರಕ್ಷಿತ "ಪುರಸಿದ್ದೇಶ್ವರ" ದೇವಾಲಯ ಅದ್ಭುತ ವಾಸ್ತುಶಿಲ್ಪ ಒಳಗೊಂಡಿದೆ. 'ದ್ರಾವಿಡ ಶೈಲಿಯಲ್ಲಿದ್ದು ಸುಂದರವಾದ ಕೆತ್ತನೆಯ ಹಲವು ದೇವಾಲಯಗಳು ಈ ಸಂಕೀರ್ಣದಲ್ಲಿ ಪ್ರವಾಸಿಗರಿಗೆ ಮುದನೀಡುತ್ತದೆ. ಸಮಯವಿದ್ದವರಿಗೆ ಪಟ್ಟಣದ ಯಾಲಕ್ಕಿ ಓಣಿಯಲ್ಲಿ ದೇಶ – ವಿದೇಶಗಳಿಗೆ ರಫ್ತಾಗುವ "ಏಲಕ್ಕಿ ಮಾಲೆ" ಖರೀದಿಸಬಹುದು.

**ಸಂಗಮ ಸ್ಥಳ :** ವರದಾ ಹಾಗೂ ತುಂಗಾ ನದಿಗಳ ಸಂಗಮ ಸ್ಥಳವಾದ ಗಳಗನಾಥ ಗ್ರಾಮ ಹಾವೇರಿಯ ಸಮೀಪದಲ್ಲಿದೆ. ನದಿಯ ದಂಡೆಯ ಮೇಲಿರುವ ಶ್ರೀ ಗಳಗೇಶ್ವರ ದೇವಸ್ಥಾನ ವಿಶಾಲವಾಗಿದ್ದು ಸುಂದರ ಶಿಲಾವೈಭವದಿಂದ ಕೂಡಿದೆ. ಪ್ರವಾಸಿಗರ ಆಕರ್ಷಣೀಯ ತಾಣವಾಗಿದೆ.

**ಕದರಮಂಡಲಗಿ ಶ್ರೀ ಆಂಜನೇಯ ದೇವಸ್ಥಾನ:** ಬ್ಯಾಡಗಿ ಪಟ್ಟಣದಿಂದ ಸಮೀಪವಿರುವ ಕದರಮಂಡಲಗಿ ಗ್ರಾಮದಲ್ಲಿ ಪ್ರಸಿದ್ಧ ಆಂಜನೇಯನ ಕ್ಷೇತ್ರವಾಗಿದೆ. ಕದರಮಂಡಲಗಿಯ ಕಾಂತೇಶ ಎಂದೇ ಪ್ರಸಿದ್ಧವಾಗಿರುವ ಇಲ್ಲಿನ ಶ್ರೀ ಆಂಜನೇಯ, ಭಕ್ತಾದಿಗಳ ಇಷ್ಟಾರ್ಥ ಪೂರೈಸುವ ದೇವನಾಗಿದ್ದಾನೆ. ಪ್ರತಿ ಶನಿವಾರದಂದು ಭಕ್ತರ ದಂಡೇ ಇಲ್ಲಿಗೆ ಹರಿದು ಬರುತ್ತದೆ. ಹತ್ತಿರದಲ್ಲಿಯೇ ತಿಮ್ಮಪ್ಪನ ದೇವಸ್ಥಾನವಿದ್ದು ಕನಕದಾಸರು ಈ ದೇವಸ್ಥಾನದಲ್ಲಿದ್ದು "ಮೋಹನತರಂಗಿಣಿ" ರಚಿಸಿದರೆಂದು










Download From : www.kpscvaani.com





ಪ್ರತೀತಿ ಇದೆ. ಇದೇ ಊರಿನ ಮಧ್ಯದಲ್ಲಿರುವ ಲಕ್ಷ್ಮೀನರಸಿಂಹ ದೇವಾಲಯ ಸಂಕೀರ್ಣದಲ್ಲಿ ರಾಷ್ಟ್ರಕೂಟ ಹಾಗೂ ಚಾಳುಕ್ಯರ ದೇವಾಲಯಗಳ ಅವಶೇಷಗಳಿವೆ. ಈ ದೇವಾಲಯದ ಎಡಪಕ್ಕಕ್ಕೆ ಆದಿಕೇಶವನ ದೇವಸ್ಥಾನವಿದ್ದು ಆದಿಕೇಶವನ ವಿಗ್ರಹವನ್ನು ಕನಕದಾಸರು ಬಾಡದಿಂದ ತಂದರೆಂದು ಪ್ರತೀತಿ ಇದೆ. ಇದು ಸುಮಾರು ಒಂದುವರೆ ಅಡಿ ಎತ್ತರವಿದ್ದು, ಶಂಖ ಚಕ್ರ, ಗದಾ ಪದ್ಮಧಾರಿಯಾಗಿದೆ. 1962ರಲ್ಲಿ ಒಂದು ಕನಕ ಬಿಂಬವನ್ನು ಇಲ್ಲಿ ಇರಿಸಲಾಗಿದೆ.

**ಕಾಗಿನೆಲೆ ಶ್ರೀ ಕನಕ ಗುರುಪೀಠ:** ಕಾಗಿನೆಲೆ ದಾಸಶ್ರೇಷ್ಠ ಶ್ರೀ ಕನಕದಾಸರ ಮುಕ್ತಿ ಕ್ಷೇತ್ರ, ಅವರ ಇಷ್ಟ ದೈವ ಶ್ರೀ ಆದಿಕೇಶವನ ಗ್ರಾಮ, ಕನಕದಾಸರ ಬೃಂದಾವನ ಹಾಗೂ ಶ್ರೀ ಕನಕಗುರು ಪೀಠವಲ್ಲದೇ ಈ ಗ್ರಾಮದಲ್ಲಿ ಅನೇಕ ಪ್ರಾಚೀನ ದೇವಾಲಯಗಳಿವೆ. 1989ರಲ್ಲಿ ಕನಕ ಗುರುಪೀಠದ ಭೂಮಿಪೂಜೆ ನೆರವೇರಿತು. 1992ರಲ್ಲಿ ಪೂಜ್ಯಶ್ರೀ ಬೀರೇಂದ್ರ ಕೇಶವ ತಾರಕಾನಂದಪುರಿ ಮಹಾಸ್ವಾಮಿಗಳು ಗುರುಪೀಠವನ್ನು ವಿದ್ಯುಕ್ತವಾಗಿ ಅಲಂಕರಿಸಿದರು. ಶ್ರೀ ಗುರುಪೀಠ ಅನೇಕ ಧಾರ್ಮಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಚಟುವಟಿಕೆಗಳನ್ನು ನಡೆಸುತ್ತದೆ. ಊರ ಕೆರೆಯ ಬದಿಯಲ್ಲಿದ್ದ ಕನಕದಾಸರ ಬೃಂದಾವನವನ್ನು ಪುನರೂಪಿಸಿ ಕನಕದಾಸರ ವಿಗ್ರಹವನ್ನು 1982ರಲ್ಲಿ ಸ್ಥಾಪಿಸಲಾಗಿದೆ.

**ಕನಕ ಥೀಮ್ ಪಾರ್ಕ್:** ಕಾಗಿನೆಲೆಯಿಂದ ಸುಮಾರು 2 ಕಿ.ಮೀ. ದೂರದಲ್ಲಿ ವಿಶಾಲವಾದ ಕನಕಥೀಮ್ ಪಾರ್ಕ್‌ಅನ್ನು ಅಭಿವೃದ್ಧಿಪಡಿಸಲಾಗಿದೆ. 138 ಎಕರೆ ಪ್ರದೇಶದಲ್ಲಿ ನಿರ್ಮಾಣಗೊಂಡಿರುವ ಈ ಥೀಮ್ ಪಾರ್ಕ್‌ನಲ್ಲಿ ಕನಕದಾಸರ ಜೀವನದ ಘಟನಾವಳಿಗಳ ಆಧಾರದಲ್ಲಿ ಶಿಲ್ಪಗಳನ್ನು ನಿರ್ಮಿಸುವ ಮೂಲಕ ಕನಕದಾಸರ ವಿಚಾರಗಳನ್ನು ಪ್ರಚಾರ ಪಡಿಸಲಾಗುತ್ತಿದೆ. ಇದಲ್ಲದೆ ಶಿಲ್ಪವನ, ಹುಲ್ಲುಹಾಸು, ತಾಳೆವನ, ಸಂಗೀತ ಕಾರಂಜಿಗಳು ನಾಡಿನ ಪ್ರವಾಸಿಗರ ನೆಚ್ಚಿನ ತಾಣಗಳಾಗಿವೆ.

**ಕದಂಬರ ರಾಜಧಾನಿ :** ಧರ್ಮಾ ನದಿಯ ದಂಡೆಯ ಮೇಲಿರುವ ಹಾನಗಲ್ಲು ಕಲ್ಯಾಣದ ಚಾಲುಕ್ಯರ ಸಾಮಂತರಾದ ಹಾನಗಲ್ಲು ಕದಂಬರ ರಾಜಧಾನಿಯಾಗಿತ್ತು. ಪ್ರಾಚೀನ ಶಾಸನಗಳಲ್ಲಿ 'ಪಾನುಂಗಲ್' ಎಂದು ಕರೆಯಲಾಗಿದೆ. ಮಹಾಭಾರತ ಕಾಲದ ವಿರಾಟನಗರ ಎಂಬ ಪ್ರತೀತಿ ಇದೆ. ಈ ಪೌರಾಣಿಕ ಐತಿಹ್ಯಕ್ಕೆ ಸಾಕ್ಷಿಯೆಂದು ಕೀಚಕನ ಗರಡಿಮನೆ, ಕುಂತಿ ದಿಬ್ಬ ಮುಂತಾದ ಕುರುಹುಗಳು ಇಲ್ಲಿವೆ.

**ಶ್ರೀ ತಾರಕೇಶ್ವರ ದೇವಸ್ಥಾನ:** ಶ್ರೀ ತಾರಕೇಶ್ವರ ದೇವಾಲಯವು ಒಂದು ಪ್ರಾಚೀನ ದೇವಾಯಲವಾಗಿದ್ದು, ಸುಂದರ ಕೆತ್ತನೆಯುಳ್ಳ ಆಕರ್ಷಕ ವಾಸ್ತುಶಿಲ್ಪದ ರಚನೆಯಾಗಿದೆ. ದೇವಸ್ಥಾನದ ಹೊರಮೈಯಲ್ಲಿ ರಾಮಾಯಣ, ಮಹಾಭಾರತ ಹಾಗೂ ಶ್ರೀ ಕೃಷ್ಣನ ಜೀವನ ವೃತ್ತಾಂತ ಕಥೆಯನ್ನು ಸಾರುವ ಚಿತ್ರಗಳನ್ನು ಕೆತ್ತಲಾಗಿದೆ. ಚಾಲುಕ್ಯ ಶೈಲಿಯಲ್ಲಿ ನಿರ್ಮಾಣಮಾಡಿರುವ ಇಲ್ಲಿನ ಹಲವು ಅಪರೂಪದ ದೇವಾಲಯಗಳು ಪ್ರವಾಸಿಗರನ್ನು ಆಕರ್ಷಿಸುತ್ತವೆ.

**ಬಂಕಾಪುರ ಕೋಟೆ:** ರಾಷ್ಟ್ರಕೂಟರ ಚಕ್ರವರ್ತಿ ನೃಪತುಂಗನ ಗಣ್ಯ ಸೇನಾನಿ ಬಂಕೆಯರಸನ ಹೆಸರಿನಿಂದಾಗಿ ಈ ಊರಿಗೆ ಬಂಕಾಪುರ ಎಂಬ ಹೆಸರು ಬಂದಿತು ಎಂದು ಇತಿಹಾಸದಿಂದ ತಿಳಿದು ಬರುತ್ತದೆ. ಬಯಲುಸೀಮೆ ಮತ್ತು ಕರಾವಳಿ ಭಾಗಕ್ಕೆ ಕೊಂಡಿಯಂತಿದ್ದ ಈ ಆಯಕಟ್ಟಿನ ಪಟ್ಟಣ, ರಾಷ್ಟ್ರಕೂಟರಿಂದ ಹಿಡಿದು ಬ್ರಿಟೀಷರವರೆಗೆ ಎಲ್ಲ ಪ್ರಮುಖ ರಾಜಶಾಹಿಗಳ ಆಳ್ವಿಕೆಗೆ ಒಳಪಟ್ಟಿದೆ. ಇಲ್ಲಿನ ಪಾಳುಬಿದ್ದ ಕೋಟೆ ಈ ಎಲ್ಲ ಇತಿಹಾಸಕ್ಕೆ ಸಾಕ್ಷಿಯಾಗಿದೆ.

ಕೋಟೆಯಲ್ಲಿನ ಶ್ರೀ ನಗರೇಶ್ವರ ದೇವಸ್ಥಾನ ವಿಶಾಲವಾದ ಚಾಲುಕ್ಯ ಶೈಲಿಯ ಭವ್ಯ ದೇವಾಲಯವಾಗಿದೆ. ಬೃಹದಾಕಾರದ ಕಂಬಗಳಿಂದ ನಿರ್ಮಿತವಾಗಿರುವ ಅರವತ್ತು ಕಂಬಗಳ ದೇವಾಲಯ ಎಂದೇ ಪ್ರಸಿದ್ಧವಾಗಿದೆ. ಪ್ರತಿಯೊಂದು ಭಾಗದಲ್ಲೂ ಅತ್ಯಾಕರ್ಷಕವಾದ ಕೆತ್ತನೆ ನೋಡಬಹುದಾಗಿದೆ.

ಬಂಕಾಪುರ ನವಿಲು ಸಂರಕ್ಷಿತ ಧಾಮ: ದೇಶದಲ್ಲಿಯೇ ವಿರಳ ಎನ್ನಬಹುದಾದ ರಾಷ್ಟ್ರಪಕ್ಷಿ ನವಿಲು ಸಂರಕ್ಷಿತ ಧಾಮ ಬಂಕಾಪುರದಲ್ಲಿ ಇದೆ. ಇಲ್ಲಿ ನಿತ್ಯ ನೂರಾರು ಮಯೂರಗಳು(ನವಿಲುಗಳು) ಸ್ವಚ್ಛಂದವಾಗಿ ನಲಿದಾಡುವ ದೃಶ್ಯವನ್ನು ಕಾಣಬಹುದು.

ಇದೇ ಆವರಣದಲ್ಲಿರುವ ಸರಕಾರಿ ಗೋರಕ್ಷಣಾ ಕೇಂದ್ರ ಕಿಲಾರಿ ಹಸುಗಳ ಸಂವರ್ಧನಾ ಕೇಂದ್ರ ಪ್ರಮುಖ ಕೇಂದ್ರವಾಗಿದ್ದು ಗೋವು ಹಾಗೂ ಕೃಷಿ ಆಸಕ್ತರಿಗೆ ನೋಡಲೇಬೇಕಾದ ಕೇಂದ್ರವಾಗಿದೆ. ಇಲ್ಲಿಯೇ ಪಕ್ಕದಲ್ಲಿ ಮೊಲಗಳ ತಳಿ ಅಭಿವೃದ್ಧಿ ಕೇಂದ್ರ ಕೂಡ ಇದೆ. ಇಲ್ಲಿ ಅಮೇರಿಕಾದ ಅಂಬೂರ್, ರಷ್ಯಾದ ಚಿಂಚಿರ ಮುಂತಾದ ಮೊಲದ ತಳಿಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

**ಶಿಶುನಾಳ :** ಕರ್ನಾಟಕದ ಕಬೀರನೆಂದೇ ಖ್ಯಾತರಾದ ಶಿಶುನಾಳ ಷರೀಫರ ಊರು. ಅವರ ಮನೆ ಹಾಗೂ ಸಮಾಧಿಗಳೆರಡು ಇಲ್ಲಿವೆ. ಷರೀಫರ ಸಮಾಧಿ ಹಾಗೂ



Download From : www.kpscvaani.com

ಅವರ ಗುರುಗಳಾದ ಕಳಸದ ಗೋವಿಂದ ಭಟ್ಟರ ಚಿತಾಭಸ್ಮವು ಅಕ್ಕಪಕ್ಕದಲ್ಲಿದ್ದು ನಿತ್ಯವು ನೂರಾರು ಭಕ್ತರು ಇಲ್ಲಿಗೆ ಆಗಮಿಸಿ ಈ ಶ್ರೇಷ್ಠ ಗುರು ಶಿಷ್ಯರಿಗೆ ಶಿರಬಾಗಿ ನಮಿಸುತ್ತಾರೆ. ಷರೀಫರು ತಮ್ಮ ಲಾವಣಿಗಳಲ್ಲಿ ಬಳಸುತ್ತಿದ್ದ "ಶಿಶುನಾಳಧೀಶ" ಶಿಶುನಾಳ ಗ್ರಾಮದ ಆಧಿದೇವತೆಯಾಗಿದೆ. ಫಾಲ್ಗುಣ ಮಾಸದ ದಶಮಿಯಿಂದ ಎರಡು ದಿನಗಳ ಕಾಲ ಇಲ್ಲಿ ದೊಡ್ಡ ಜಾತ್ರೆ ನಡೆಯುತ್ತದೆ.

**ಬಾಡ ಸಂತ ಕನಕದಾಸರ ಅರಮನೆ:** ಬಂಕಾಪುರದ ಅನತಿ ದೂರದಲ್ಲಿರುವ ಬಾಡ ಗ್ರಾಮ ದಾಸಶ್ರೇಷ್ಠ ಶ್ರೀ ಕನಕದಾಸರ ಹುಟ್ಟೂರು. ಹಿಂದೆ ಇದ್ದ ಕಸಕದಾಸರ ಚಿಕ್ಕ ಸ್ಮಾರಕಕ್ಕೆ ಪೂರಕವಾಗಿ ಇತ್ತೀಚಿಗೆ ಇಲ್ಲಿ ಕನಕದಾಸರ ಅರಮನೆಯನ್ನು ನಿರ್ಮಿಸಲಾಗಿದ್ದು, ಕನಕದಾಸರ ಜೀವನ ವೃತ್ತಾಂತವನ್ನು ಚಿತ್ರಗಳ ಮೂಲಕ ಇಲ್ಲಿ ತೆರೆದಿಡಲಾಗಿದೆ. ಅಲ್ಲದೇ ಅತ್ಯಾಕರ್ಷಕ ಕಾರಂಜಿ, ಹುಲ್ಲುಹಾಸು, ವೀಕ್ಷಣೆ ಗೋಪುರ ಮುಂತಾದವುಗಳು ಈ ಅರಮನೆಯ ಸೊಬಗನ್ನು ಹೆಚ್ಚಿಸಿವೆ.

**ಉತ್ಸವ ರಾಕ್ ಗಾರ್ಡನ್:** ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಗೋಟಗೋಡಿಯ ಉತ್ಸವ ರಾಕ್ ಗಾರ್ಡನ್ ಹೆಸರಾಂತ ಕಲಾವಿದರಾದ ಪ್ರೊ. ಟಿ. ಬಿ. ಸೊಲಬಕ್ಕನವರ ಅವರ ಕನಸಿನ ಕೂಸು ಹಾಗೂ ಪ್ರಯೋಗಶಾಲೆ. ಶಿಲ್ಪಕಲೆ ಹಾಗೂ ಗ್ರಾಮೀಣ ಸೊಗಡಿನ ಉತ್ತಮ ಪ್ರದರ್ಶನದ ತಾಣವಾಗಿರುವ ರಾಕ್‌ಗಾರ್ಡನ್ ಈಗಾಗಲೇ 8 ವಿಶ್ವ ದಾಖಲೆಗಳನ್ನು ತನ್ನ ಮಡಿಲಿಗಿರಿಸಿಕೊಂಡಿದೆ. ಹಳ್ಳಿ ಜೀವನ, ಅಲ್ಲಿಯ ವಿವಿಧ ವೃತ್ತಿಗಳು, ಆಯಾ ವೃತ್ತಿಯವರ ಮನೆಗಳು, ಪಶು ಸಂಗೋಪನೆ, ಜಾತ್ರೆ, ಹಬ್ಬ ಸಂತೆ–ಹೀಗೆ ಗ್ರಾಮ ಜೀವನದ ಪ್ರತಿಯೊಂದು ಆಯಾಮವನ್ನು ಕಣ್ಣಿಗೆ ಕಟ್ಟುವಂತೆ ಶಿಲ್ಪಕಲೆಯ ಮೂಲಕ ಇಲ್ಲಿ ಪ್ರದರ್ಶಿಸಲಾಗಿದೆ. ಉತ್ತರ ಕರ್ನಾಟಕ ಊಟ ತಿಂಡಿಯ ಉಪಹಾರ ಗೃಹ, ದೋಣಿ ವಿಹಾರ ಮುಂತಾದ ಸೌಲಭ್ಯಗಳನ್ನು ಹೊಂದಿರುವ ಉತ್ಸವ ರಾಕ್ ಗಾರ್ಡನ್ ಪ್ರವಾಸೋದ್ಯಮ ಕ್ಷೇತ್ರದ ಒಂದು ವಿಶಿಷ್ಟ ಪ್ರಯೋಗವಾಗಿದ್ದು ದೇಶ ವಿದೇಶಿ ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

**ಅಗಡಿ ತೋಟ:** "ಗ್ರಾಮೀಣ ಪ್ರವಾಸೋದ್ಯಮ"ಕ್ಕೆ ಒತ್ತು ನೀಡುವ ಅಗಡಿ ತೋಟ, ಕೃಷಿ, ತೋಟಗಾರಿಕೆ, ಕಿರು ಅರಣ್ಯ ಸೇರಿದಂತೆ ಸಮಗ್ರ ಸಾವಯವ ಕೃಷಿ ಕ್ಷೇತ್ರವಾಗಿದೆ. ಪ್ರವಾಸಿಗರು ಇಲ್ಲಿ ಕೃಷಿ ದರ್ಶನದ ಜೊತೆಯಲ್ಲಿಯೇ ಚಕ್ಕಡಿ ಸವಾರಿ, ಕುದರೆ ಸವಾರಿ ಮುಂತಾದ ಚಟುವಟಿಕೆಗಳನ್ನು ಮಾಡಬಹುದಾಗಿದೆ. ಗೋಲಿ ಸೋಡಾ, ಕಬ್ಬಿನಗಾಣ, ಗ್ರಾಮೀಣ ಆಟ ಮುಂತಾದವುಗಳು ಪ್ರವಾಸಿಗರ ಹಳೆಯ ನೆನಪುಗಳನ್ನು ತಾಜಾ ಮಾಡುತ್ತವೆ. ಶುದ್ಧ ಸಾವಯವ ಉತ್ಪನ್ನಗಳ ಮಾರಾಟ ಮಳಿಗೆ, ದೇಸಿ ತಿನಿಸುಗಳ ಉಪಹಾರ ಕೇಂದ್ರ, ಸಾಂಸ್ಕೃತಿಕ ಕಾರ್ಯಕ್ರಮಗಳು ಇಲ್ಲಿನ ಇತರ ಪ್ರಮುಖ ಆಕರ್ಷಣೆಗಳಾಗಿವೆ. ಕುಟುಂಬದೊಂದಿಗೆ ಕಾಲಕಳೆಯಲು ಅತ್ಯಂತ ಪ್ರಶಾಂತ ತಾಣವಾಗಿದೆ.

**ಕರ್ನಾಟಕ ಜಾನಪದ ವಿಶ್ವವಿದ್ಯಾಲಯ:** ರಾಷ್ಟ್ರೀಯ ಹೆದ್ದಾರಿಗೆ ಹೊಂದಿಕೊಂಡಿರುವ ಗೊಟಗೋಡಿ ಜಾನಪದ ಸಂಸ್ಕೃತಿ, ಬದುಕು ಹಾಗೂ ಸಾಹಿತ್ಯದ ಅಧ್ಯಯನಕ್ಕಾಗಿ ಸ್ಥಾಪಿತವಾದ ವಿಶ್ವವಿದ್ಯಾಲಯವಾಗಿದೆ. ಜಾನಪದ ಅಧ್ಯಯನಕ್ಕಾಗಿ ಸ್ಥಾಪಿತವಾದ ಏಷ್ಯಾ ಖಂಡದಲ್ಲೇ ಏಕೈಕ ವಿವಿ ಇದಾಗಿದೆ. ಗ್ರಾಮೀಣ ವಿಶ್ವಕೋಶ, ಗ್ರಾಮೀಣ ವಸ್ತು ಸಂಗ್ರಹಾಲಯ ಹಾಗೂ ಮಲೆನಾಡ ಶೈಲಿಯಲ್ಲಿ ರೂಪಿತಗೊಂಡಿರುವ ಇಲ್ಲಿಯ ಕಟ್ಟಡಗಳು ಪ್ರವಾಸಿಗರಿಗೆ ಗ್ರಾಮೀಣ ಜೀವನ ಪರಂಪರೆಯ ದರ್ಶನ ಮಾಡಿಸುತ್ತವೆ.

**ಸವಣೂರ ನವಾಬರ ಅರಮನೆ:** ಶಿಗ್ಗಾಂವಿಯಿಂದ ಲಕ್ಷ್ಮೇಶ್ವರ -ಗದಗ ಮಾರ್ಗದಲ್ಲಿ ಬರುವ ಸವಣೂರು ನವಾಬರ ಆಡಳಿತಕ್ಕೊಳಪಟ್ಟ ಪ್ರಮುಖ ಪಟ್ಟಣ. ನವಾಬರ ಅರಮನೆ ಪುನಶ್ಚೇತನಗೊಳಿಸಿ ಆರ್ಟ್‌ಗ್ಯಾಲರಿ ರೂಪಿಸಲಾಗುತ್ತಿದೆ. ಈಗಲು ಕೂಡ ಸವಣೂರು ಪಟ್ಟಣದಲ್ಲಿ ಹಾಗೂ ಸುತ್ತಮುತ್ತಲೂ ನವಾಬಿ ಆಡಳಿತದ ಕುರುಹುಗಳು ನೋಡಲು ಸಿಗುತ್ತವೆ. ನವಾಬರ ಬಂಗ್ಲೆ ಈಗ ಸರಕಾರಿ ಕಚೇರಿಯಾಗಿ ಕಾರ್ಯನಿರ್ವಹಿಸುತ್ತಿದೆ. ಧಾರವಾಡ ಪೇಡಾ, ಬೆಳಗಾವಿ ಕುಂದಾದಂತೆ ಕೂದಲಿನ ಎಸಳನ್ನು ನಾಚಿಸುವ ಅತ್ಯಂತ ಸಣ್ಣ ಎಸಳಿನ ರುಚಿಕರ "ಸವಣೂರಿನ ಖಾರಾ" ಹಾಗೂ "ಕಮ್ಮರಗಟ್ಟಿ" ಜನಪ್ರಿಯ ತಿನಿಸಾಗಿದೆ.

**ದೊಡ್ಡ ಹುಣಸೆ ಮರ:** ಹುಣಸಿಕಟ್ಟೆ ಮಠ ಅಥವಾ ದೊಡ್ಡ ಹುಣಸೆ ಮಠದ ಆವರಣ ತಾಲೂಕಿನ ಪ್ರಮುಖ ಪ್ರವಾಸಿ ತಾಣಗಳಲ್ಲೊಂದು. ನೂರಾರು ವರ್ಷಗಳ ಇತಿಹಾಸವಿರುವ ದೊಡ್ಡ ಕಾಂಡ ಹೊಂದಿದ ಮೂರು ಹುಣಸೆ ಮರಗಳು ಇಲ್ಲಿದ್ದು, ಅರಣ್ಯ ಇಲಾಖೆ ಅವುಗಳ ರಕ್ಷಣೆಗೆ ಸೂಕ್ತ ವ್ಯವಸ್ಥೆ ಮಾಡಿದೆ. ಅಡನ್ ಸೋನಿಯಾ ಡಿಜಿಟಾಚಾಲಿನ್ ಎಂಬ ಶಾಸ್ತ್ರೀಯ ಹೆಸರಿರುವ ಈ ವೃಕ್ಷಗಳು ಬಂಬೀಸಿಯಾ ವೃಕ್ಷ ಕುಟುಂಬಕ್ಕೆ ಸೇರಿವೆ. ವೃಕ್ಷಪ್ರಿಯರ ಕುತೂಹಲದ ಕೇಂದ್ರವಾಗಿದೆ.

**ವಿಷ್ಣು ತೀರ್ಥ:** ಪಟ್ಟಣದ ಹೊರವಲಯದಲ್ಲಿ ಸವಣೂರು ಕೆರೆಯ ದಂಡೆಯಿಂದ ಸುಮಾರು ಒಂದುವರೆ ಕಿ.ಮೀ. ದೂರದಲ್ಲಿದೆ ವಿಷ್ಣು ತೀರ್ಥ, ದ್ವೈತ್ಯ ಪರಂಪರೆಯ ಮಧ್ವಾಚಾರ್ಯರ ಮೂಲ ತತ್ವಗಳನ್ನು ಪ್ರಚಾರಮಾಡಿ ಹಲವು ಮೌಲಿಕ ಕೃತಿಗಳನ್ನು ರಚಿಸಿದ ಯತಿಗಳಾದ ಶ್ರೀ ಸತ್ಯಭೋದತೀರ್ಥರು ಗಂಗೆಯನ್ನು ಆಹ್ವಾನಿಸಿ ನಿರ್ಮಿಸಿದರೆನ್ನಲಾದ ತಟಾಕವನ್ನು ಇದು ಹೊಂದಿದೆ, ಸುಮಾರು 600 ಚದುರಡಿ ವಿಶಾಲವಾದ ಈ ತಟಾಕದ ಸುತ್ತ ಜಗಲಿ ಇದ್ದು ಮುಸ್ಲಿಂ ಶೈಲಿಯ ಕಲ್ಲಿನ ಕಮಾನುಗಳ ಸ್ನಾನಘಟ್ಟವನ್ನು ಹೊಂದಿದೆ. ಇಲ್ಲಿಯೇ ಒಂದು ಚಿಕ್ಕ ದೇವಾಯಲವಿದ್ದು "ಪಾಪವಿನಾಶನ" ಎಂದು ಕರೆಯಲಾಗುವ ಲಿಂಗವಿದೆ. ಇದೊಂದು ಉತ್ತಮವಾದ ಪ್ರಶಾಂತ ವಿಹಾರ ತಾಣ.

ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಯತೇಚ್ಛವಾಗಿ ಧಾರ್ಮಿಕ ಮಠಮಾನ್ಯಗಳು ಕಾಣಬಹುದು. ಅನ್ನ, ಅಕ್ಷರ, ಜ್ಞಾನದ ತ್ರಿವಿಧ ದಾಸೋಹದ ಮೂಲಕ ತನ್ನದೇ ಆದ ವಿಶಿಷ್ಟ ಪರಂಪರೆ ಹೊಂದಿರುವ ಸಾವಿರಾರು ವರ್ಷಗಳ ಇತಿಹಾಸವಿರುವ ಮಠಗಳಿವೆ. ಹಾವೇರಿ ನಗರದಲ್ಲಿರುವ ಹುಕ್ಕೇರಿಮಠ, ಹೊಸಮಠ, ಸಿಂದಗಿಮಠ, ಬಣ್ಣದಮಠ, ಹಾನಗಲ್ ಪಟ್ಟಣದ ಶ್ರೀ ಕುಮಾರಸ್ವಾಮಿ ಮಠ (ವಿರಕ್ತ ಮಠ), ಹೊಸರಿತ್ತಿಯ ಶ್ರೀ ರಾಘವೇಂದ್ರ ಸ್ವಾಮೀಜಿಮಠ, ರಾಣೇಬೆನ್ನೂರು ತಾಲೂಕು ಐರಣಿ ಮಠ ದರ್ಶನ ಮಾಡಬಹುದು.



Download From : www.kpscvaani.com

# ಗೂಳೂರು ಗಣೇಶ
# ಏನಿದರ ವಿಶೇಷ ?

ಡಿ. ಪಿ. ಮುರಳೀಧರ್





Download From : www.kpscvaani.com

**ವಿಶ್ವ ಪೂಜಿತ ಜಗದ್ವಂದ್ಯ ಗಣೇಶ ಎಂದರೆ ವಿಶೇಷ ! ಭಾರತದಲ್ಲಿ ಮಾತ್ರವಲ್ಲದೆ ವಿದೇಶಗಳಲ್ಲಿಯೂ ಗಣಪತಿ ದೇವಾಲಯಗಳಿವೆ. ಅಮೇರಿಕಾ, ಆಸ್ಟ್ರೇಲಿಯಾ, ಇಂಡೋನೇಷ್ಯಾ, ಮಲೇಷಿಯಾ, ಜರ್ಮನಿ ಮತ್ತು ನೆದರ್‌ಲ್ಯಾಂಡ್ ಹೀಗೆ ಹಲವು ದೇಶಗಳಲ್ಲಿ ವಿನಾಯಕನ ದೇವಸ್ಥಾನಗಳಿವೆ.**

**ಭಾರತದಲ್ಲಿ ಮಹಾರಾಷ್ಟ್ರದ ಪುಣೆಯ ಶ್ರೀ ದಗ್ದು ಶೇಟ್ ಗಣಪತಿ ದೇಗುಲ, ರತಂಬೋರ್‌ನ ತ್ರಿನೇತ್ರ ಗಣೇಶ ದೇವಾಲಯ, ತಮಿಳುನಾಡಿನ ತಿರುಚಿಯ ಉಚ್ಚಿ ಪಿಳ್ಳೆಯಾರ್ ಕೋಯಿಲ್, ಕೇರಳದ ಕೊಟ್ಟಾಕರದಲ್ಲಿರುವ ಶ್ರೀ ಮಹಾಗಣಪತಿ ಕ್ಷೇತ್ರಂ ಹೀಗೆ ಹಲವಾರು ಪ್ರಮುಖ ದೇವಾಲಯಗಳು ಭಕ್ತಾದಿಗಳನ್ನು ಆಕರ್ಷಿಸುತ್ತಿವೆ. ಭಾರತದಲ್ಲಿ ಲಕ್ಷಾಂತರ ಗಣಪತಿ ದೇಗುಲಗಳಿವೆ ಎಂದರೆ ಅತಿಶಯೋಕ್ತಿಯಲ್ಲ. ಏಕೆಂದರೆ ವಿದ್ಯಾರ್ಥಿಗಳಿಂದ ವಯೋವೃದ್ಧರವರೆಗೂ ಗಣೇಶನ ಇಷ್ಟಪಡುವವರಿದ್ದಾರೆ, ಪೂಜಿಸುವವರು ಇದ್ದಾರೆ.**

**ಚಿತ್ರ ಬಿಡಿಸಲು ಅತ್ಯಂತ ಸುಲಭ ಈ ಗಣಪ ! ಗಣೇಶನ ರೂಪ ಮತ್ತು ಸ್ವರೂಪವೇ ಆಕರ್ಷಕ. ಭಾರತೀಯರಷ್ಟೇ ಅಲ್ಲ, ವಿದೇಶಿಯರೂ ತಮ್ಮ ಕೊರಳಿಗೆ ಗಣೇಶನ ಡಾಲರ್ ಹಾಕಿಕೊಂಡು ತಿರುಗಾಡುತ್ತಾರೆ. ಗಣೇಶನ ಸ್ತುತಿಸುವ ಹಾಡುಗಳು ಎಲ್ಲಾ ಭಾಷೆಗಳಲ್ಲೂ ಇವೆ. ತಾವು ಈ ಲೇಖನವನ್ನು ಓದಿದರೆ, ಗಣೇಶನ ಲೋಕಕ್ಕೆ ಪ್ರವಾಸ ಹೋಗಿಬಂದ ಅನುಭವ ಆಗುತ್ತದೆ ಎಂಬುದು ನಮ್ಮ ನಂಬಿಕೆ.**

ಭಾರತದಲ್ಲಿ ಹಬ್ಬಗಳು ಎಂದರೆ ಸಂಭ್ರಮ ಮತ್ತು ಸಡಗರ ಮಾತ್ರವಲ್ಲ, ಸಂತೋಷ ಮತ್ತು ಸಂತೃಪ್ತಿಯ ಸಂಕೇತವೂ ಕೂಡಾ ! ನಮ್ಮಲ್ಲಿನ ಹಲವಾರು ಹಬ್ಬಗಳು ಸ್ನೇಹ ಮತ್ತು ಸಂಬಂಧಗಳನ್ನು ಗಟ್ಟಿಗೊಳಿಸಲು, ನವೀಕರಿಸಲು, ಪುನರ್‌ಸ್ಥಾಪಿಸಲು, ಬೆಸೆಯಲು ಹಾಗೂ ಬೆಳೆಸಲು ಮಹತ್ತರ ಪಾತ್ರ ವಹಿಸುತ್ತವೆ.

ಈ ಹಬ್ಬಗಳ ಸಾಲಿನಲ್ಲಿ ಗಣೇಶನ ಹಬ್ಬ ಎಂದೇ ಕರೆಯಲ್ಪಡುವ ಶ್ರೀ ವಿನಾಯಕ ಚತುರ್ಥಿಗೆ ಪ್ರಥಮಾದ್ಯತೆ ಮತ್ತು ಪರಮಾದ್ಯತೆ ಇದೆ. ಹಿಂದೂ ಧರ್ಮದಲ್ಲಿ ಗಣೇಶನಿಗೆ ಅಗ್ರ ಸ್ಥಾನ. ಎಲ್ಲಾ ವ್ರತಗಳನ್ನು ಆಚರಿಸುವಾಗಲೂ, ಎಲ್ಲಾ ರೀತಿಯ ಪೂಜೆಗಳನ್ನು ಮಾಡುವಾಗಲೂ ಶ್ರೀ ಸಿದ್ಧಿ ವಿನಾಯಕನಿಗೆ ಪೂಜೆ ಸಲ್ಲಿಸಿಯೇ ಮುಂದಿನ ಧಾರ್ಮಿಕ ಆಚರಣೆಗೆ ಅಡಿ ಇಡುತ್ತಾರೆ. ವಿದ್ಯಾರಂಭ, ವಿವಾಹ ( ನವ ಜೀವನಾರಂಭ), ಮನೆಯ ಗೃಹ ಪ್ರವೇಶ (ಸ್ವಂತ ಮನೆಯ ವಾಸಕ್ಕೆ ಶುಭಾರಂಭ ) ಅಷ್ಟೇ ಏಕೆ ? ವ್ಯಕ್ತಿಯೊಬ್ಬರು ಸತ್ತಾಗ, ಆತನ ಅಥವಾ ಆಕೆಯ ಪಾರ್ಥಿವ ಶರೀರಕ್ಕೆ ಅಂತ್ಯ ಸಂಸ್ಕಾರದ ವಿಧಿ-ವಿಧಾನ ನಡೆಸುವಾಗಲೂ, ಯುದ್ಧ ಮಾಡುವ ಮುನ್ನ ಹೀಗೆ ಎಲ್ಲಾ ಸಂದರ್ಭಗಳಲ್ಲಿಯೂ ಗಣೇಶನಿಗೆ ಪೂಜೆ ಸಲ್ಲಿಸುವುದು ಸಂಪ್ರದಾಯ ಮತ್ತು ಪರಂಪರೆ.

ಸ್ವಾತಂತ್ರ್ಯ ನನ್ನ ಆಜನ್ಮ ಸಿದ್ಧ ಹಕ್ಕು ಎಂದು ರಣ ಕಹಳೆಯ ಮೊಳಗಿಸಿ, ಸ್ವ-ರಾಜ್ಯ ಮತ್ತು ಸ್ವ-ದೇಶಿ ಚಳವಳಿಯ ಕರೆ ಕೊಟ್ಟ ಲೋಕಮಾನ್ಯ ಬಾಲಗಂಗಾಧರ್ ತಿಲಕ್ ಅವರು ಭಾರತೀಯರಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚಿದ್ದು ಗಣೇಶ ಚತುರ್ಥಿ ಹಬ್ಬದ ಆಚರಣೆಯ



ಮೂಲಕವೇ. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಸಾರ್ವಜನಿಕ ಗಣಪತಿ ಪ್ರತಿಷ್ಠಾಪನೆ ಹಾಗೂ ಪೂಜೆ ಸಲ್ಲಿಸಲು ಅವಕಾಶ ಕಲ್ಪಿಸಿ, ಆಂಗ್ಲರ ಆಡಳಿತಕ್ಕೆ ಅಂತ್ಯ ಕಾಣಿಸಲು ರಸ್ತೆ-ರಸ್ತೆಗಳಲ್ಲಿ ವಿಶೇಷ ವೇದಿಕೆಗಳನ್ನು ಸ್ಥಾಪಿಸಿ, ಇಡೀ ಯುವ ಸಮೂಹವನ್ನು ಒಗ್ಗೂಡಿಸಿದ ಬಾಲಗಂಗಾಧರ್ ತಿಲಕ್ ಅವರ ತಂತ್ರ ಫಲಿಸಿದ್ದು ಇದೀಗ ಇತಿಹಾಸ.

**ಭಾರತದಲ್ಲಿ ಗಣೇಶ !**

ಭಾರತದ ಬಹುತೇಕ ಕಡೆಗಳಲ್ಲಿ ಗಣೇಶನ ಹಬ್ಬ ಅದ್ದೂರಿಯಿಂದ ಆಚರಿಸಲ್ಪಡುತ್ತದೆ. ಸಾರ್ವತ್ರಿಕವಾಗಿ ರಸ್ತೆ-ರಸ್ತೆಗಳಲ್ಲಿ ಗಣೇಶನ ಪ್ರತಿಮೆಗಳನ್ನು ಸ್ಥಾಪಿಸಿ ಸಾಮೂಹಿಕವಾಗಿ ಪೂಜಿಸುವುದು ಗಮನಾರ್ಹ.

ಮಹಾರಾಷ್ಟ್ರದ ರಾಜಧಾನಿ ಮುಂಬೈನ ಪ್ರಭಾದೇವಿ ಪ್ರದೇಶದಲ್ಲಿರುವ ಶ್ರೀ ಸಿದ್ಧಿ ವಿನಾಯಕ ಗಣಪತಿ ಮಂದಿರದಲ್ಲಿ ಕೇವಲ ಹಿಂದೂಗಳಲ್ಲದೇ ಅನ್ಯ ಧರ್ಮೀಯರೂ ಪ್ರಾರ್ಥನೆ ಮತ್ತು ಪೂಜೆಗಳಲ್ಲಿ





Download From : www.kpscvaani.com

ಪಾಲ್ಗೊಳ್ಳುತ್ತಾರೆ ಎಂಬುದು ವಿಶೇಷ. ಏಕ ಕಾಲಕ್ಕೆ ಎರಡು ಲಕ್ಷ ಭಕ್ತಾಧಿಗಳು ಗಣೇಶ ಪೂಜೆಯನ್ನು ನೋಡಲು ಅವಕಾಶ ಇಲ್ಲಿದೆ.

ಅಲ್ಲದೆ, ಈ ಗಣೇಶ ಮಂದಿರದ ಪ್ರಾಂಗಣದಲ್ಲಿ ಮಾನವ ಗಾತ್ರದ ಆರು ಮೂಷಕಗಳಿದ್ದು, ಬೆಳ್ಳಿ ಕವಚಗಳಿಂದ ಹೊದಿಸಲಾದ ಈ ಮೂಷಕಗಳ ಕಿವಿಯಲ್ಲಿ ಭಕ್ತಾಧಿಗಳು ತಮ್ಮ ಕಷ್ಟಗಳನ್ನು ಹೇಳಿಕೊಂಡು ಮನಃಶಾಂತಿ ಪಡೆಯುತ್ತಾರೆ. ತಮಗೆ ಒಳಿತು ಮಾಡುವಂತೆ ಮೂಷಕನ ಮೂಲಕ ಗಣೇಶನಿಗೆ ಬೇಡಿಕೆ ಇಡುತ್ತಾರೆ.

ತಮಿಳುನಾಡಿನ ಶಿವಗಂಗಾ ಜಿಲ್ಲೆಯ ತಿರುಪತ್ತೂರು ತಾಲ್ಲೂಕಿನ ಪಿಳ್ಳೆಯಾರ್ ಪಟ್ಟಿಯ ಪಿಳ್ಳೆಯಾರ್ ಅಥವಾ ಕರ್ಪಗ ವಿನಾಯಕರ್ ದೇವಾಲಯವು ಏಳನೇ ಶತಮಾನದ್ದು. ಕುಳಿತಿರುವ ಭಂಗಿಯಲ್ಲಿ ಆರು ಅಡಿ ಎತ್ತರದ ಈ ವಿನಾಯಕ ವಿಗ್ರಹಕ್ಕೆ ಚಿನ್ನದ ಹೊದಿಕೆ ಹೊದಿಸಿರುವುದು ಈ ದೇಗುಲವು ಮಹತ್ವ ಸ್ಥಾನ ಪಡೆಯಲು ಕಾರಣ.

ಆಂಧ್ರ ಪ್ರದೇಶದ ಚಿತ್ತೂರು ಜಿಲ್ಲೆಯ ಕಾಣಿಪಾಕಂ ಎಂಬಲ್ಲಿ ಇರುವ ಸ್ವಯಂ ಭೂ ಶ್ರೀ ವರಸಿದ್ಧಿ ವಿನಾಯಕನ ದೇವಸ್ಥಾನವು ಹನ್ನೊಂದನೇ ಶತಮಾನದ್ದು. ಬಾವಿಯ ನೀರಿನಲ್ಲಿರುವ ದೇವರ ವಿಗ್ರಹವನ್ನು ನೋಡುವುದೇ ಒಂದು ಕುತೂಹಲ. ಇಂದಿಗೂ ಈ ಭಾಗದಲ್ಲಿ ಜನಸಾಮಾನ್ಯರು, ವಿಶೇಷವಾಗಿ ಭಕ್ತರು, ದೇವಾಲಯಕ್ಕೆ ಆಗಮಿಸಿ, ದೇವರ ಸನ್ನಿಧಿಯಲ್ಲಿ ಆಣೆ ಪ್ರಮಾಣ ಮಾಡಿ ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುತ್ತಾರೆ. ತಮ್ಮ ಪ್ರಾಮಾಣಿಕತೆಯನ್ನು ಪ್ರದರ್ಶಿಸುತ್ತಾರೆ.

**ಕರ್ನಾಟಕದಲ್ಲಿ ಗಣೇಶ !!**

ಕರ್ನಾಟಕದ ವಿವಿಧೆಡೆಗಳಲ್ಲಿ ಇರುವ ಹಲವಾರು ಗಣೇಶ ದೇವಾಲಯಗಳೂ ದೇಶದ ಗಮನ ಸೆಳೆದಿದೆ. ರಾಜ್ಯದ ರಾಜಧಾನಿ ಬೆಂಗಳೂರಿನ ಬಸವನಗುಡಿಯಲ್ಲಿ ದೊಡ್ಡ ಬಸವನ (ನಂದಿ) ತಟದಲ್ಲಿರುವ ದೊಡ್ಡ ಗಣಪತಿ ದೇವಾಲಯವು ಹೆಸರೇ ಹೇಳುವಂತೆ ದೊಡ್ಡ ಗಾತ್ರದ್ದು. ಹದಿನೆಂಟು ಅಡಿ ಎತ್ತರದ ಹಾಗೂ ಹದಿನಾರು ಅಡಿ ಅಗಲದ ಗಜಗಾತ್ರದ ಗಣಪತಿ ಈ ವಿಗ್ರಹವು ಅಬಾಲ ವೃದ್ಧರ ಗಮನವನ್ನು ಸೆಳೆಯುತ್ತದೆ.

ಅಂದಿನ ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಯ ವಿಶ್ವ ಪರಂಪರಾ ತಾಣ ಐತಿಹಾಸಿಕ ನಗರಿ ಹಂಪಿಯಲ್ಲಿರುವ ಹದಿನೈದನೇ ಶತಮಾನದ ಕಡಲೇ ಕಾಳು ಗಣಪತಿ ಹಾಗೂ ಸಾಸಿವೆ ಕಾಳು ಗಣಪತಿ ಪ್ರವಾಸಿಗರನ್ನು ಆಕರ್ಷಿಸುತ್ತವೆ. ಹೇಮಕೂಟ ಪರ್ವತದ ಈಶಾನ್ಯ ಭಾಗದ ವಿಶಾಲ ಮಂಟಪದಲ್ಲಿ ಏಕಶಿಲಾ ವಿಗ್ರಹದಲ್ಲಿ ಮೈದೇಳಿರುವ ಈ 15-ಅಡಿ ಗಣಪನ ಹೊಟ್ಟೆಯು ಕಡಲೇಕಾಳನ್ನು ಹೋಲುವುದರಿಂದ ಈ ಗಣೇಶನನ್ನು ಕಡಲೇಕಾಳು ಗಣಪತಿ ಎಂದು ಕರೆಯಲ್ಪಡುತ್ತದೆ. ಸಮೀಪದಲ್ಲಿರುವ ಮತ್ತೊಂದು ಮಂಟಪದಲ್ಲಿ ಎಂಟು ಅಡಿ ಗಾತ್ರದ ಗಣಪತಿ ಇದ್ದು, ಇದನ್ನು ಸಾಸಿವೆ ಕಾಳು ಗಣಪತಿ ಎಂದು ಕರೆಯುತ್ತಾರೆ.

ಕೋಲಾರ ಜಿಲ್ಲೆಯ ಮುಳಬಾಗಿಲು ತಾಲ್ಲೂಕು ಕೇಂದ್ರಕ್ಕೆ ಹತ್ತು ಕಿಲೋ ಮೀಟರ್ ಸಮೀಪದಲ್ಲಿರುವ ಕುರುಡುಮಲೈನ ಗಣೇಶ ಕೂಡಾ ಅತ್ಯಂತ ಪ್ರಸಿದ್ಧ ಕ್ಷೇತ್ರಗಳಲ್ಲೊಂದು. ಹದಿಮೂರೂವರೆ ಅಡಿ ಗಣೇಶನ ವಿಗ್ರಹ ಇರುವ ಚೋಳರ ಕಾಲದ ಈ ದೇಗುಲವು ತಳಪಾಯ ಇಲ್ಲದೆಯೇ ನಿರ್ಮಿತವಾದುದು ಎಂಬುದು ಒಂದು ವಿಶೇಷವಾದರೆ ಈ ದೇವಾಲಯದ ಅರ್ಧ ಭಾಗವನ್ನು ಸುಪ್ರಸಿದ್ಧ ಶಿಲ್ಪಿ ಜಕಣಾಚಾರಿ ಹಾಗೂ ಉಳಿದ ಅರ್ಧ ಭಾಗವನ್ನು ಆತನ ಮಗ ಡಂಕಣಾಚಾರಿ ನಿರ್ಮಿಸಿದರೆಂಬುದು ಮತ್ತೊಂದು ವಿಶೇಷ.

ಚಿತ್ರದುರ್ಗ ಜಿಲ್ಲೆಯ ಹೊಳಲ್ಕೆರೆ ಪಟ್ಟಣದಲ್ಲಿರುವ ಶ್ರೀ ಜಡೆ ಗಣಪತಿ





ಅಥವಾ ಬಯಲು ಗಣಪತಿ ದೇವಾಲಯವು ಕ್ರಿಸ್ತ ಶಕ 1475 ನೇ ಇಸವಿಯಲ್ಲಿ ಸ್ಥಾಪಿತವಾದುದು ಎಂದು ಹೇಳಲಾಗುತ್ತದೆ. ಇಪ್ಪತ್ತು ಅಡಿ ಎತ್ತರದ ಗಣೇಶನ ಮೂರ್ತಿಯ ಹಿಂಬದಿಯಲ್ಲಿ ಜಟೆ ಬೆಳೆಯುತ್ತಿದೆ ಎಂಬುದು ಭಕ್ತಾಧಿಗಳ ನಂಬಿಕೆ.

ಉತ್ತರ ಕನ್ನಡ ಜಿಲ್ಲೆಯ ಕುಮುಟ ತಾಲ್ಲೂಕಿನ ಗೋಕರ್ಣ ಇತಿಹಾಸ ಪ್ರಸಿದ್ಧ ಸ್ಥಳ. ರಾಮಾಯಣ ಕಥೆಯಲ್ಲಿ ಉಲ್ಲೇಖಿಸಿರುವಂತೆ ಈಶ್ವರನ ಆತ್ಮಲಿಂಗವನ್ನು ಕೊಂಡೊಯ್ಯುತ್ತಿದ್ದ ರಾವಣ ಸಾಯಂ ಸಂಧ್ಯಾ ವಂದನೆ ಮಾಡುವ ಮುನ್ನ ಗೋವುಗಳನ್ನು ಮೇಯಿಸುತ್ತಿದ್ದ ಬಾಲಕನೋರ್ವನನ್ನು ಕರೆದು ಈ ಆತ್ಮಲಿಂಗವನ್ನು ಕೈಯಲ್ಲೇ ಇಟ್ಟುಕೊಳ್ಳುವಂತೆಯೂ ಹಾಗೂ ಯಾವುದೇ ಕಾರಣಕ್ಕೂ ನೆಲದ ಮೇಲೆ ಇರಿಸದಂತೆ ಸೂಚಿಸುತ್ತಾನೆ.

ಆದರೆ, ಸಂಧ್ಯಾ ವಂದನೆಯಿಂದ ರಾವಣ ಹಿಂದಿರುಗುವ ಮುನ್ನವೇ ಆ ಬಾಲಕ ಆತ್ಮಲಿಂಗವನ್ನು ಕೆಳಗೆ ಇರಿಸಿ ಬಿಡುತ್ತಾನೆ. ಕೋಪೋದ್ರಿಕ್ತ ರಾವಣನು ಆ ಬಾಲಕನ ಕಿವಿ ಹಿಂಡುತ್ತಾನೆ. ಆ ಬಾಲಕನ ಕಿವಿ ಗೋವಿನ ಕಿವಿಯಂತಾಗುತ್ತದೆ. ಆ ಪ್ರದೇಶವೇ ಗೋಕರ್ಣ. ಆ ಬಾಲಕನೇ ಗಣಪತಿ. ಆತ್ಮಲಿಂಗ ಇರಿಸಿದ ಸ್ಥಳ ಇದೀಗ ಶ್ರೀ ಮಹಾಬಲೇಶ್ವರ ಸ್ವಾಮಿ ದೇವಾಲಯವಾಗಿದೆ. ಆ ಬಾಲಕ ಕಿವಿ ಹಿಂಡಿಸಿಕೊಂಡ ಸ್ಥಳ ಶ್ರೀ ಮಹಾಗಣಪತಿ ದೇವಸ್ಥಾನವಾಗಿದೆ. ಗೋಕರ್ಣಕ್ಕೆ ಆಗಮಿಸುವ ಎಲ್ಲಾ ಭಕ್ತಾಧಿಗಳು ಮೊದಲು ಶ್ರೀ ಮಹಾಗಣಪತಿ ದೇವಸ್ಥಾನಕ್ಕೆ ಭೇಟಿ



Download From : www.kpscvaani.com

ನೀಡಿ, ಬಾಲ ಗಣಪತಿಯ ದರ್ಶನ ಪಡೆದ ನಂತರವೇ ಶ್ರೀ ಮಹಾಬಲೇಶ್ವರ ಸ್ವಾಮಿ ದೇಗುಲಕ್ಕೆ ಭೇಟಿಯಿತ್ತು ಈಶ್ವರನ ಆತ್ಮಲಿಂಗವನ್ನು ಸ್ಪರ್ಶಿಸುತ್ತಾರೆ.

ಅಂತೆಯೇ, ಉತ್ತರ ಕನ್ನಡ ಜಿಲ್ಲೆಯ ಮತ್ತೊಂದು ಪ್ರೇಕ್ಷಣೀಯ ಸ್ಥಳ ಹೊನ್ನಾವರ ತಾಲ್ಲೂಕಿನಲ್ಲಿರುವ ನಾಲ್ಕನೇ ಶತಮಾನದ್ದು ಎಂದು ಹೇಳಲಾದ ಇಡುಗುಂಜಿಯ ಗಣೇಶ. ಇಲ್ಲಿನ ಗಣೇಶನ ರೂಪ ಅತ್ಯಾಕರ್ಷಕ. ಬಾಲ ಗಣಪನ ಬೃಹತ್ ಮೂರ್ತಿಯೇ ಈ ದೇವಾಲಯದ ವಿಶೇಷ ಆಕರ್ಷಣೆ. ಅಗಸ್ತ್ಯರ ತಪೋಭೂಮಿ ಎಂದೇ ಬಣ್ಣಿಸಲಾಗುವ ಉಡುಪಿ ಜಿಲ್ಲೆಯ ಕುಂದಾಪುರ ತಾಲ್ಲೂಕಿನ ಕುಂಭಾಶಿಯಲ್ಲಿರುವ ಆನೆಗುಡ್ಡ ಗಣಪತಿ ದೇವಾಲಯವೂ ಕರ್ನಾಟಕದ ಪುಣ್ಯ ಕ್ಷೇತ್ರಗಳಲ್ಲೊಂದು.

ಮೈಸೂರಿನ ನೂರೊಂದು ಗಣಪತಿ ದೇವಾಲಯ, ಬೆಂಗಳೂರಿನ ನೂರೆಂಟು ಗಣಪತಿ ದೇವಸ್ಥಾನ, ವಿವಿಧೆಡೆಗಳಲ್ಲಿರುವ ಬಲಮುರಿ ಗಣೇಶ ದೇವಾಲಯ ಹಾಗೂ ಶ್ರೀ ಪಂಚಮುಖಿ ಗಣೇಶ ದೇವಸ್ಥಾನಗಳು ಇವೆಲ್ಲವೂ ಭಕ್ತಾಧಿಗಳಿಗೆ ನೆಮ್ಮದಿ ನೀಡುವ ತಾಣಗಳಾಗಿವೆ.

**ಗೂಳೂರು ಗಣೇಶ !!!**

ಅಬ್ಬಬ್ಬಾ ! ಇಷ್ಟೆಲ್ಲಾ ವೈಶಿಷ್ಟ್ಯತೆ ಹಾಗೂ ವೈವಿಧ್ಯತೆಗಳಿರುವ ಹಲವಾರು ದೇಗುಲಗಳಿರುವಾಗ ತುಮಕೂರು ಜಿಲ್ಲೆಯಲ್ಲಿ ತುಮಕೂರು ತಾಲ್ಲೂಕಿನಲ್ಲೇ ಇರುವ ಗೂಳೂರು ಗಣೇಶ ದೇವಾಲಯದ ವಿಶೇಷತೆ ಏನು ? ಎಂಬುದು ತಮ್ಮ ಪ್ರಶ್ನೆಯಾಗುವುದು ಸಹಜ.

ಗಣಪತಿ ಹಬ್ಬದ ಒಂದು ದಿನದ ಮುನ್ನ, ಅಂದರೆ ಗೌರಿ ಹಬ್ಬದ ದಿನದಂದೇ ಶಕ್ತ್ಯಾನುಸಾರ ಮಣ್ಣಿನ ಗಣಪತಿ ವಿಗ್ರಹವನ್ನು ಖರೀದಿಸಿ, ಶ್ರೀ ವಿನಾಯಕ ಚತುರ್ಥಿಯ ದಿನದಂದು ಪೂಜಿಸಿ, ಅಂದೇ, ಅಥವಾ ನಂತರದ ಮೂರು ದಿನಗಳಲ್ಲಿ, ಐದು ದಿನಗಳಲ್ಲಿ, ಏಳು ದಿನಗಳಲ್ಲಿ ಅಥವಾ ಹತ್ತನೇ ದಿನ ಸಮೀಪದ ಬಾವಿ, ಕೆರೆ, ನದಿ ಅಥವಾ ಸಮುದ್ರದಲ್ಲಿ ವಿನಾಯಕ ವಿಗ್ರಹದ ವಿಸರ್ಜನೆ ಮಾಡುವುದು ಪ್ರತೀತಿ. ಅಲ್ಲವೇ ? ಆದರೆ, ಗೂಳೂರು ಗಣೇಶನ ಕಥೆಯೇ ಬೇರೇ.




ಭಾದ್ರಪದ ಶುಕ್ಲ ಚೌತಿಯ ದಿನ ಅಂದರೆ ಗಣೇಶನ ಹಬ್ಬದಂದು ಗೂಳೂರಿನ ಜನರು ಗಣೇಶನ ವಿಗ್ರಹವನ್ನು ಪ್ರತಿಷ್ಠಾಪಿಸುವುದಿಲ್ಲ. ಬದಲಾಗಿ ಸಮೀಪದ ಗೂಳೂರು ಕೆರೆಗೆ ತೆರಳಿ, ಗಂಗೆಯ ಪೂಜೆ ಮಾಡಿ ಕೆರೆಯಲ್ಲಿ ಲಭ್ಯವಿರುವ ಮಣ್ಣಿನಲ್ಲಿ ಸಣ್ಣ ಗಾತ್ರದ ಗಣೇಶನ ಮೂರ್ತಿಯನ್ನು ಮಾಡುತ್ತಾರೆ.

ನಂತರ, ಊರಿನ ಹದಿನೆಂಟು ಕೋಮಿನ ಜನರು ಕೆರೆಯಲ್ಲಿನ ಜೇಡಿ ಮಣ್ಣು, ಮರಳು, ಗಂಟೆ, ಗರಿಕೆ ಮತ್ತು ನಾರು ಸಂಗ್ರಹಿಸಿ ಅವೆಲ್ಲವನ್ನೂ ಮಂಗಳ ವಾದ್ಯದೊಂದಿಗೆ ದೇವಾಲಯದ ಆವರಣಕ್ಕೆ ತರುತ್ತಾರೆ.

ತದ ನಂತರ, ಬೃಹತ್ ಗಾತ್ರದ ಗಣೇಶ ಮೂರ್ತಿಯನ್ನು ಮಾಡಲು ಚಾಲನೆ ನೀಡುತ್ತಾರೆ. ಆಶ್ವಯುಜ ಮಾಸದ ಹತ್ತನೇ ದಿನ ಅಂದರೆ ದಸರಾದ ವಿಜಯ ದಶಮಿಯಂದು ತಾವು ನಿರ್ಮಿಸಿದ 12 ಅಡಿ ಉದ್ದ ಮತ್ತು 12 ಅಡಿ ಅಗಲದ ಗಣೇಶ ಮೂರ್ತಿಯ ಹೊಟ್ಟೆಯಲ್ಲಿ ಕೆರೆಯಲ್ಲಿಯೇ ನಿಂತು ಮೊದಲು ತಯಾರಿಸಿದ ಪುಟ್ಟ ಗಣೇಶನ ವಿಗ್ರಹವನ್ನು ವಿಲೀನಗೊಳಿಸಿ ಐಕ್ಯ ಗೊಳಿಸಿ ಮಹಾ ನೈವೇದ್ಯ ಮಾಡುತ್ತಾರೆ. ಆಕರ್ಷಕ ಬಣ್ಣಗಳೊಂದಿಗೆ ಅಲಂಕರಣ ಕಾರ್ಯ ಪ್ರಾರಂಭಿಸುತ್ತಾರೆ.

ಇದಾದ ನಂತರ, ಕಾರ್ತಿಕ ಮಾಸದ ಮೊದಲನೇ ದಿನ ಅಂದರೆ ದೀಪಾವಳಿ ಎಂದೇ ಕರೆಯಲ್ಪಡುವ ಬಲಿ ಪಾಡ್ಯಮಿಯಂದು ಗಣಪತಿಗೆ ದೃಷ್ಟಿಯನ್ನಿಟ್ಟು ಇಡೀ ತಿಂಗಳು ಪೂಜಿಸುತ್ತಾರೆ. ಕಾರ್ತೀಕ ಮಾಸದ ಮುಕ್ತಾಯಗೊಂಡ ಮೂರು ದಿನಗಳ ನಂತರ ಸೂಕ್ತ ದಿನವನ್ನು ಆಯ್ದು ಉತ್ತಮ ಮುಹೂರ್ತದಲ್ಲಿ ಗಣೇಶನ ವಿಗ್ರಹವನ್ನು ಮೆರವಣಿಗೆಯ ಮೂಲಕ ರಥದಲ್ಲಿ ಕೊಂಡೊಯ್ದು ಕೆರೆಯಲ್ಲಿ ವಿಸರ್ಜಿಸಲಾಗುತ್ತದೆ.

**ಏಕೆ ಹೀಗೆ ?**

ಎಲ್ಲೆಡೆ ಗಣೇಶ ಹಬ್ಬದ ಸಡಗರ ಗರಿಷ್ಠ ಹತ್ತು ದಿನಗಳು ನಡೆಯುತ್ತದೆ. ಆದರೆ, ಗೂಳೂರಿನಲ್ಲಿ ಭಾದ್ರಪದ ಮಾಸದಲ್ಲಿ ಪ್ರಾರಂಭಗೊಳ್ಳುವ ಗಣೇಶನ ಸಂಭ್ರಮ, ಆಶ್ವಯುಜ ಹಾಗೂ ಕಾರ್ತೀಕ ಮಾಸವೂ ಮುಂದುವರೆಯುತ್ತದೆ. ಏಕೆ ಹೀಗೆ ? ಎಂಬ ಪ್ರಶ್ನೆಗೆ ಗೂಳೂರು ಗಣೇಶ ದೇವಾಲಯದ ಅರ್ಚಕರೂ ಆದ ಶಿವಕುಮಾರ್ ಶಾಸ್ತ್ರಿ ಅವರು ಒಂದು ಪುಟ್ಟ ಕಥೆಯನ್ನು ಹೇಳುತ್ತಾರೆ.

ಹಲವು ಶತಮಾನಗಳ ಹಿಂದೆ ಭೃಗು ಮಹರ್ಷಿಗಳು ( ಮತ್ತೆ ಕೆಲವರು ಇದನ್ನು ಅಗಸ್ತ್ಯರು ಎಂದು ಹೇಳುತ್ತಾರೆ ) ಕಾಶಿಗೆ ತೆರಳುವ ಸಂದರ್ಭದಲ್ಲಿ ಅಂದಿನ ಗೂಳೀ ಪಟ್ಟಣ್ಣ ಅಥವಾ ಇಂದಿನ ಗೂಳೂರಿನಲ್ಲಿ ವಾಸ್ತವ್ಯ ಹೂಡಿದ್ದರಂತೆ. ತಮ್ಮ ವಾಸ್ತವ್ಯದ ವೇಳೆ ಭೃಗು ಮಹರ್ಷಿಗಳು ಅನುಸರಿಸಿದಂತೆಯೇ ಇಂದಿಗೂ ಸ್ಥಳೀಯರು ನಡೆದುಕೊಳ್ಳುತ್ತಿದ್ದಾರೆ. ಮಣ್ಣು ಸಂಗ್ರಹಣೆ, ಗಣೇಶನ ಮೂರ್ತಿ ನಿರ್ಮಾಣ, ಗಣೇಶನ ಪೂಜೆ ಹಾಗೂ ಗಣೇಶನ ವಿಸರ್ಜನೆ ಮಾಡುತ್ತಿದ್ದಾರೆ ಎನ್ನುತ್ತಾರೆ.

ಗೂಳೂರು ಕೋಮು ಸಾಮರಸ್ಯದ ತವರೂರಾಗಿದೆ. ಭಾದ್ರಪದದಲ್ಲಿ ಗಣೇಶನ ಪೂಜೆ ಮಾಡಲಾಗದವರು ಅಥವಾ ಗಣೇಶನ ಪೂಜೆಯಲ್ಲಿ ಪಾಲ್ಗೊಳ್ಳಲಾಗದವರು ಕಾರ್ತಿಕ ಮಾಸದವರೆಗೂ ಗೂಳೂರಿಗೆ ಆಗಮಿಸಿ ಗಣೇಶನ ದರ್ಶನ ಮಾಡಬಹುದು ಬೃಹತ್ ಗಣೇಶನ ಹಿಂಬದಿಯಲ್ಲಿ ಮೂಲ ಗಣೇಶನ ವಿಗ್ರಹವೂ ಇದೆ.

ತುಮಕೂರು ನಗರಕ್ಕೆ ಕೇವಲ ಐದು ಕಿಲೋ ಮೀಟರ್ ಸಮೀಪದಲ್ಲಿರುವ ಗೂಳೂರಿಗೆ ಒಮ್ಮೆ ಭೇಟಿ ಇತ್ತು ತಾವೂ ಕೂಡಾ ಗೂಳೂರು ಗಣೇಶನ ವಿಶೇಷತೆಯನ್ನು ನೋಡುವಿರಲ್ಲವೇ ?




Download From : www.kpscvaani.com

## ತುಂಗಭದ್ರಾ ಅಣೆಕಟ್ಟು ವೀಕ್ಷಿಸಿ

# ಮೂಕವಿಸ್ಮಿತರಾದ ಉಪರಾಷ್ಟ್ರಪತಿಗಳು





**ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ರಾಜ್ಯ ಪ್ರವಾಸದ ವೇಳೆ ತುಂಗಭದ್ರಾ ಅಣೆಕಟ್ಟಿಗೆ ಭೇಟಿ ನೀಡಿದ ವೇಳೆ ಅಗಾಧವಾದ ಜಲರಾಶಿ ಯನ್ನು ವೀಕ್ಷಿಸಿ ಅನುಭವಿಸಿದ ಅನಿಸಿಕೆಯನ್ನು ರಾಜ್ಯದ ಜನರೊಂದಿಗೆ ತಮ್ಮ ಫೇಸ್ಬುಕ್ ನಲ್ಲಿ ಹಂಚಿಕೊಂಡಿದ್ದಾರೆ**

ಕೆ. ರೋಹಿಣಿ

ಈ ಸಂಜೆ ಪ್ರಕೃತಿಯ ವಿರಾಟ ಸ್ವರೂಪಕ್ಕೆ ನಾನು ಸಾಕ್ಷಿಯಾಗಿದ್ದೆ. ಬಳ್ಳಾರಿ ಜಿಲ್ಲೆಯ ತುಂಗಾ ಭಧ್ರ ಅಣೆಕಟ್ಟಿನ ಮೇಲೆ ನಿಂತು ಮೇಲಿಂದ ಧುಮುಕುವ ನೀರಿನ ವಿಸ್ತಾರವನ್ನು ನೋಡಿ ಮೂಕ ವಿಸ್ಮಿತನಾದೆ. ಬೆಳ್ನೊರೆಯ ಆ ಅಲೆಗಳು ಒಂದರ ಮೇಲೆ ಒಂದರಂತೆ ಹರಿವಾಗ ಸಮಯವನ್ನು ಹಾಗೆ ಹಿಡಿದಿಟ್ಟಂತೆ ಅನುಭವ ನೀಡಿತು.

ನೀರಿನ ವಿಸ್ತಾರವನ್ನು ಕಂಡಾಕ್ಷಣ ನನಗೆ ಈ ಸೀಮಿತ ಸಂಪನ್ಮೂಲದ ಪಾತ್ರ ಮತ್ತು ಮುಂದಿನ ಪೀಳಿಗೆಗೆ ಇದನ್ನು ಸಂರಕ್ಷಿಸುವ ಮತ್ತು ಕಾಪಾಡುವ ತುರ್ತು ಅಗತ್ಯವನ್ನು ಮನಗಂಡೆ. ನೆಲ ಮತ್ತು ಜಲ ಸೀಮಿತವಾಗಿ ಒದಗುವ ಸಂಪನ್ಮೂಲಗಳು, ಅದರ ವಿವೇಚಾನಾತ್ಮಕ ಬಳಕೆ ಅತ್ಯಗತ್ಯ. ನದಿಗಳ ಮತ್ತು ಇತರೆ ಜಲಮೂಲಗಳ ಪ್ರಾಮುಖ್ಯತೆಯ ಬಗ್ಗೆ ಜನರಿಗೆ ಅರಿವು ಹಾಗೂ ಶಿಕ್ಷಣ ನೀಡಬೇಕಾಗಿದೆ. ನಗರವಾಸಿಗಳು ಒಳಗೊಂಡಂತೆ ಎಲ್ಲರು ಇರುವ ಜಲಸಂಪನ್ಮೂಲಗಳು ಮಾಲಿನ್ಯವಾಗದಂತೆ ಹಾಗೂ ಹಾಳಾಗದಂತೆ ಮುಂಜಾಗ್ರತೆ ಕ್ರಮಗಳನ್ನು ತೆಗೆದುಕೊಳ್ಳಬೇಕು. ನದಿಯು ನಮ್ಮೆಲ್ಲರಂತೆ ಸಜೀವಿ. ಹಾಗಾಗಿ ಅದರ ಒಳಿತಿಗೆ ಮತ್ತು ಪಾವಿತ್ರ್ಯತೆಗೆ ನಾವೆಲ್ಲರೂ ಕಂಕಣ ಬದ್ಧರಾಗಬೇಕು.

ಬಹುಪಯೋಗಿ ತುಂಗಭದ್ರಾ ಯೋಜನೆ ಈ ಪ್ರದೇಶದ ಅಭಿವೃದ್ಧಿಯಲ್ಲಿ ಮಹತ್ವದ ಪಾತ್ರ ವಹಿಸುತ್ತಿದೆ. ವಿಶಾಲವಾದ ಕೃಷಿಭೂಮಿಗೆ ನೀರುಣಿಸುವ ಮೂಲಕ, ವಿದ್ಯುತ್ ಉತ್ಪಾದಿಸುವ ಮತ್ತು ಪ್ರವಾಸೋದ್ಯಮಕ್ಕೆ ಚಾಲನೆ ನೀಡುವ ಮೂಲಕ, ರಾಷ್ಟ್ರಕ್ಕೆ ಹಲವು ರೀತಿಯಲ್ಲಿ ಸೇವೆ ಸಲ್ಲಿಸುತ್ತಿದೆ. ರೈತನ ಮಗನಾದ ನಾನು ಕೃಷಿಗೆ ನೀರಾವರಿಯ ಮಹತ್ವವನ್ನು ಯಾವಾಗಲೂ ಒತ್ತಿ ಹೇಳಿದ್ದೇನೆ.



Download From : www.kpscvaani.com



ತುಂಗಭದ್ರಾ ಜಲಾಶಯದ ಆಗಮ 1860 ರ ಕಾಲಕ್ಕೆ ಸೇರಿದ್ದು. ಕೆಲವು ಬ್ರಿಟಿಷ್ ಎಂಜಿನಿಯರ್ಗಳು ಬಳ್ಳಾರಿ, ಅನಂತಪುರ, ಕರ್ನೂಲ್ ಮತ್ತು ಕುಡಪವನ್ನು ಒಳಗೊಂಡಿರುವ ರಾಯಲಸೀಮಾದ ಬರಪೀಡಿತ ಪ್ರದೇಶಕ್ಕೆ ನೀರಾವರಿ ಸೌಲಭ್ಯಗಳನ್ನು ಒದಗಿಸಲು, ಈ ಜಲಾಶಯವನ್ನು ನಿರ್ಮಿಸಲು ಪ್ರಸ್ತಾಪಿಸಿದರು. ಹೈದರಾಬಾದ್, ಮೈಸೂರು ಮತ್ತು ಮದ್ರಾಸ್ ರಾಜ್ಯಗಳನ್ನೊಳಗೊಂಡಂತೆ, ತುಂಗಭದ್ರಾ ನದಿಯು ಅಂತರ್ ರಾಜ್ಯ ನದಿಯಾದ ಕಾರಣ ಈ ಯೋಜನೆಯಲ್ಲಿ ಭಾಗಿಯಾಗಿದ್ದವು. ಆದಾಗ್ಯೂ, 1944 ರಲ್ಲಿ ಮಾತ್ರ ಮದ್ರಾಸ್ ಮತ್ತು ಹೈದರಾಬಾದ್ ಸರ್ಕಾರಗಳು ಜಂಟಿಯಾಗಿ ಯೋಜನೆಯನ್ನು ಜಾರಿಗೊಳಿಸುವ ಅಂತಿಮ ನಿರ್ಧಾರಕ್ಕೆ ಬಂದವು. ದಾರ್ಶನಿಕರಾದ ಇಂಜಿನಿಯರ್, ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಅಣೆಕಟ್ಟಿನ ಪ್ರಸ್ತುತ ವಿನ್ಯಾಸ, ವೆಚ್ಚ ಮತ್ತು ನಿರ್ಮಾಣ ವಿಧಾನಗಳನ್ನು ನಿರ್ಧರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದರು.

ಹಿಂದಿನ ಕಾಲದಲ್ಲಿ, ವಿಜಯನಗರದ ಅರಸರು ತುಂಗಭದ್ರಾ ನದಿಯ ಉದ್ದಗಲಕ್ಕೆ 17 ಅಣೆಕಟ್ಟುಗಳನ್ನು ನೀರಾವರಿ ಸೇರಿದಂತೆ ವಿವಿಧ ಉಪಯೋಗಗಳಿಗೆ ನಿರ್ಮಿಸಿದರು. ವಿಷಾದಕರ ಸಂಗತಿಯೆಂದರೆ, ವಿಜಯನಗರದ ಸಾಮ್ರಾಜ್ಯದ ಪತನದ ನಂತರ, ಅವರು ನಿರ್ಮಿಸಿದ ಅಣೆಕಟ್ಟುಗಳು ಬಳಸಲಾಗದ ದುಸ್ಥಿತಿಗೆ ತಲುಪಿತು.

ತುಂಗಭದ್ರಾ ನದಿಯ ಹೆಸರು, ಕೃಷ್ಣಾ ನದಿಯ ಪ್ರಮುಖ ಉಪನದಿ, ಪಶ್ಚಿಮ ಘಟ್ಟದಲ್ಲಿ ಹುಟ್ಟುವ ತುಂಗಾ ಮತ್ತು ಭದ್ರ ಎಂಬ ಎರಡು ಹೊಳೆಗಳ ಸಂಗಮದಿಂದ ಬಂದಿದೆ. ಈ ಪುರಾತನ ನದಿಯನ್ನು ರಾಮಾಯಣ ಮಹಾಕಾವ್ಯದಲ್ಲಿ ಪಂಪತೀರ್ಥ ಎಂದು ಗೌರವಯುತವಾಗಿ ಉಲ್ಲೇಖಿಸಲಾಗಿದೆ. ಇದಲ್ಲದೆ ತುಂಗಭಧ್ರಾ ನದಿಯು ಹತ್ತು ಹಲವಾರು ಪುರಾಣಗಳು ಮತ್ತು ಗ್ರಂಥಗಳಲ್ಲಿನ ಹಲವು ಶ್ಲೋಕಗಳಲ್ಲಿ ಪ್ರಶಂಸೆಗೆ ಒಳಪಟ್ಟಿದೆ.

ವಿಜಯನಗರದ ರಾಜಧಾನಿ ಆಗಿದ್ದ ಹಂಪಿಯು, ತುಂಗಭದ್ರೆಯ ದಕ್ಷಿಣ ದಂಡೆಯಲ್ಲಿ ನೆಲೆಸಿದೆ. ಸಾಂಸ್ಕೃತಿಕ ಮತ್ತು ಪರಿಸರ ಮಹತ್ವದ ಈ ನದಿ, ಆಂಧ್ರಪ್ರದೇಶದ ಕರ್ನೂಲ್ ಬಳಿ ಇರುವ ಕೃಷ್ಣಾ ನದಿಯನ್ನು ಸೇರುವ ಮುನ್ನ ಸುಮಾರು 531 ಕಿಲೋಮೀಟರ್ ಸಾಗುತ್ತದೆ.

ಇಂದು, ಕೃಷ್ಣಾ ಜಲ ವಿವಾದ ನ್ಯಾಯಮಂಡಳಿಯ ನಿರ್ಣಯದ ಅನುಗುಣವಾಗಿ ನದಿ ನೀರನ್ನು ಎಲ್ಲಾ ಮೂರು ರಾಜ್ಯಗಳು ಹಂಚಿಕೊಳ್ಳುತ್ತದೆ. ಇತ್ತೀಚಿನ ತಂತ್ರಜ್ಞಾನದ ಸಹಕಾರದಿಂದ, ಕಾಲುವೆಗಳಲ್ಲಿ ನೀರಿನ ಹರಿವಿನ ಬಗ್ಗೆ ರೈತರು ಮತ್ತು ಅಧಿಕಾರಿಗಳು ಕ್ಷಣ-ಕ್ಷಣದ ಮಾಹಿತಿಯನ್ನು ಪಡೆಯಬಹುದು.

ಹೆಸರಿಗೆ ತಕ್ಕಂತೆ, ಬಹುಉಪಯೋಗಿ ತುಂಗಭಧ್ರಾ ಯೋಜನೆಯು, ಕೇವಲ ನೀರಾವರಿ ಹಾಗು ಕುಡಿಯುವ ನೀರಿಗೆ ಸೀಮಿತವಾಗದೆ, ಗಮನಾರ್ಹ ಹಸಿರು ಶಕ್ತಿಯ ಕೇಂದ್ರವಾಗಿಯೂ ಮತ್ತು ಪ್ರದೇಶದಲ್ಲಿ ಕೈಗಾರಿಕಾ ಅಭಿವೃದ್ಧಿಗೆ ಬೆನ್ನೆಲುಬಾಗಿ ನಿಂತಿದೆ.

ತುಂಗಭಧ್ರಾ ಅಣೆಕಟ್ಟೆಯ ಉದ್ದಗಲಕ್ಕೂ ಇರುವ ಸುಂದರ ಉದ್ಯಾನವನವು, ವಿಶ್ರಾಂತಿ ಪಡೆಯಲು ಮತ್ತು ಭವ್ಯ ಅಣೆಕಟ್ಟಿನ ಹಿನ್ನಲೆಯಲ್ಲಿ ಸೂರ್ಯಾಸ್ತವನ್ನು ಸವಿಯಲು ಪ್ರಶಸ್ತ ವಾತಾವರಣ ಒದಗಿಸುತ್ತದೆ. ಸುಂದರ ಕಮಾನುಗಳು, ಅಲಂಕಾರಿಕ ಹೂ ಬಿಡುವ ಬಳ್ಳಿಗಳು, ದಾರಿಯುದ್ದಕ್ಕೂ ಇರುವ ಹೂ ಹಾಸು ಮತ್ತು ಜಪಾನೀಸ್ ಉದ್ಯಾನವನದ ಹುಲ್ಲುಹಾಸಿನ ಮೇಲೆ ನಡೆಯುವುದು ಸದಾ ಸ್ಫೂರ್ತಿದಾಯಕವಾದ ಅನುಭವ. ಇಲ್ಲಿರುವ ರೋಸ್ ಗಾರ್ಡನ್, ಸಂಗೀತ ನೃತ್ಯ ಕಾರಂಜಿ, ಮಿನಿ ಮೃಗಾಲಯಗಳಿಗೆ ಒಮ್ಮೆ ಭೇಟಿ ನೀಡಲೇ ಬೇಕು.

ಯುನೆಸ್ಕೋ ವಿಶ್ವ ಪರಂಪರೆಯ ತಾಣವಾದ ಹಂಪಿ ಮತ್ತು ತುಂಗಭದ್ರಾ ಅಣೆಕಟ್ಟಗಳು ವಿಧ್ಯಾರ್ಥಿಗಳ ಜೀವನದಲ್ಲಿ ಭೇಟಿ ನೀಡುವ ಸ್ಥಳಗಳ ಪಟ್ಟಿಯಲ್ಲಿ ಆದ್ಯತೆಯಲ್ಲಿ ಇರಬೇಕು, ನಮ್ಮ ದೇಶದ ಪ್ರತಿಯೊಬ್ಬ ಯುವಕರು ಭೇಟಿ ನೀಡಬೇಕಾದ ತಾಣಗಳಲ್ಲಿ ಇವು ಒಂದಾಗಿದೆ. ತುಂಗಭದ್ರಾನದಿ ಮತ್ತು ತುಂಗಭದ್ರಾ ಡ್ಯಾಮ್.

**ಮಾನ್ಯ ಉಪರಾಷ್ಟ್ರಪತಿ ವೆಂಕಯ್ಯನಾಯ್ಡು ಅವರ ಫೇಸ್ ಬುಕ್ ಪುಟದಿಂದ ..**



Download From : www.kpscvaani.com



## ಶಿಕ್ಷಕರ ಮುತುವರ್ಜಿಯಿಂದ ಮಾದರಿ ಶಾಲೆಯಾದ

# ಆನೆಗದ್ದೆ ಸರ್ಕಾರಿ ಶಾಲೆ

ರಮೇಶ್ ಹೆಗಡೆ ಗುಂಡೂಮನೆ

**ಒಬ್ಬ ಶಿಕ್ಷಕ ಸಾವಿರಾರು ಮಕ್ಕಳ ಭವಿಷ್ಯವನ್ನು ರೂಪಿಸುತ್ತಾರೆ. ಆದರೆ ಶಿವಮೊಗ್ಗ ಜಿಲ್ಲೆಯ ಆನೆಗದ್ದೆ ಸರ್ಕಾರಿ ಶಾಲೆಯ ಶಿಕ್ಷಕರೊಬ್ಬರ ಮುತುವರ್ಜಿಯಿಂದ ಶಾಲೆಯ ಆವರಣ ಮತ್ತು ಶಾಲೆಯ ಬೋಧನಾ ಕ್ರಮಗಳಲ್ಲಿ ಬಹುಪಾಲು ಬದಲಾವಣೆಗಳಾಗಿ ಮಾದರಿ ಶಾಲೆಯಾಗಿ ಪರಿವರ್ತನೆಗೊಂಡಿದೆ. ಸೆಪ್ಟೆಂಬರ್ 5 ರ ಶಿಕ್ಷಕ ದಿನಾಚರಣೆ ನಿಮಿತ್ತ ಈ ಲೇಖನವನ್ನು ಪ್ರಸ್ತುತ ಪಡಿಸಲಾಗಿದೆ.**

ಸರ್ಕಾರಿ ಶಾಲೆಯೊಂದರಲ್ಲಿ ಹೀಗೆಲ್ಲ ಸಾಧ್ಯವೇ ಇಲ್ಲ ಎಂದು ಹೇಳುವವರಿದ್ದರೆ ಒಮ್ಮೆ ಮಲೆನಾಡ ನಡುಮನೆಯ ಕುಗ್ರಾಮದ ಆನೆಗದ್ದೆಗೆ ಬರಬೇಕು. ನಿಮಗೆ ಖಂಡಿತಾ ಅಚ್ಚರಿ ಮತ್ತು ಸಂತೋಷ ಎರಡೂ ಇಲ್ಲಿ ಸಿಗಲಿದೆ. ಹೌದು ಶಿವಮೊಗ್ಗ ಜಿಲ್ಲೆ ಹೊಸನಗರ ತಾಲೂಕಿನ ಆನೆಗದ್ದೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಅವಿನಾಶ್, ಅಲ್ಲಿಯ ಪೋಷಕರ ಸಹಕಾರ ಪಡೆದು ರೂಪಿಸಿರುವ ಶಾಲಾ ಆವರಣ ಹಾಗೂ ಬೋಧನ ವಿಧಾನ ರಾಜ್ಯದ ಇತರ ಸರ್ಕಾರಿ ಶಾಲೆಗಳಿಗೆ ಮಾದರಿಯಾಗಿದೆ.

ಮಕ್ಕಳು ಶಾಲೆಯ ಆವರಣದ ಒಳಗೆ ಹೆಜ್ಜೆ ಇಡುತ್ತಿರುವಂತೆಯೇ ಪ್ರತಿ ಹೆಜ್ಜೆಯಲ್ಲೂ ಅವರಿಗೆ ಅರಿವಿಲ್ಲದ ರೀತಿಯಲ್ಲಿ ಪಠ್ಯದಲ್ಲಿಯ ಹಾಗೂ ಜೀವನಕ್ಕೆ ಬೇಕಾದ ಸಾಮಾನ್ಯ ಜ್ಞಾನವನ್ನು ಕಲಿತುಬಿಡುತ್ತಾರೆ. ಇದಕ್ಕೆ ಕಾರಣವಾಗಿರುವುದು ಇಲ್ಲಿಯ ಅಂದದ ಉದ್ಯಾನವನದಲ್ಲಿಯ ಫಲಕಗಳು. ಅಆ ಅಕ್ಷರದಿಂದ ಹಿಡಿದು ಭಾರತ ದೇಶದ ಒಟ್ಟು ವಿಸ್ತೀರ್ಣದವರೆಗಿನ ಎಲ್ಲ ಮಾಹಿತಿಯನ್ನು ಈ ಸುಂದರ ಉದ್ಯಾನವನದ ಫಲಕಗಳು ಒಳಗೊಂಡಿದೆ. ಸುಮ್ಮನೆ ಕಣ್ಣಿಗೆ ಮಾತ್ರ ಚೆಂದವಾಗಿ ಕಾಣುವುದಲ್ಲ, ಅದನ್ನು ಓದುತ್ತ ಸಾಗಲು ಹಾಗೂ ಎಲ್ಲರೂ ತಿಳಿದು ಕೊಳ್ಳಲೇಬೇಕಾದ ವಿಷಯಗಳನ್ನು ಅಂದದ ಕಟ್ಟೆಯಲ್ಲಿ ಮೂಡಿಸಿ ಆಕರ್ಷಕವಾಗಿಸಲಾಗಿದೆ.

ಇನ್ನೊಂದು ವಿಶೇಷ ಎಂದರೆ ಇಲ್ಲಿನ ಉದ್ಯಾನವನದಲ್ಲಿಯ ಫಲಕದಲ್ಲಿ ಕೇವಲ ಕನ್ನಡ ಭಾಷೆಯಲ್ಲಿ ಮಾತ್ರ ಮಾಹಿತಿಯನ್ನು ಬರೆದಿಲ್ಲ. ಇಂದಿನ



Download From : www.kpscvaani.com

**ಶಾಲೆಯಲ್ಲಿಯೇ ವಾಸ್ತವ್ಯ**

ಸರ್ಕಾರಿ ಶಾಲೆ ಶಿಕ್ಷಕರೊಬ್ಬರು ಶಾಲೆಯಲ್ಲಿಯೇ ವಾಸ್ತವ್ಯ ಮಾಡುವುದಿದ್ದರೆ ಅದು ಆನೆಗದ್ದೆಯಲ್ಲಿ ಮಾತ್ರ. ಸೋಮವಾರ ಬೆಳಗ್ಗೆಯಿಂದ ಶನಿವಾರ ಸಂಜೆಯವರೆಗೆ ಶಾಲೆಯಲ್ಲಿಯೇ ಮೊಕ್ಕಂ ಮಾಡುವ ಬಹುಶಃ ರಾಜ್ಯದ ಏಕೈಕ ಶಿಕ್ಷಕ ಅವಿನಾಶ್ ಇರಬಹುದು. ಬಹುತೇಕ ಎಲ್ಲ ಕಡೆ ಕರ್ತವ್ಯ ದಿನಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 4.30 ರವರೆಗೆ ಕೆಲಸ ಮಾಡಿದರೆ ಈ ಶಿಕ್ಷಕ ಬೆಳಗ್ಗೆ 6 ಗಂಟೆಯಿಂದ ರಾತ್ರಿ 9 ಗಂಟೆಯವರೆಗೆ ಶಾಲೆಯ ಕೆಲಸವನ್ನು ಮಾಡುತ್ತಾರೆ. ಇವರ ಕರ್ತವ್ಯ ಆರಂಭಗೊಳ್ಳುವುದು ಉದ್ಯಾನವನದ ಗೊಬ್ಬರಕ್ಕಾಗಿ ಬೆಳಗ್ಗೆ ಗೋವಿನ ಸಗಣಿ ಆರಿಸುವುದರಿಂದ, ನಂತರ ಸಸಿಗಳಿಗೆ ನೀರು ಬಿಡುವವರೆಗೆ ಕೆಲಸ ಮಾಡುವ ಇವರ ಕಾರ್ಯ ವೈಖರಿಯೇ ಭಿನ್ನ. ಇನ್ನೊಂದು ವಿಶೇಷ ಎಂದರೆ ಸಹ ಶಿಕ್ಷಕರಾಗಿ ಬಂದ ಅವರು ಪ್ರಭಾರಿ ಮುಖ್ಯ ಶಿಕ್ಷಕರಾದರೂ ಒಮ್ಮೆಯೂ ಮುಖ್ಯ ಶಿಕ್ಷಕರ ಕುರ್ಚಿಯಲ್ಲಿ ಕುಳಿತುಕೊಳ್ಳದೆ ಆದರ್ಶ ಪಾಲಿಸಿರುವುದು ಮಕ್ಕಳಿಗೂ ಹಾಗೂ ಊರ ಜನರಿಗೆ ಶಿಕ್ಷಕರ ಮೇಲೆ ಗೌರವ ಇಮ್ಮಡಿಯಾಗಿಸಿದೆ.





ದಿನಮಾನಕ್ಕೆ ವ್ಯವಹಾರಿಕ ಭಾಷೆಯಾಗಿ ಕಲಿಯುವುದು ಅನಿವಾರ್ಯ ಎನ್ನಲಾಗುತ್ತಿರುವ ಇಂಗ್ಲಿಷ್ ಭಾಷೆಯನ್ನು ಬಳಸಲಾಗಿದೆ. ಉದ್ಯಾನವನವನ್ನು ಎರಡು ಭಾಗವಾಗಿ ವಿಂಗಡಿಸಿ, ಕನ್ನಡ ಮತ್ತು ಇಂಗ್ಲಿಷ್ ಎರಡೂ ಭಾಷೆಯಲ್ಲಿ ಆವರಣದ ಆಚೆ ಮತ್ತು ಈಚೆ ಕಲಿಯುವುದಕ್ಕೆ ಪೂರಕವಾಗಿಸಿ ಶಾಲೆಯ ಮಕ್ಕಳಿಗೆ ಇಂಗ್ಲಿಷ್ ಜ್ಞಾನ ಕೂಡ ಸುಲಭದಲ್ಲಿ ದೊರೆಯುವಂತೆ ಮಾಡಲಾಗಿದೆ. ಕಲಿಕೆಗೆ ಪೂರಕವಾಗಿ ಇಂತಹ ವಿಧಾನವನ್ನು ರೂಢಿಸಿದ ಶಿಕ್ಷಕರ ಜಾಣ್ಮೆ, ಅಪರೂಪದಲ್ಲಿ ಅಪರೂಪ.

ಇನ್ನು ಶಾಲೆಯ ಪ್ರವೇಶಕ್ಕೆ ಸರಸ್ವತಿಯ ಬಳಿ ಕೈ ಮುಗಿದು ಬಂದರೆ ನಯನ ಮನೋಹರವಾಗಿರುವ ಮಡಿಕೆಯ ಝುರಿ, ತಾಯಿ ಮಗು ವನ, ಕೊಠಡಿಯೊಳಗಿನ ಆನಂದದ ನಲಿಕಲಿ, ಹೀಗೆ ಫಲಕಗಳಲ್ಲಿಯೇ ಜೀವನಕ್ಕೆ ಬೇಕಾದ ಪಾಠ ಕಲಿಯಲು ಸಾಧ್ಯವಾಗಿಸಿರುವ ಶಾಲೆ ಇದ್ದರೆ ಅದು ಆನೆಗದ್ದೆ ಸರ್ಕಾರಿ ಶಾಲೆ.

ಈಗಂತೂ ಶಾಲೆಗೆ ಮಕ್ಕಳು ಬರುತ್ತಿಲ್ಲ, ಕೋವಿಡ್ ಹಿನ್ನೆಲೆಯಲ್ಲಿ ಶಾಲೆಗೆ ರಜೆ ಇತ್ತು, ಹಾಗಾಗಿ ಯಾವುದೇ ಶಾಲೆಗೆ ಭೇಟಿ ನೀಡಿದರೆ ಆವರಣದಲ್ಲಿ ಕಸ ಕಡ್ಡಿ ಇದ್ದೇ ಇರುತ್ತದೆ. ಆದರೆ ಆನೆಗದ್ದೆ ಶಾಲೆಯ ಆವರಣವು 365 ದಿನವೂ ಯಾವುದೋ ಉತ್ಸವಕ್ಕೆ ಶೃಂಗರಿಸಿದ ದೇವಾಲಯದ ರೀತಿಯಲ್ಲಿ ಯಾವಾಗಲೂ ನಳನಳಿಸುತ್ತಲಿರಲಿದೆ ಎನ್ನುವುದು ವಿಶೇಷ. ಶಿಕ್ಷಕರಲ್ಲಿರುವ ಕ್ರಿಯಾಶೀಲತೆಗೆ ಶಾಲಾ ಸಮಿತಿಯವರು ಮತ್ತು ಊರ ಪೋಷಕರು ಸ್ವಲ್ಪ ಬಲ ಮತ್ತು ಒಲವು ನೀಡಿದರೂ ಸರ್ಕಾರಿ ಶಾಲೆಯೊಂದನ್ನು ಜ್ಞಾನ ಮನೋಹರವಾಗಿಸಬಹುದು ಎನ್ನುವುದಕ್ಕೆ ಈ ಶಾಲೆ ಸಾಕ್ಷಿಯಾಗಿದೆ.

ಹಾಗಂತ 1996 ರಲ್ಲಿಯೇ ಆರಂಭಗೊಂಡ ಶಾಲೆ ಅಂದಿನಿಂದಲೂ ಹೀಗಿತ್ತಾ ಅಂತ ಕೇಳಿದರೆ ಇಲ್ಲ ಎನ್ನುತ್ತಾರೆ ಊರಿನವರು. ಈಗ ಊರ ಸಹಕಾರದಲ್ಲಿ ಚೆಂದದ ಶಾಲೆ ಮಾಡಿರುವ ರೂವಾರಿ ಇಲ್ಲಿಯ ಶಿಕ್ಷಕ ಅವಿನಾಶ್. ಈ ಶಾಲೆಗೆ ಸಹ ಶಿಕ್ಷಕರಾಗಿ ಬಂದು ಕೇವಲ 4 ವರ್ಷಗಳಾಗಿದೆ. ಮುಖ್ಯ ಶಿಕ್ಷಕರಿಲ್ಲದ ಶಾಲೆಯಲ್ಲಿ ಪ್ರಭಾರಿ ಜವಾಬ್ದಾರಿ ಪಡೆದ ಅವರು ಆಗ ಬರಡಾಗಿದ್ದ ಶಾಲೆಯ ಸುತ್ತಲ ಆವರಣ ಹಾಗೂ ಬೋಧನಾ ಕೊಠಡಿಗೆ ಒಂದರ್ಥದ ಜೀವ ಕಳೆ ನೀಡಲಾರಂಭಿಸಿದರು. ಅಲ್ಲಿಯವರೆಗೂ ದೂರವೇ ಇದ್ದ ಊರ ಜನ, ಪೋಷಕರು ಶಿಕ್ಷಕರ ಉತ್ಸಾಹ ಗಮನಿಸಿ ಹತ್ತಿರ ಬರಲಾರಂಭಿಸಿದರು. ಶಾಲಾ ಸಮಿತಿ ಹೆಚ್ಚು ಹೊಣೆ ಹೊರಲು ಸಿದ್ಧವಾಯಿತು. ಆ ವೇಳೆ ಮಕ್ಕಳ ಕೊರತೆಯಿಂದ ಕದ ಮುಚ್ಚುವ ಸ್ಥಿತಿಯಲ್ಲಿದ್ದ ಶಾಲೆ, ಎರಡೇ ವರ್ಷದಲ್ಲಿ ಬದಲಾಯ್ತು. ಇಲ್ಲಿ ಕಲಿಯುವುದಕ್ಕೆ ಆಸಕ್ತಿವಹಿಸಿ ಬರುವ ಮಕ್ಕಳ ಸಂಖ್ಯೆ ದ್ವಿಗುಣವಾಯಿತು. 1 ರಿಂದ 7 ನೇ ತರಗತಿಯವರೆಗೆ 2 ಜನ ಶಿಕ್ಷಕರಿದ್ದರೂ ತನ್ನ ಸಹೋದ್ಯೋಗಿ ಅನ್ವಿತಾರ ಬೆಂಬಲ ಪಡೆದು ನೂರಕ್ಕೆ ನೂರರಷ್ಟು ಪಠ್ಯ, ಪಠ್ಯೇತರ ಚಟುವಟಿಕೆಯಲ್ಲಿ ಮಕ್ಕಳು ಸಾಧಿಸುವಂತೆ ಮಾಡಿ ತೋರಿಸಿ ಸೈ ಎನಿಸಿಕೊಂಡಿದ್ದಾರೆ.

ಒಂದು ಸಣ್ಣ ಕೆಲಸ ಮಾಡಿ ನೂರರಷ್ಟು ಪ್ರಚಾರ ಪಡೆಯುವ ಇಂದಿನ ಕಾಲಘಟ್ಟದಲ್ಲಿ ಇಷ್ಟೆಲ್ಲ ಸಾಧನೆ ಇದ್ದರೂ ತಮ್ಮ ಶಾಲೆ ಹೀಗಿದೆ ಎಂದು ಎಲ್ಲಿಯೂ ಫೋಟೊ ಹಾಕಿ ಪ್ರಚಾರ ಪಡೆಯದಿರುವುದು ಅವರ ಸೌಜನ್ಯವನ್ನು ತೋರಿಸಿದೆ. ಇದು ಶಿಕ್ಷಕರಾಗಿ ನಮ್ಮ ಕರ್ತವ್ಯ ಎನ್ನುವ ವಿನಯತೆ ರಾಜ್ಯದಲ್ಲಿಯೇ ಮಾದರಿ ಎನ್ನುವ ಶಾಲೆ ಮಾಡಿದ ಮೇಲೂ ಅಲ್ಲಿಯ ಶಿಕ್ಷಕರಲ್ಲಿದೆ.

ನೀವು ಗಮನಿಸಲೇಬೇಕಾಗಿರುವುದು ಹಳ್ಳಿಯ ಈ ಸರ್ಕಾರಿ ಶಾಲೆ ಈ ರೀತಿ ರೂಪುಗೊಳಿಸುವಲ್ಲಿ ವೆಚ್ಚವಾಗಿರುವ ಮೊತ್ತ ಒಂದೆರಡು ರೂಪಾಯಿಗಳಲ್ಲ, ಅದು ಕಲ್ಲು, ಮರಳು ಇತರೆ ಸಾಮಗ್ರಿ ಹಾಗೂ ಮಾನವ ದಿನ ಲೆಕ್ಕ ಹಾಕಿದರೆ ಸುಮಾರು 10 ಲಕ್ಷ ಮೀರಿರಬಹುದು. ಆದರೆ ತಮ್ಮೂರ ಶಾಲೆಯನ್ನು ದೇಗುಲ ಮಾಡ ಹೊರಟ ಶಿಕ್ಷಕ ತಾನೇ ರಾತ್ರಿ ಹಗಲು ಶ್ರಮ ಹಾಕುತ್ತಿರುವುದನ್ನು ಗಮನಿಸಿದ ಊರ ಜನ ಮನದುಂಬಿ ತಾವೂ ಶ್ರಮದಾನದ ಮೂಲಕ ಸಹಕಾರ ನೀಡಿದರು. ಮತ್ತು ಊರಿನಲ್ಲಿಯೇ ಸಿಗುವ ಕಲ್ಲು, ಮರಳು ತಂದು ಹಣದ ವೆಚ್ಚ ಕಡಿಮೆಯಾಗುವಂತೆ ಮಾಡಿದ ಪರಿಣಾಮ ಹೊರೆ ಎನಿಸಿಲ್ಲ. ಇದರಿಂದಾಗಿ ತಿಳಿದ ಅಂಶ ಊರ ಜನರು ಮತ್ತು ಶಾಲಾ ಶಿಕ್ಷಕರ ನಡುವೆ ಸಮನ್ವಯ ಇದ್ದರೆ ಸರ್ಕಾರಿ ಶಾಲೆ ನಿರ್ಲಕ್ಷಕ್ಕೆ ಒಳಗಾಗುವುದಿಲ್ಲ ಎನ್ನುವುದು.



Download From : www.kpscvaani.com



# ಎಸ್.ಎಸ್.ಎಲ್.ಸಿ ಪಿಯುಸಿ ನಂತರ ಮುಂದೇನು?

**ವಿದ್ಯಾರ್ಥಿಗಳಿಗೆ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ಅವರ ಭವಿಷ್ಯಕ್ಕೆ ತಿರುವು ನೀಡುವಂತಹ ಘಟ್ಟ. ಈ ಹಂತದ ನಂತರದಲ್ಲಿ ತಮ್ಮ ವೃತ್ತಿ ಭವಿಷ್ಯವನ್ನು ರೂಪಿಸಿಕೊಳ್ಳಲು ಇಚ್ಛಿಸುವವರಿಗಾಗಿ ಇರುವ ಅವಕಾಶಗಳ ಮೇಲೆ ಈ ಲೇಖನ ಬೆಳಕು ಚೆಲ್ಲಿದೆ.**

ಬಿ.ಎಸ್. ಪಲ್ಲವಿ

ಕರ್ನಾಟಕ ನಾವಿನ್ಯತೆ, ಅನ್ವೇಷಣೆ, ನವೋದ್ಯಮ, ತಾಂತ್ರಿಕತೆ, ಅನನ್ಯ ಪ್ರತಿಭೆಗಳ ತಾಣ, ವಿವಿಧ ಕೈಗಾರಿಕೆಗಳು, ಉದ್ಯಮಗಳು, ಶಿಕ್ಷಣ ಸಂಸ್ಥೆಗಳು, ವಿಭಿನ್ನ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದೆ. ಬೇರೆ ರಾಜ್ಯಗಳಿಗೆ ಹೋಲಿಸಿದರೆ ಎಸ್.ಎಸ್.ಎಲ್.ಸಿ ಮತ್ತು ಪಿಯುಸಿ ನಂತರದ ವೃತ್ತಿ ತರಬೇತಿ ಕಾರ್ಯಕ್ರಮಗಳು ಸಹ ಅಷ್ಟೇ ಆಕರ್ಷಣೀಯ ಹಾಗೂ ಸಮೃದ್ಧವಾಗಿವೆ.

ಹೊಸತನ, ಆಧುನಿಕತೆಯನ್ನೇ ಮೈಗೂಡಿಸಿಕೊಂಡಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ – ಜಿಟಿಟಿಸಿ ವೃತ್ತಿ ತರಬೇತಿಗೆ ಹೆಸರಾಗಿದೆ. "ಭವಿಷ್ಯಕ್ಕಾಗಿ ಸನ್ನದ್ಧವಾಗಿರಿ" ಎಂಬ ಘೋಷವಾಕ್ಯದಡಿ ಯುವ ಸಮೂಹದ ಕೌಶಲ್ಯ ವೃದ್ಧಿಸುವ ಕಾಯಕದಲ್ಲಿ ಈ ಸಂಸ್ಥೆ ನಿರತವಾಗಿದೆ. ಯುವ ಜನಾಂಗಕ್ಕೆ ಆಧುನಿಕ ತಂತ್ರಜ್ಞಾನ ವಲಯಗಳಲ್ಲಿ ತರಬೇತಿ ನೀಡಿ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಮಹತ್ವದ ಕೊಡುಗೆ ನೀಡುತ್ತಿದೆ. ಜಿಟಿಟಿಸಿಯ ಡಿಪ್ಲಮೋ ಮತ್ತು ಎಂಟೆಕ್ ಕಾರ್ಯಕ್ರಮಗಳು ಅತ್ಯುನ್ನತ ಗುಣಮಟ್ಟದಿಂದ ಕೂಡಿದ್ದು, ಉದ್ಯಮ ಆಧಾರಿತ ತಾಂತ್ರಿಕ ತರಬೇತಿ ನೀಡುತ್ತಿದೆ. ಪ್ರಮುಖ ಉದ್ಯಮಗಳೊಂದಿಗೆ ಸೇರಿ ಕೋರ್ಸ್‌ಗಳ ವಿನ್ಯಾಸವನ್ನು ರೂಪಿಸಲಾಗಿದೆ. ಶೇ 100 ರಷ್ಟು ಪ್ಲೇಸ್ ಮೆಂಟ್ ಜಿಟಿಟಿಸಿಯ ಗುರಿ. ಈ ವರ್ಷದಿಂದ ಜಿಟಿಟಿಸಿ ಮೂಲಕ ನಾಲ್ಕು ಡಿಪ್ಲೊಮೋ ಕಾಲೇಜುಗಳನ್ನು ಸಹ ಪ್ರಾರಂಭಿಸುತ್ತಿದ್ದು, ಇದರಿಂದ ಸಂಸ್ಥೆ ಮತ್ತಷ್ಟು ಬಲಗೊಳ್ಳುವ ಜತೆಗೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆ.

ಜಿಟಿಟಿಸಿಯು ಕರ್ನಾಟಕದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯ ಸ್ವಾಯತ್ತ ಸಂಸ್ಥೆ. ಇಲ್ಲಿನ ಕೋರ್ಸ್‌ಗಳು ಕೇವಲ ಕ್ಲಾಸ್‌ರೂಮ್ ತರಬೇತಿಗಳಷ್ಟೇ ಅಲ್ಲ. ಪ್ರಾಯೋಗಿಕ ಮತ್ತು ರಚನಾತ್ಮಕ ಕಲಿಕೆಗೆ ಹೆಚ್ಚು ಒತ್ತು ನೀಡಿ ರೂಪಿಸಲಾಗಿದೆ. ಜೊತೆಗೆ ಸಿ.ಎನ್.ಸಿ ಯಂತ್ರಗಳು,



Download From : www.kpscvaani.com

ರೋಬೋಟ್‌ಗಳು, 3ಡಿ ಮುದ್ರಕಗಳು, ಸಿಎಮ್‌ಎಮ್ ಇತ್ಯಾದಿ ಅತ್ಯಾಧುನಿಕ ಯಂತ್ರಗಳಲ್ಲಿ ಕೆಲಸ ಮಾಡಲು ಕಲಿಕಾರ್ಥಿಗಳಿಗೆ ಸದಾವಕಾಶ ದೊರೆತಿದೆ.

ವಿದ್ಯಾರ್ಥಿಗಳು ತಮ್ಮ ವೃತ್ತಿಜೀವನ ಪ್ರಾರಂಭಿಸುವ ಮುನ್ನ ನೀಡುವ ಒಂದು ವರ್ಷದ ಕಡ್ಡಾಯ ಕೈಗಾರಿಕಾ ತರಬೇತಿಯು ಹೆಚ್ಚಿನ ತಾಂತ್ರಿಕ ಕೌಶಲ್ಯ ವರ್ಧನೆ ಜತೆಗೆ ಕೈಗಾರಿಕೆಗಳ ವಾತಾವರಣಕ್ಕೆ ಹೊಂದಿಕೊಳ್ಳಲು ಸಹಕಾರಿಯಾಗಿದೆ. ಡಿಪ್ಲೋಮಾ ಮತ್ತು ಎಮ್. ಟೆಕ್ ವಿದ್ಯಾರ್ಥಿಗಳಿಗೆ ವಿವಿಧ ಕೈಗಾರಿಕಾ ವಲಯದಲ್ಲಿ ಶೇ 100 ರಷ್ಟು ಉದ್ಯೋಗಾವಕಾಶ ಲಭ್ಯವಾಗುತ್ತಿದೆ. ದೇಶ ಹಾಗೂ ವಿದೇಶಗಳಲ್ಲಿ ಇವರಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಜಿಟಿಟಿಸಿಯ ಡಿಪ್ಲೋಮಾ ಕೋರ್ಸುಗಳು ಎಐಸಿಟಿಇ ಮತ್ತು ಡಿಟಿಇ ಯಿಂದ ಅನುಮೋದಿತಗೊಂಡಿರುವುದು ವಿಶೇಷ.

ಜಿಟಿಟಿಸಿ ಈವರೆಗೆ ಒಂದು ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ತರಬೇತಿ ನೀಡಿ ವಿವಿಧ ಕ್ಷೇತ್ರಗಳಲ್ಲಿ ಉದ್ಯೋಗಾವಕಾಶ ಕಲ್ಪಿಸಿರುವುದು ಇದರ ಹೆಗ್ಗಳಿಕೆಯಾಗಿದೆ. ಡಿಪ್ಲೋಮಾ ವಿದ್ಯಾರ್ಹತೆ ಹೊಂದಿದವರಿಗೆ ಲ್ಯಾಟರಲ್ ಎಂಟ್ರಿ ಮೂಲಕ ಇಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೂ ಅವಕಾಶ ನೀಡಲಾಗುತ್ತಿದೆ.

ಹಾಲಿ ಮತ್ತು ಹೊಸ ಕೈಗಾರಿಕೆಗಳಿಗೆ ಕೌಶಲ್ಯಭರಿತ ಮಾನವ ಸಂಪನ್ಮೂಲ, ತಾಂತ್ರಿಕ ಸೇವೆ ಒದಗಿಸಲು 28 ಜಿಟಿಟಿಸಿ ಕೇಂದ್ರಗಳನ್ನು ಆರಂಭಿಸಿದೆ. ಟೂಲಿಂಗ್, ಪ್ರಿಸಿಷನ್ ಉತ್ಪಾದನಾ ತಂತ್ರಜ್ಞಾನಗಳು, ಮೆಕಾಟ್ರಾನಿಕ್ಸ್ ಮತ್ತು ಎಲೆಕ್ಟ್ರಾನಿಕ್ಸ್‌ಗಳಲ್ಲಿ ಪರಿಕಲ್ಪನೆಯಿಂದ ಅಂತಿಮ ಉತ್ಪನ್ನದವರೆಗೆ ತರಬೇತಿ ನೀಡಲಾಗುತ್ತಿದೆ. ಉತ್ಪಾದನೆ, ಸಂಶೋಧನೆ, ಅಭಿವೃದ್ಧಿ ಹಾಗೂ ಕನ್ಸಲ್ಟೆನ್ಸಿ ಸೇವೆಗಳಲ್ಲಿ ಜಿಟಿಟಿಸಿಗಳು ಅಂತರರಾಷ್ಟ್ರೀಯ ಶ್ರೇಷ್ಠತೆಯ ಕೇಂದ್ರವಾಗಿ ಬೆಳೆಯುವ ಗುರಿ ಹೊಂದಿದೆ.

ಇಲ್ಲಿ ತರಬೇತಿ ಪಡೆದವರು ಯಶಸ್ವಿ ಉದ್ದಿಮೆದಾರರಾಗಿದ್ದಾರೆ, ಇಲ್ಲವೆ ಪ್ರತಿಷ್ಠಿತ ಕೈಗಾರಿಕೆಗಳಲ್ಲಿ ಉನ್ನತ ಹುದ್ದೆಗಳನ್ನು ಪಡೆದುಕೊಂಡಿದ್ದಾರೆ. ಜಿಟಿಟಿಸಿಯಲ್ಲಿ ಅಲ್ಪಾವಧಿ, ದೀರ್ಘಾವಧಿ, ಕೌಶಲ್ಯಾಭಿವೃದ್ಧಿ ತರಬೇತಿ ಕೋರ್ಸ್‌ಗಳ ಜತೆಗೆ ಕಾರ್ಪೋರೇಟ್ ತರಬೇತಿಯನ್ನೂ ನೀಡಲಾಗುತ್ತದೆ.

ಬದ್ಧತೆ ಮತ್ತು ಅರ್ಹತೆಯುಳ್ಳ ಬೋಧಕ ಸಿಬ್ಬಂದಿ ತಂಡವನ್ನು ಸಂಸ್ಥೆ ಹೊಂದಿದ್ದು, ಇವರಿಗೂ ಸಹ ಆಧುನಿಕ ತಂತ್ರಜ್ಞಾನ ಕುರಿತು ತರಬೇತಿ ನೀಡಲಾಗುತ್ತಿದೆ. ಜಿಟಿಟಿಸಿಯು ರೊಬೊಟಿಕ್ಸ್, ಇಂಡಸ್ಟ್ರೀಯಲ್ ಆಟೋಮೇಷನ್, ಹೈಡ್ರಾಲಿಕ್ಸ್ ಅಂಡ್ ನ್ಯೂಮಾಟಿಕ್ಸ್, ಎಲೆಕ್ಟ್ರೋ ನ್ಯೂಮಾಟಿಕ್ಸ್, ಎಲೆಕ್ಟ್ರೋ ಹೈಡ್ರಾಲಿಕ್ಸ್, ಸೆನ್ಸಾರ್‌ಗಳು, ಮೈಕ್ರೋ ಕಂಟ್ರೋಲರ್‌ಗಳು, ಪ್ರೋಗ್ರಾಮಬಲ್ ಲಾಜಿಕ್ ಸರ್ಕ್ಯೂಟ್‌ಗಳು ಮತ್ತು ಮತ್ತು ಕಂಟ್ರೋಲ್ ಸಿಸ್ಟಮ್‌ಗಳೊಂದಿಗೆ ಸನ್ನದ್ಧವಾಗಿದ್ದು, ಪ್ರಾಯೋಗಿಕ ಅನುಭವ ನೀಡುತ್ತವೆ.

**ಜಿಟಿಟಿಸಿಯ ಡಿಪ್ಲಮೋ ಮತ್ತು ಎಂಟೆಕ್ ಕಾರ್ಯಕ್ರಮಗಳು ಅತ್ಯುನ್ನತ ಗುಣಮಟ್ಟದಿಂದ ಕೂಡಿದ್ದು, ಉದ್ಯಮ ಆಧಾರಿತ ತಾಂತ್ರಿಕ ತರಬೇತಿ ನೀಡುತ್ತಿದೆ. ಪ್ರಮುಖ ಉದ್ಯಮಗಳೊಂದಿಗೆ ಸೇರಿ ಕೋರ್ಸ್‌ಗಳ ವಿನ್ಯಾಸವನ್ನು ರೂಪಿಸಲಾಗಿದೆ. ಶೇ 100 ರಷ್ಟು ಪ್ಲೇಸ್ ಮೆಂಟ್ ಜಿಟಿಟಿಸಿಯ ಗುರಿ.**

ಜಿಟಿಟಿಸಿಯ ಡಿಪ್ಲೋಮೋ ಕೋರ್ಸ್‌ಗಳಲ್ಲಿ ಟೂಲ್ ಅಂಡ್ ಡೈ ಮೇಕಿಂಗ್, ಮೆಕಟ್ರಾನಿಕ್ಸ್, ಇನ್ ಪ್ಲಾಂಟ್ ತರಬೇತಿ, ಪ್ರಿಸಿಷನ್ ಮ್ಯಾನುಫ್ಯಾಕ್ಚರಿಂಗ್, ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್, ಟೂಲ್ ಡಿಸೈನ್ ಕೋರ್ಸ್‌ಗಳು, ಟೂಲ್ ಡಿಸೈನ್‌ನಲ್ಲಿ ಪೋಸ್ಟ್ ಡಿಪ್ಲೊಮೋ ಕೋರ್ಸ್‌ಗಳ ಜತೆಗೆ ಟೂಲ್ ಇಂಜಿನಿಯರಿಂಗ್‌ನಲ್ಲಿ ಎಂ.ಟೆಕ್ ಕೋರ್ಸ್‌ಗಳಿವೆ.

ದೇಶದ ಹೆಮ್ಮೆ ಲಘು ಯುದ್ಧ ವಿಮಾನ – ಎಲ್.ಸಿ.ಎ ತೇಜಸ್‌ಗೆ ಜಿಟಿಟಿಸಿ ಕೊಡುಗೆ ಇದೆ. ಎಡಿಎಗೆ ಕ್ಯಾಮರ ಮೌಂಟಿಂಗ್ ಫಿಕ್ಸ್ಚರ್‌ಗಳನ್ನು, ಎನ್.ಎ.ಎಲ್ ಗೆ ಫಿನ್ಸ್‌ಗಳನ್ನು, ಯು.ಆರ್. ರಾವ್ ಉಪಗ್ರಹ ಕೇಂದ್ರ ಮತ್ತು ಅದರ ಸೋದರ ಸಂಸ್ಥೆಗಳಿಗೆ ಪ್ರಿಸಿಷನ್ ಭಾಗಗಳನ್ನು, ಬಿ.ಎಚ್.ಇ.ಎಲ್, ಎಚ್.ಎ.ಎಲ್, ಬಿ.ಇ.ಎಲ್. ಕ.ವಿ.ಕಾ, ಎಲ್ ಅಂಡ್ ಟಿ ಮತ್ತಿತರ ಸಂಸ್ಥೆಗಳಿಗೆ ಪ್ರೆಸ್ ಟೂಲ್‌ಗಳ ವಿನ್ಯಾಸ ಮತ್ತು ಉತ್ಪಾದನೆ ಮಾಡಿಕೊಟ್ಟಿವೆ. ಎಚ್.ಎ.ಎಲ್, ಬಿ.ಇ.ಎಲ್, ಪ್ರಿಕಾಲ್, ಸಿ.ಡಿ.ಒ.ಟಿ, ಕೆ.ಎಸ್ ಅಂಡ್ ಡಿ.ಎಲ್, ಬೆಸ್ಕಾಂ, ಟಯೋಟಾ, ಫಿಲ್ ಕಾರ್ಪೋರೇಷನ್, ಟಾಟಾ, ಇನ್ಫೋಸಿಸ್ ಮತ್ತಿತರ ಸಂಸ್ಥೆಗಳಿಗೆ ಪ್ರಿಸಿಷನ್ ಪ್ಲಾಸ್ಟಿಕ್ ಮೌಲ್ಡ್‌ಗಳ ವಿನ್ಯಾಸ ಮತ್ತು ಉತ್ಪಾದನೆ ಸೇರಿ ಹತ್ತು ಹಲವು ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಜಿಟಿಟಿಸಿ ಕಾರ್ಯನಿರ್ವಹಿಸುತ್ತಿದೆ.

10 ನೇ ತರಗತಿ ಉತ್ತೀರ್ಣರಾದವರಿಗೆ ಮೂರು ಪ್ಲಸ್ ಒಂದು ಸೇರಿ ನಾಲ್ಕು





Download From : www.kpscvaani.com

ವರ್ಷದ ಡಿಪ್ಲೋಮೋ ಇನ್ ಟೂಲ್ ಅಂಡ್ ಡೈ ಮೇಕಿಂಗ್ ಕೋರ್ಸ್ ಇದ್ದು, ಎಲ್ಲಾ ಜಿಟಿಟಿಸಿ ಕೇಂದ್ರಗಳಲ್ಲಿ ಇದು ಲಭ್ಯವಿದೆ. 10 ನೇ ತರಗತಿ ಉತ್ತೀರ್ಣರಾದವರಿಗೆ ನಾಲ್ಕು ವರ್ಷಗಳ ಡಿಪ್ಲೊಮೋ ಇನ್ ಪ್ರಿಸಿಷನ್ ಮ್ಯಾನುಪ್ಯಾಕ್ಚರಿಂಗ್ ಕೋರ್ಸ್ ಬೆಂಗಳೂರು, ಮೈಸೂರು, ಮಂಗಳೂರು, ಕಲಬುರಗಿ, ಬೆಳಗಾವಿ ಮತ್ತು ಹುಬ್ಬಳ್ಳಿ ಕೇಂದ್ರಗಳಲ್ಲಿದೆ. 10 ನೇ ತರಗತಿ ಉತ್ತೀರ್ಣರಾದವರಿಗೆ ನಾಲ್ಕು ವರ್ಷಗಳ ಡಿಪ್ಲೊಮೋ ಇನ್ ಮೆಕಾಟ್ರಾನಿಕ್ಸ್ ಕೋರ್ಸ್ ಇದ್ದು, ಬೆಂಗಳೂರು, ಗೌರಿಬಿದನೂರು, ಚಿಕ್ಕೋಡಿ, ಗೋಕಾಕ್, ಉಡುಪಿ, ಚಿತ್ರದುರ್ಗ, ಚಳ್ಳಕೆರೆ, ಕೊಪ್ಪಳ ಮತ್ತು ಯಾದಗಿರಿ ಕೇಂದ್ರಗಳಲ್ಲಿ ಲಭ್ಯವಿದೆ. 10 ನೇ ತರಗತಿ ಉತ್ತೀರ್ಣರಾದವರಿಗೆ ಮೂರು ವರ್ಷಗಳ ಡಿಪ್ಲೊಮೋ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿಯರಿಂಗ್ ಕೋರ್ಸ್ ಬೆಂಗಳೂರು ಕೇಂದ್ರದಲ್ಲಿ ಲಭ್ಯವಿದೆ.

ಡಿಪ್ಲೊಮೋ ಕೋರ್ಸ್‌ಗಳಿಗೆ ಡಿಟಿಇ ಮತ್ತು ಎಐಸಿಟಿಇ ನಿಯಮಗಳ ಅನ್ವಯ ಮೆರಿಟ್ ಮತ್ತು ರೋಸ್ಟರ್, ಕೌನ್ಸಿಲಿಂಗ್ ಮೂಲಕ ಪ್ರವೇಶ ದೊರೆಯಲಿದೆ.

ಇನ್ನು ಐಟಿಐ ವಿದ್ಯಾರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಪ್ರವೇಶಾವಕಾಶವೂ ದೊರೆಯಲಿದೆ. ವಿಶೇಷವಾಗಿ ಡಿಪ್ಲೊಮೋ ಇನ್ ಟೂಲ್ ಅಂಡ್ ಡೈ ಮೇಕಿಂಗ್ ಮತ್ತು ಡಿಪ್ಲೊಮೋ ಇನ್ ಪ್ರಿಸಿಷನ್ ಮ್ಯಾನುಪ್ಯಾಕ್ಚರಿಂಗ್, ಡಿಪ್ಲೊಮೋ ಇನ್ ಮ್ಯಾಕಾಟ್ರಾನಿಕ್ಸ್, ಡಿಪ್ಲೊಮೋ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಮೂರನೇ ಸೆಮಿಸ್ಟರ್ ಡಿಪ್ಲೊಮೋ ಕೋರ್ಸ್‌ಗಳಿಗೆ ಪ್ರವೇಶ ಪಡೆಯಬಹುದಾಗಿದೆ.

ಇದರ ಜತೆಗೆ ಕಾಂಪಿಟೆನ್ಸಿ ಸರ್ಟಿಫಿಕೆಟ್ ಡಿಪ್ಲೊಮೋ ಕೋರ್ಸ್‌ಗಳು ಸಹ ಇವೆ. 10 ನೇ ತರಗತಿ ಉತ್ತೀರ್ಣರಾದವರಿಗೆ ಮೂರು ವರ್ಷಗಳ ಸರ್ಟಿಫಿಕೇಟ್ ಇನ್ ಡಿಪ್ಲೊಮೋ ಕೋರ್ಸ್ ಇನ್ ಟೂಲ್ ಮ್ಯಾನುಪ್ಯಾಕ್ಚರಿಂಗ್, ಸರ್ಟಿಫಿಕೇಟ್ ಡಿಪ್ಲೊಮೋ ಕೋರ್ಸ್ ಇನ್ ಕಂಪ್ಯೂಟರ್ ಇಂಟಿಗ್ರೇಟೆಡ್ ಮ್ಯಾನುಪ್ಯಾಕ್ಚರಿಂಗ್ ಕೋರ್ಸ್‌ಗಳು ಎಲ್ಲಾ ಕೇಂದ್ರಗಳಲ್ಲಿ ಲಭ್ಯವಿದೆ. 10 ನೇ ತರಗತಿ ಉತ್ತೀರ್ಣರಾದವರಿಗೆ ಎರಡು ವರ್ಷಗಳ ಟೂಲ್ ಅಂಡ್ ಡೈ ಟೆಕ್ನಿಷಿಯನ್ ಕೋರ್ಸ್ ಎಲ್ಲಾ ಕೇಂದ್ರಗಳಲ್ಲಿ ಲಭ್ಯವಿದೆ. 10 ನೇ ತರಗತಿ ಉತ್ತೀರ್ಣರಾದವರಿಗೆ ಒಂದು ವರ್ಷದ ಟೂಲ್ ರೂಂ ಮಿಷಿನಿಸ್ಟ್, ಕಾಂಪೋಸಿಟ್ ಮಿಷಿನಿಸ್ಟ್ ಕೋರ್ಸ್‌ಗಳು ಎಲ್ಲಾ ಜಿಟಿಟಿಸಿ ಕೇಂದ್ರಗಳಲ್ಲಿ ಲಭ್ಯವಿದೆ. 10 ನೇ ತರಗತಿ ಉತ್ತೀರ್ಣರಾದವರಿಗೆ ಒಂದು ವರ್ಷದ ಪೋಸ್ಟ್ ಡಿಪ್ಲೊಮೋ ಇನ್ ಟೂಲ್ ಡಿಸೈನ್ ಅಂಡ್ ಕ್ಯಾಡ್/ ಕ್ಯಾಮ್ ಕೋರ್ಸ್‌ಗಳು ಬೆಂಗಳೂರು, ಮೈಸೂರು, ದಾಂಡೇಲಿ ಮತ್ತು ಕಲಬುರಗಿಯಲ್ಲಿದೆ. 10 ನೇ ತರಗತಿ ಉತ್ತೀರ್ಣರಾದವರಿಗೆ ಒಂದು ವರ್ಷದ ಟೂಲ್ ಅಂಡ್ ಡೈ ಟೆಕ್ನಿಷಿಯನ್ ಕೋರ್ಸ್ ಬೆಂಗಳೂರು, ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿದೆ.

ಅಲ್ಪಾವಧಿ ಸ್ಪರ್ಧಾತ್ಮಕ ಕೋರ್ಸ್‌ಗಳು: ಐಟಿಐ, ಡಿಪ್ಲೊಮೋ, ಬಿಇ ಮಾಡಿದವರಿಗಾಗಿ ಸಾಫ್ಟ್‌ವೇರ್‌ಗಳಲ್ಲಿ ಕ್ಯಾಡ್ – ಕ್ಯಾಮ್ ಕೋರ್ಸ್‌ಗಳು, ಆಟೋ ಕ್ಯಾಡ್, ಸಾಲಿಡ್ ವರ್ಕ್ಸ್, ಸಿ.ಆರ್.ಇ.ಓ, ಮಾಸ್ಟರ್ ಕ್ಯಾಮ್, ಸೀಮನ್ಸ್ ಎನ್,ಎಕ್ಸ್ ಅಂಡ್ ಕ್ಯಾಟಿಯಾ ಕೋರ್ಸ್‌ಗಳನ್ನು ಒಂದು ತಿಂಗಳ ಕೋರ್ಸ್, ಪ್ರತಿ ತಿಂಗಳ ಮೊದಲ ವಾರದಲ್ಲಿ ನಡೆಯಲಿದೆ, ಎನ್,ಸಿ ಪ್ರೋಗ್ರಾಮಿಂಗ್ ಅಂಡ್ ಆಪರೇಷನ್ಸ್ ಕೋರ್ಸ್‌ಗಳನ್ನು ಐಟಿಐ, ಡಿಪ್ಲೊಮೋ, ಬಿಇ ಮಾಡಿದವರಿಗಾಗಿ ಒಂದು ತಿಂಗಳ ಕೋರ್ಸ್, ಪ್ರತಿ ತಿಂಗಳ ಮೊದಲ ವಾರದಲ್ಲಿ ಆಯೋಜಿಸಲಾಗುತ್ತದೆ. ಮೆಟ್ರೋಲಜಿ ಅಂಡ್ ಮೆಷರ್ ಮೆಂಟ್ಸ್, ಐಟಿಐ. ಡಿಪ್ಲೊಮೋ, ಬಿಇ ಅಧ್ಯಯನ ಮಾಡಿದವರಿಗಾಗಿ ಒಂದು ತಿಂಗಳ ಕೋರ್ಸ್, ಪ್ರತಿ ತಿಂಗಳ ಮೊದಲ ವಾರದಲ್ಲಿ ಏರ್ಪಡಿಸಲಾಗುತ್ತದೆ. ಸಿ.ಎಂ.ಎಂ ಪ್ರೋಗ್ರಾಮಿಂಗ್ ಅಂಡ್ ಆಪರೇಷನ್ಸ್ ಕೋರ್ಸ್‌ಗಳನ್ನು ಐಟಿಐ,ಡಿಪ್ಲೊಮೋ, ಬಿಇ ವಿದ್ಯಾರ್ಹತೆಯವರಿಗಾಗಿ ಎರಡು ವಾರಗಳು, ಪ್ರತಿ ತಿಂಗಳ ಮೊದಲ ವಾರದಲ್ಲಿ ನಡೆಸಲಾಗುತ್ತದೆ. ಹೈಡ್ರಾಲಿಕ್ಸ್ ಮತ್ತು ನ್ಯೂಮ್ಯಾಟಿಕ್ಸ್ ಕೋರ್ಸ್‌ಗಳನ್ನು ಐಟಿಐ, ಡಿಪ್ಲೊಮೋ, ಬಿಇ ಅಧ್ಯಯನ ಮಾಡಿರುವವರಿಗಾಗಿ ಪ್ರತಿ ತಿಂಗಳ ಮೊದಲ ವಾರದಲ್ಲಿ ಒಂದು ವಾರದ ಕಾಲ ತರಬೇತಿ ನೀಡಲಾಗುತ್ತದೆ. ಎಸ್.ಎಸ್.ಎಲ್.ಸಿ ಅಧ್ಯಯನ ಮಾಡಿರುವವರಿಗಾಗಿ ಆಫೀಸ್ ಆಟೋಮೇಷನ್ ಕೋರ್ಸ್‌ಗಳನ್ನು ಒಂದು ತಿಂಗಳ ಕಾಲ ಪ್ರತಿ ತಿಂಗಳ ಮೊದಲ ವಾರದಲ್ಲಿ ನಡೆಸಲಾಗುತ್ತದೆ. ಪರಿಶಿಷ್ಟ ಜಾತಿ, ಪಂಗಡ, ಇತರೆ ಹಿಂದುಳಿದ ವರ್ಗದವರು ಮತ್ತು ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನದ ಸೌಲಭ್ಯ ಕಲ್ಪಿಸಲಾಗುತ್ತದೆ.

ಇಂತಹ ತರಬೇತಿ ಪಡೆದ ನಂತರ ಮುಂದೆ ಎಲ್ಲಿ ಉದ್ಯೋಗ ಎಂಬ ಪ್ರಶ್ನೆ ಸಹಜ. ವೈಮಾನಿಕ ಕ್ಷೇತ್ರ, ರಕ್ಷಣಾ ವಲಯ, ಕೃಷಿ, ವಾಹನೋದ್ಯಮ, ಗೃಹ ಬಳಕೆಯ ವಿದ್ಯುನ್ಮಾನ ಉಪಕರಣಗಳು, ವಿದ್ಯುತ್ ಚಾಲಿತ ವಾಹನಗಳ ವಲಯ, ಆಹಾರ ಮತ್ತು ಪಾನೀಯ, ಮರಗೆಲಸ ಮತ್ತು ಸೈನ್ ಬೋರ್ಡ್, ಮೂಲ ಸೌಕರ್ಯ, ಲೋಹ ಮತ್ತು ಗಣಿಗಾರಿಕೆ, ಇಂಧನ, ಪ್ಯಾಕೇಜಿಂಗ್ ಉದ್ಯಮ, ಔಷಧ ಉದ್ಯಮ, ರೈಲ್ವೆ, ಹಡಗು ನಿರ್ಮಾಣ, ಸ್ಮಾರ್ಟ್ ಸಿಟಿ, ಕರಕುಶಲ ವಸ್ತುಗಳು ಮತ್ತು ಆಟಿಕೆಗಳ ಉದ್ಯಮ ವಲಯದಲ್ಲಿ ಉದ್ಯೋಗಾವಕಾಶಗಳು ದೊರೆಯಲಿವೆ. ವಿಶೇಷವಾಗಿ ಕೊಪ್ಪಳದಲ್ಲಿ ವಿಶ್ವ ಮಟ್ಟದ ಆಟಿಕೆ ಕ್ಲಸ್ಟರ್ ನಿರ್ಮಾಣವಾಗುತ್ತಿದ್ದು, ಮತ್ತೊಂದೆಡೆ ಚನ್ನಪಟ್ಟಣದ ಆಟಿಕೆಗಳಿಗೂ ಹೆಚ್ಚಿನ ಪ್ರಧಾನ್ಯತೆ ದೊರೆಯುತ್ತಿದೆ. ಈ ಎಲ್ಲಾ ಕಡೆಗಳಲ್ಲೂ ಉದ್ಯೋಗ ಲಭ್ಯವಾಗಲಿದೆ.

ಇಲ್ಲಿ ಒಂದು ಹಾಗೂ ಎರಡು ವರ್ಷದ ದೀರ್ಘಾವಧಿ ವೃತ್ತಿ ಶಿಕ್ಷಣ ಕೋರ್ಸ್‌ಗಳು ಲಭ್ಯವಿದೆ. ಒಂದು ವರ್ಷದ ಕೋರ್ಸ್‌ಗಳಲ್ಲಿ ಗಣಕ ಯಂತ್ರ ಉಪಕೃತ ಉತ್ಪಾದನೆ, ಉತ್ಪಾದನಾ ಪ್ರಕ್ರಿಯೆ ನಿಯಂತ್ರಣ ಹಾಗೂ ಸ್ವಯಂಚಾಲನೆ. ಮೂಲವಿನ್ಯಾಸ ಹಾಗೂ ಅಡಿಟೀವ್ ಉತ್ಪಾದನೆ. ಕೈಗಾರಿಕಾ ರೋಬೋಟಿಕ್ಸ್ ಹಾಗೂ ಡಿಜಿಟಲ್ ಉತ್ಪಾದನೆ. ಅತ್ಯಾಧುನಿಕ ಪ್ಲಂಬಿಂಗ್, ಅತ್ಯಾಧುನಿಕ ಉಪಕರಣಗಳಿಂದ ಕಲಾಕೃತಿ ನಿರ್ಮಾಣ ವಲಯದಲ್ಲಿ ತರಬೇತಿ ದೊರೆಯಲಿದೆ.

ಇದರ ಜತೆಗೆ ನ್ಯಾಷನಲ್ ಅಪ್ರೆಂಟಿಶಿಪ್ ಉತ್ತೇಜನ ಯೋಜನೆ – ಎನ್.ಎ.ಪಿ.ಎಸ್ ಮತ್ತು ಕರ್ನಾಟಕ ಅಪ್ರೆಂಟಿಶಿಪ್ ತರಬೇತಿ ಯೋಜನೆ – ಕೆ.ಎ.ಟಿ.ಎಸ್ ಅನ್ನು ಸಹ ಜಾರಿಗೊಳಿಸಲಾಗಿದೆ. ನ್ಯಾಷನಲ್ ಅಪ್ರೆಂಟಿಶಿಪ್ ಯೋಜನೆಯನ್ನು ಕೇಂದ್ರ ಸರ್ಕಾರ 2016 ರ ಆಗಸ್ಟ್ 19 ರಿಂದ ಜಾರಿಗೆ ತಂದಿದೆ. ಇದರಡಿ ಶೆ 25 ರಷ್ಟು ಶಿಷ್ಯ ವೇತನ ಅಂದರೆ ಗರಿಷ್ಠ ಮಾಸಿಕ 1,500 ರೂ, ಮೊತ್ತ ದೊರೆಯಲಿದೆ.



Download From : www.kpscvaani.com

ಕೇಂದ್ರ ವಲಯದ ಮಾದರಿಯಂತೆ ರಾಜ್ಯದಲ್ಲೂ ಅಪ್ರೆಂಟಿಶಿಪ್ ಯೋಜನೆ ಜಾರಿಗೊಳಿಸಲಾಗಿದ್ದು, 2020 – 21 ನೇ ಸಾಲಿನ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಕರ್ನಾಟಕ ಅಪ್ರೆಂಟಿಶಿಪ್ ಯೋಜನೆಯಡಿ 18 ಕೋಟಿ ರೂಪಾಯಿ ಮಂಜೂರು ಮಾಡಲಾಗಿದ್ದು, ಸರ್ಕಾರ ಗರಿಷ್ಠ 1,500 ರೂಪಾಯಿ ಮೊತ್ತವನ್ನು ಪ್ರತಿ ಅಪ್ರೆಂಟಿಶಿಪ್‌ಗೆ ನೀಡಲಾಗುತ್ತಿದೆ.

ಈ ಬಾರಿ ಕೋವಿಡ್ ಸಂಕಷ್ಟದಿಂದಾಗಿ ಈ ಬಾರಿ ಶೆ 99.9 ರಷ್ಟು ಮಂದಿ ಎಸ್.ಎಸ್.ಎಲ್.ಸಿಯಲ್ಲಿ ಉತ್ತೀರ್ಣರಾಗಿದ್ದಾರೆ. ಇವರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವೃತ್ತಿ ತರಬೇತಿ ಪಡೆದುಕೊಳ್ಳಲು ಆಸಕ್ತರಾಗಿದ್ದು, ಅವರ ನಿರೀಕ್ಷೆ ಮತ್ತು ಆಕಾಂಕ್ಷೆಗಳನ್ನು ಪೂರೈಸಲು ಐಟಿಐಗಳು ಸಜ್ಜಾಗಿದೆ.

ರಾಜ್ಯದಲ್ಲಿ 22 ಮಹಿಳಾ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಿದ್ದು, ಇಲ್ಲಿ ಶೇಕಡ 100 ರಷ್ಟು ಸ್ಥಾನಗಳನ್ನು ಉಳಿದ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಶೇಕಡ 33 ರಷ್ಟು ಸ್ಥಾನಗಳನ್ನು ಹೆಣ್ಣು ಮಕ್ಕಳ ಪ್ರವೇಶಕ್ಕೆ ಮೀಸಲಿರಿಸಲಾಗಿದೆ. ರಾಜ್ಯದ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಖಾಸಗಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಪ್ರತಿ ಶೈಕ್ಷಣಿಕ ವರ್ಷದಲ್ಲಿ ಒಂದು ಲಕ್ಷಕ್ಕೂ ಅಧಿಕ ಸ್ಥಾನಗಳು ಪ್ರವೇಶಕ್ಕೆ ಲಭ್ಯವಿರುತ್ತದೆ. ಎನ್.ಸಿ.ವಿ.ಟಿ. ರಾಷ್ಟ್ರೀಯ ವೃತ್ತಿ ಶಿಕ್ಷಣ ಪರಿಷತ್ ಅಡಿಯಲ್ಲಿ ಮಾನ್ಯತೆ/ ಸಂಯೋಜನೆ ಪಡೆದ ವೃತ್ತಿಗಳಿಗೆ ತರಬೇತಿ ಮತ್ತು ಪರೀಕ್ಷೆ ನಡೆಸಲಾಗುತ್ತದೆ.

ಇನ್ನು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿನ ವಿಶೇಷತೆಗಳನ್ನು ನೋಡುವುದಾದರೆ ಸರ್ಕಾರಿ ಸಂಸ್ಥೆಗಳಲ್ಲಿ ತರಬೇತಿ ಪಡೆಯುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅವರ ಕುಟುಂಬದ ಆದಾಯಮಿತಿಗೆ ಒಳಪಟ್ಟು ಮಾಸಿಕ 50 ರೂಪಾಯಿಯಂತೆ ಶಿಷ್ಯವೇತನ ನೀಡಲಾಗುತ್ತದೆ. ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಮಾಸಿಕ 150 ರೂಪಾಯಿ ವಿದ್ಯಾರ್ಥಿ ವೇತನವನ್ನು ಇಲಾಖೆಯಿಂದ ನೀಡಲಾಗುತ್ತಿದೆ. ತರಬೇತಿ ಪಡೆದವರಿಗೆ ರಾಷ್ಟ್ರಮಟ್ಟದ ರಾಷ್ಟ್ರೀಯ ವೃತ್ತಿ ತರಬೇತಿ ಪ್ರಮಾಣಪತ್ರ ಲಭ್ಯವಾಗಲಿದೆ. ಈ ಪ್ರಮಾಣ ಪತ್ರಗಳು ದೇಶಾದ್ಯಂತ ಮಾನ್ಯತೆ ಪಡೆದಿರುತ್ತದೆ. ಐ.ಟಿ.ಐ ನಂತರ ಉನ್ನತ ವ್ಯಾಸಂಗಕ್ಕೆ ಅವಕಾಶ ಪಡೆದ ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಡಿಪ್ಲೋಮಾ ಕೋರ್ಸ್‌ಗಳಿಗೆ ದ್ವಿತೀಯ ವರ್ಷಕ್ಕೆ ಪ್ರವೇಶ ಹೊಂದಲು ಅವಕಾಶ ಕಲ್ಪಿಸಲಾಗಿದೆ.

ಕರ್ನಾಟಕ – ಜರ್ಮನ್ ಟೆಕ್ನಿಕಲ್ ಟ್ರೈನಿಂಗ್ ಇನ್ಸ್ಟಿಟ್ಯೂಟ್ – ಕೆ.ಜಿ.ಟಿ.ಟಿ.ಐ ರಾಜ್ಯದ ಪ್ರತಿಷ್ಠಿತ ಕೌಶಲ್ಯ ತರಬೇತಿ ಕೇಂದ್ರವು ಬೆಳೆಯುತ್ತಿರುವ ತಂತ್ರಜ್ಞಾನ, ಆಧುನಿಕ ಪರಿಕರಗಳಿಗೆ ತಕ್ಕಂತೆ ಕೌಶಲ್ಯ ತರಬೇತಿ ನೀಡುವ ಸಂಸ್ಥೆ. ಹೀಗಾಗಿಯೇ ಇಲ್ಲಿ ಶೇ.85 ರಷ್ಟು ಕೌಶಲ್ಯ ತರಬೇತಿಗೆ ಆದ್ಯತೆ ಕೊಡಲಾಗುತ್ತಿದೆ. ತಂತ್ರಜ್ಞಾನ ತರಬೇತಿಯಲ್ಲಿ ಜಗತ್ಪ್ರಸಿದ್ಧವಾಗಿರುವ ಜರ್ಮನಿ ರಾಷ್ಟ್ರದೊಂದಿಗೆ ಕೈಜೋಡಿಸಿ ಇಲ್ಲಿ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ಇಲ್ಲಿ ಅಡ್ವಾನ್ಸ್ ವೆಲ್ಡಿಂಗ್, ಮಾಹಿತಿ ತಂತ್ರಜ್ಞಾನ, ಸಿ ಅಂಡ್ ಸಿ ವೆಲ್ಡಿಂಗ್, ಎಲೆಕ್ಟ್ರಾನಿಕ್ ಡಿಸೈನ್ ಅಂಡ್ ಮ್ಯಾನುಫೆಕ್ಚರಿಂಗ್, ಇಂಡಸ್ಟ್ರೀಯಲ್ ಆಟೋಮೇಷನ್, ಎನ್‌ವೈರ್ನಮೆಂಟ್ ಇಂಜಿನಿಯರಿಂಗ್, ಆಟೋಮೊಬೈಲ್ ತಂತ್ರಜ್ಞಾನ, ಕನ್ಸ್ಟ್ರಕ್ಷನ್ ಟೆಕ್ನಾಲಜಿ, ಎಂಬೆರಿಟ್ ಕೈಗಾರಿಕಾ ತಂತ್ರಜ್ಞಾನ, ಯಾಂತ್ರೀಕೃತಗೊಂಡ ಮಾಹಿತಿ ತಂತ್ರಜ್ಞಾನ, ಉತ್ಪಾದನಾ ತಂತ್ರಜ್ಞಾನ, ವೆಲ್ಡಿಂಗ್ ತಂತ್ರಜ್ಞಾನದಲ್ಲಿ ಆಧುನಿಕ ತರಬೇತಿ ನೀಡಲಾಗುತ್ತಿದೆ.

**ಐಟಿಐ ವಿದ್ಯಾರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಪ್ರವೇಶಾವಕಾಶವೂ ದೊರೆಯಲಿದೆ. ವಿಶೇಷವಾಗಿ ಡಿಪ್ಲೊಮೋ ಇನ್ ಟೂಲ್ ಅಂಡ್ ಡೈ ಮೇಕಿಂಗ್ ಮತ್ತು ಡಿಪ್ಲೊಮೋ ಇನ್ ಪ್ರಿಸಿಷನ್ ಮ್ಯಾನುಪ್ಯಾಕ್ಚರಿಂಗ್, ಡಿಪ್ಲೊಮೋ ಇನ್ ಮ್ಯಾಕಾಟ್ರಾನಿಕ್ಸ್, ಡಿಪ್ಲೊಮೋ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ ಮೂರನೇ ಸೆಮಿಸ್ಟರ್ ಡಿಪ್ಲೊಮೋ ಕೋರ್ಸ್‌ಗಳಿಗೆ ಪ್ರವೇಶ ಪಡೆಯಬಹುದಾಗಿದೆ.**

ಬೆಂಗಳೂರು, ಕಲಬುರಗಿ, ಬೆಳಗಾವಿ, ಮಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ಕೆಜಿಟಿಟಿಐ ಕಾರ್ಯನಿರ್ವಹಿಸುತ್ತಿದ್ದು, ಇತ್ತೀಚೆಗೆ ಮೈಸೂರಿನಲ್ಲಿ ಮತ್ತೊಂದು ಕೇಂದ್ರ ತಲೆ ಎತ್ತಿದೆ. ಇದರ ಜತೆಗೆ ಗೌರಿ ಬಿದನೂರಿನಲ್ಲಿ ವಿಸ್ತರಣಾ ಕೇಂದ್ರ ತೆರೆಯಲಾಗಿದೆ. ವಿಸ್ತರಣಾ ಚಟುವಟಿಕೆಗಳನ್ನು ಹೆಚ್ಚಿಸಲು ಸಂಸ್ಥೆ ವಿಶೇಷವಾಗಿ ಗಮನಹರಿಸುತ್ತಿದೆ.

ರಾಜ್ಯ, ಕೇಂದ್ರ ಸರ್ಕಾರದ ಜತೆಗೆ ಜರ್ಮನ್ ಇಂಟರ್ನ್ಯಾಷನಲ್ ಸರ್ವೀಸ್ – ಜಿ.ಐ.ಝಡ್ ಸಂಸ್ಥೆ ಕೆ.ಜಿ.ಟಿ.ಟಿ.ಐಗೆ ತಾಂತ್ರಿಕ ಸಹಕಾರ ನೀಡುತ್ತಿದೆ. ರಾಜ್ಯದ ಮುಖ್ಯಕಾರ್ಯದರ್ಶಿ ನೇತೃತ್ವದಲ್ಲಿ ಆಡಳಿತ ಮಂಡಳಿಯನ್ನು ರಚಿಸಲಾಗಿದ್ದು, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಪ್ರತಿನಿಧಿಗಳು ಇದರ ಸದಸ್ಯರಾಗಿದ್ದಾರೆ.

ಆಟೋಮೇಷನ್, ಆಧುನಿಕ ವೆಲ್ಡಿಂಗ್, ಉತ್ಪಾದನಾ ತಂತ್ರಜ್ಞಾನ, ವಿದ್ಯುನ್ಮಾನ ಮತ್ತು ಇಂಧನ ನಿರ್ವಹಣೆ, ಆಟೋಮೊಬೈಲ್, ನಿರ್ಮಾಣ ವಲಯ, ಮಾಹಿತಿ ತಂತ್ರಜ್ಞಾನ ಕ್ಷೇತ್ರಗಳನ್ನು ಕೇಂದ್ರೀಕರಿಸಿ, ನಿರ್ಮಾಣ ವಲಯದ ತಂತ್ರಜ್ಞಾನ – ಮ್ಯಾನುಫ್ಯಾಕ್ಚರಿಂಗ್ , ಆಟೋಮೊಬೈಲ್, ಇಂಡಸ್ಟ್ರೀಯಲ್, ಎಲೆಕ್ಟ್ರಿಕಲ್, ವೆಲ್ಡಿಂಗ್, ಇನ್ಫರ್ಮೇಷನ್, ಮತ್ತು ಕನ್ಸ್ಟ್ರಕ್ಷನ್ ಟೆಕ್ನಾಲಜಿ ಈ ವಿಷಯಗಳಲ್ಲಿ ವೃತ್ತಿ ತರಬೇತಿ ನೀಡಲಾಗುತ್ತಿದೆ.

ಒಟ್ಟಿನಲ್ಲಿ ಅತ್ಯಾಧುನಿಕ ಜಿ.ಟಿ.ಟಿ.ಸಿ ಡಿಪ್ಲಮೋ ಕೋರ್ಸ್‌ಗಳು ಶೇ 100 ರಷ್ಟು ಉದ್ಯೋಗಾವಕಾಶವನ್ನು ಒದಗಿಸಲಿರುವುದರಿಂದ ಈ ಅವಕಾಶವನ್ನು ಬಳಸಿಕೊಂಡು ಪ್ರಧಾನಿ ಅವರ ಕನಸಾದ ಆತ್ಮನಿರ್ಭರ ಭಾರತವನ್ನು ಕಟ್ಟುವ ನಿಟ್ಟಿನಲ್ಲಿ ಸ್ವಯಂ ಉದ್ಯಮಿಗಳಾಗುವ ಮೂಲಕ ಹತ್ತಾರು ಜನರಿಗೆ ಉದ್ಯೋಗವನ್ನು ಒದಗಿಸಬಹುದು.

ಹೆಚ್ಚಿನ ಮಾಹಿತಿಗೆ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ, ಕೌಶಲ್ಯ ಭವನ, ಡೈರಿ ವೃತ್ತ, ಬನ್ನೇರುಘಟ್ಟ ರಸ್ತೆ, ಬೆಂಗಳೂರು–560029, ದೂರವಾಣಿ–080–26642526, ಈಮೇಲ್ – frontdesk.kgtti@gmail.com ಅಥವಾ pscet.bangalore@gmail.com ವೆಬ್‌ಸೈಟ್ ವಿಳಾಸ www.kgmsdc/bengaluru.com ಅಥವಾ www.udyoga.karnataka.gov.in ಭೇಟಿ ನೀಡಬಹುದು.



Download From : www.kpscvaani.com



# ನೂತನ ರಾಜ್ಯ ಸಚಿವ ಸಂಪುಟ ಸಚಿವರ ಕಿರು ಪರಿಚಯ

**ಬಸವರಾಜ ಎಸ್. ಬೊಮ್ಮಾಯಿ**
ಮಾನ್ಯ ಮುಖ್ಯಮಂತ್ರಿಗಳು
ಸಿ.ಆ.ಸು.ಇ, ಸಂಪುಟ ವ್ಯವಹಾರ, ಹಣಕಾಸು, ಗುಪ್ತಚರ,
ಬೆಂಗಳೂರು ನಗರಾಭಿವೃದ್ಧಿ ಹಾಗೂ ಹಂಚಿಕೆಯಾಗದೇ ಇರುವ ಇಲಾಖೆಗಳು

## ಗೋವಿಂದ ಎಂ ಕಾರಜೋಳ



**ಕ್ಷೇತ್ರ: ಮುಧೋಳ (ಮೀಸಲು)**
**ಜನ್ಮ ದಿನಾಂಕ: 25.01.1951**
**ವಿದ್ಯಾರ್ಹತೆ: ಡಿಪ್ಲೋಮಾ (ಮೆಟಿರಿಯಲ್ ಮ್ಯಾನೇಜರ್)**
**ವೃತ್ತಿ: ಸರ್ಕಾರಿ ನೌಕರಿ, ಕೃಷಿ, ಸಮಾಜ ಸೇವೆ**
**ಖಾತೆ: ಬೃಹತ್ ಮತ್ತು ಮಧ್ಯಮ ನೀರಾವರಿ**

ಇವರು 1994–1999, 2004–2007, 2008–2013, 2013–2018ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಮೂಲಕ ಒಟ್ಟು ಐದು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಅವರು 2004ರಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿದ್ದರು. ತಮ್ಮ ರಾಜಕೀಯ ಸೇವಾ ಅವಧಿಯಲ್ಲಿ ಆಹಾರ ಮತ್ತು ನಾಗರಿಕ ಸರಬರಾಜು, ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ, ಮಾಹಿತಿ ಹಾಗೂ ಪ್ರವಾಸೋದ್ಯಮ ಮತ್ತು ಜವಳಿ, ಸಮಾಜ ಕಲ್ಯಾಣ ಸಚಿವರಾಗಿದ್ದರು. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಉಪಮುಖ್ಯಮಂತ್ರಿಯಾಗಿದ್ದರಲ್ಲದೆ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಬೃಹತ್ ಮತ್ತು ಮಧ್ಯಮ ನೀರಾವರಿ ಸಚಿವರಾಗಿದ್ದಾರೆ.

* * *

## ಡಾ. ಸಿ.ಎಸ್. ಅಶ್ವಥ್ ನಾರಾಯಣ



**ಕ್ಷೇತ್ರ: ಮಲ್ಲೇಶ್ವರಂ**
**ಜನ್ಮ ದಿನಾಂಕ: 02.02.1968**
**ವಿದ್ಯಾರ್ಹತೆ: ಎಂ.ಬಿ.ಬಿ.ಎಸ್**
**ವೃತ್ತಿ: ವೈದ್ಯಕೀಯ ಸೇವೆ**
**ಖಾತೆ: ಐಟಿ,ಬಿಟಿ ಮತ್ತು ಎಸ್‌ಟಿ, ಉನ್ನತ ಶಿಕ್ಷಣ, ಕೌಶಲ್ಯಾಭಿವೃದ್ಧಿ**

ಇವರು 2008–2013, 2013–2018ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗುವ ಮೂಲಕ ಮೂರು ಬಾರಿ ಶಾಸಕರಾಗಿದ್ದಾರೆ. 1995–1999ರಲ್ಲಿ ಸೆನೆಟ್ ಸದಸ್ಯರಾಗಿ ಮತ್ತು ರಾಜೀವ್ ಗಾಂಧಿ ಆರೋಗ್ಯ ಮತ್ತು ವಿಜ್ಞಾನ ವಿಶ್ವವಿದ್ಯಾಲಯದ ಸೆನೆಟ್ ಮತ್ತು ಸಿಂಡಿಕೇಟ್ ಸದಸ್ಯರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಐಟಿ–ಬಿಟಿ, ಉನ್ನತ ಶಿಕ್ಷಣ, ಕೌಶಲ್ಯಾಭಿವೃದ್ಧಿ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಅದೇ ಖಾತೆಯಲ್ಲಿ ಮುಂದುವರೆದಿದ್ದಾರೆ.

* * *

## ಕೆ.ಎಸ್. ಈಶ್ವರಪ್ಪ



**ಕ್ಷೇತ್ರ: ಶಿವಮೊಗ್ಗ**
**ಜನ್ಮ ದಿನಾಂಕ: 10.06.1948**
**ವಿದ್ಯಾರ್ಹತೆ: ಬಿ.ಕಾಂ**
**ವೃತ್ತಿ: ಕೈಗಾರಿಕೋದ್ಯಮಿ, ರಾಜಕೀಯ, ಸಮಾಜಸೇವೆ**
**ಖಾತೆ: ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್**

ಇವರು 1989–1994, 1994–1999, 2004–2007, 2008–2013ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು.ಪ್ರಸ್ತುತ ವಿಧಾನಸಭಾ ಸದಸ್ಯರಾಗುವ ಮೂಲಕ ಐದು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಅವರು ಈ ಹಿಂದೆ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರಾಗಿ, 2014–2018ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿ, ಮತ್ತು 2012–2013ರಲ್ಲಿ ಉಪಮುಖ್ಯಮಂತ್ರಿ ಆಗಿದ್ದರು. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಗ್ರಾಮೀಣಾಭಿವೃದ್ಧಿ, ಪಂಚಾಯತ್‌ರಾಜ್ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಅದೇ ಖಾತೆಯಲ್ಲಿ ಮುಂದುವರೆದಿದ್ದಾರೆ.

* * *



Download From : www.kpscvaani.com

## ಆರ್. ಅಶೋಕ್



**ಕ್ಷೇತ್ರ: ಪದ್ಮನಾಭನಗರ**
**ಜನ್ಮ ದಿನಾಂಕ: 01.07.1957**
**ವಿದ್ಯಾರ್ಹತೆ: ಬಿ.ಎಸ್.ಸಿ**
**ವೃತ್ತಿ: ಕೃಷಿ / ಸಾರ್ವಜನಿಕ ಸೇವೆ**
**ಖಾತೆ: ಕಂದಾಯ**

ಇವರು 1998–1999, 1999–2004, 2004–2007, 2008–2013, 2013–2018ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗುವ ಮೂಲಕ ಆರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಅವರು ಈ ಹಿಂದೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಸಾರಿಗೆ, ಆಹಾರ ಮತ್ತು ನಾಗರಿಕರ ಸರಬರಾಜು, ಗ್ರಾಹಕರ ವ್ಯವಹಾರ ಮತ್ತು ಗೃಹ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. 2012–2013ರಲ್ಲಿ ಉಪ ಮುಖ್ಯಮಂತ್ರಿಯಾಗಿದ್ದರು. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಕಂದಾಯ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಅದೇ ಖಾತೆಯಲ್ಲಿ ಮುಂದುವರೆದಿದ್ದಾರೆ.

* * *

## ಬಿ. ಶ್ರೀರಾಮುಲು



**ಕ್ಷೇತ್ರ: ಮೊಳಕಾಲ್ಮೂರು (ಮೀಸಲು)**
**ಜನ್ಮ ದಿನಾಂಕ: 08–08–1970**
**ವಿದ್ಯಾರ್ಹತೆ: ಬಿ.ಎ**
**ವೃತ್ತಿ : ವ್ಯಾಪಾರ, ರಾಜಕೀಯ**
**ಖಾತೆ: ಸಾರಿಗೆ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ**

ಇವರು 2004 – 2007, 2008 – 2013, 2013 – 2014 (29.05.2013 ರಿಂದ 19.03.2014)ರಲ್ಲಿ ವಿಧಾನಸಭಾ ಸದಸ್ಯರಾಗಿ ಮತ್ತು 2014– 2018ರಲ್ಲಿ ಲೋಕಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು ಒಟ್ಟು ಐದು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಈ ಹಿಂದೆ ಪ್ರವಾಸೋದ್ಯಮ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಆರೋಗ್ಯ, ಸಮಾಜ ಕಲ್ಯಾಣ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಸಾರಿಗೆ ಮತ್ತು ಪರಿಶಿಷ್ಟ ಪಂಗಡ ಕಲ್ಯಾಣ ಸಚಿವರಾಗಿದ್ದಾರೆ.

* * *

## ವಿ. ಸೋಮಣ್ಣ



**ಕ್ಷೇತ್ರ : ಗೋವಿಂದರಾಜ ನಗರ**
**ಜನ್ಮ ದಿನಾಂಕ : 20–07–1951**
**ವಿದ್ಯಾರ್ಹತೆ : ಬಿ.ಎ**
**ವೃತ್ತಿ : ಸಮಾಜ ಸೇವೆ, ರಾಜಕೀಯ**
**ಖಾತೆ: ವಸತಿ ಮತ್ತು ಮೂಲ ಸೌಲಭ್ಯ**

ಇವರು 1994–1999, 1999–2004, 2004–2007, 2008–2009 ರಲ್ಲಿ ವಿಧಾನಸಭಾ ಸದಸ್ಯರಾಗಿ ಮತ್ತು 2010–2018ರಲ್ಲಿ ವಿಧಾನ ಪರಿಷತ್ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರು ಅವರು ಒಟ್ಟು ಐದು ಬಾರಿ ವಿಧಾನಸಭಾ ಸದಸ್ಯರಾಗಿ ಮತ್ತು ಎರಡು ಬಾರಿ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಅವರು ಈ ಹಿಂದೆ ಬಂದೀಖಾನೆ ಮತ್ತು ಗೃಹರಕ್ಷಕ ದಳ, ವಸತಿ ಮತ್ತು ಮುಜರಾಯಿ, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳು ಮತ್ತು ವಸತಿ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ವಸತಿ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ವಸತಿ ಮತ್ತು ಮೂಲಸೌಲಭ್ಯ ಸಚಿವರಾಗಿದ್ದಾರೆ.

* * *

## ಕೋಟ ಶ್ರೀನಿವಾಸ ಪೂಜಾರಿ



**ಎಂಎಲ್‌ಸಿ, ಸ್ಥಳೀಯ ಸಂಸ್ಥೆಗಳ ಕ್ಷೇತ್ರ,**
**ಜನ್ಮ ದಿನಾಂಕ: 01–01–1960**
**ವಿದ್ಯಾರ್ಹತೆ: 7ನೇ ತರಗತಿ**
**ವೃತ್ತಿ: ಕೃಷಿ**
**ಖಾತೆ: ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ**

ಇವರು ದಿನಾಂಕ 06.01.2010–04.01.2016ರ ವರೆಗೆ ವಿಧಾನ ಪರಿಷತ್ ಸದಸ್ಯರಾಗಿದ್ದ ಇವರು ಮತ್ತೊಮ್ಮೆ 06.01.2016 ರಿಂದ 05.01.2022ರ ವರೆಗೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಪ್ರಸ್ತುತ ವಿಧಾನಪರಿಷತ್ ಸದಸ್ಯರಾಗಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಮುಜರಾಯಿ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಖಾತೆ ಸಚಿವರಾಗಿದ್ದಾರೆ.

* * *

## ಜೆ.ಸಿ. ಮಾಧುಸ್ವಾಮಿ



**ಕ್ಷೇತ್ರ: ಚಿಕ್ಕನಾಯಕನಹಳ್ಳಿ**
**ಜನ್ಮ ದಿನಾಂಕ: 04.02.1953**
**ವಿದ್ಯಾರ್ಹತೆ: ಎಂ.ಎ, ಎಲ್.ಎಲ್.ಬಿ**
**ವೃತ್ತಿ: ಕೃಷಿ**
**ಖಾತೆ: ಸಣ್ಣ ನೀರಾವರಿ, ಕಾನೂನು ಸಂಸದೀಯ ವ್ಯವಹಾರ ಮತ್ತು ಶಾಸನ ರಚನೆ**

ಇವರು 1989–1994, 1996ರ ಉಪ ಚುನಾವಣೆಯಲ್ಲಿ ಮತ್ತು 2004–2007ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗುವ ಮೂಲಕ ಒಟ್ಟು ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಸಂಸದೀಯ ವ್ಯವಹಾರ, ಕಾನೂನು, ಸಣ್ಣ ನೀರಾವರಿ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಅದೇ ಖಾತೆಯಲ್ಲಿ ಮುಂದುವರೆದಿದ್ದಾರೆ.



Download From : www.kpscvaani.com

### ಚಂದ್ರಕಾಂತಗೌಡ ಸಿ. ಪಾಟೀಲ್



**ಕ್ಷೇತ್ರ: ನರಗುಂದ**
**ವಿದ್ಯಾರ್ಹತೆ: ಪಿ.ಯು.ಸಿ**
**ಜನ್ಮ ದಿನಾಂಕ: 22.10.1958**
**ವೃತ್ತಿ: ಕೃಷಿ, ವ್ಯಾಪಾರ ಮತ್ತು ಸಮಾಜ ಸೇವೆ**
**ಖಾತೆ:ಲೋಕೋಪಯೋಗಿ**

ಇವರು 2004-2007, 2008-2013ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ವಿಧಾನಸಭಾ ಸದಸ್ಯರಾಗಿರುವ ಅವರು ಒಟ್ಟು ಮೂರು ಬಾರಿ ಶಾಸಕರಾಗಿದ್ದಾರೆ. ಮುಖ್ಯಮಂತ್ರಿಯವರ ಸಂಸದೀಯ ಕಾರ್ಯದರ್ಶಿಯಾಗಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾಗಿ, ಮತ್ತು ಕೆ.ಎಸ್.ಎಸ್.ಐ.ಡಿ.ಸಿ ಅಧ್ಯಕ್ಷರಾಗಿ ಅವರು ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಸಣ್ಣ ಕೈಗಾರಿಕೆ ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಲೋಕೋಪಯೋಗಿ ಸಚಿವರಾಗಿದ್ದಾರೆ.

* * *

### ಪ್ರಭು ಬಿ. ಚೌವ್ಹಾಣ



**ಕ್ಷೇತ್ರ : ಔರಾದ್ ( ಮೀಸಲು)**
**ಜನ್ಮ ದಿನಾಂಕ: 16-07-1969**
**ವಿದ್ಯಾರ್ಹತೆ: ಬಿ.ಎ**
**ವೃತ್ತಿ: ಸಮಾಜಸೇವೆ**
**ಖಾತೆ: ಪಶುಸಂಗೋಪನೆ**

ಇವರು 2008-2013 ಮತ್ತು 2013- 2018ರಲ್ಲಿ ವಿಧಾನಸಭಾ ಸದಸ್ಯರಾಗಿದ್ದರು. ಪ್ರಸ್ತುತ ಕೂಡ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗುವ ಮೂಲಕ ಒಟ್ಟು ಮೂರು ಬಾರಿ ಶಾಸಕರಾಗಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಪಶುಸಂಗೋಪನೆ ಖಾತೆಯನ್ನು ನಿರ್ವಹಿಸಿದ್ದರು, ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಅದೇ ಖಾತೆಯಲ್ಲಿ ಮುಂದುವರೆದಿದ್ದಾರೆ.

* * *

### ಜೊಲ್ಲೆ ಶಶಿಕಲಾ ಅಣ್ಣಾಸಾಹೇಬ



**ಕ್ಷೇತ್ರ: ನಿಪ್ಪಾಣಿ**
**ಜನ್ಮ ದಿನಾಂಕ: 20.11.1969**
**ವಿದ್ಯಾರ್ಹತೆ: ಪಿ.ಯು.ಸಿ**
**ವೃತ್ತಿ: ಕೃಷಿ, ವ್ಯಾಪಾರ, ಸಮಾಜ ಸೇವೆ**
**ಖಾತೆ: ಮುಜರಾಯಿ, ಹಜ್ ಮತ್ತು ವಕ್ಫ್**

ಇವರು 2013 ಮತ್ತು 2018ರ ಚುನಾವಣೆಯಲ್ಲಿ ಗೆಲುವು ಸಾಧಿಸುವ ಮೂಲಕ ಎರಡು ಬಾರಿ ಶಾಸಕರಾಗಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧ ಭಾಗದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಮುಜರಾಯಿ, ಹಜ್ ಮತ್ತು ವಕ್ಫ್ ಖಾತೆ ಸಚಿವರಾಗಿದ್ದಾರೆ.

* * *

### ಬಿ. ಆನಂದ ಸಿಂಗ್



**ಕ್ಷೇತ್ರ: ವಿಜಯನಗರ**
**ವಿದ್ಯಾರ್ಹತೆ: ಪಿ.ಯು.ಸಿ**
**ಜನ್ಮ ದಿನಾಂಕ:03-10-1966**
**ವೃತ್ತಿ: ಗಣಿಗಾರಿಕೆ ಮತ್ತು ಸಾರಿಗೆ ಉದ್ಯಮ**
**ಖಾತೆ: ಪರಿಸರ ಮತ್ತು ಜೀವಶಾಸ್ತ್ರ ಹಾಗೂ ಪ್ರವಾಸೋದ್ಯಮ**

ಇವರು 2008, 2013 ಮತ್ತು 2018 ರಲ್ಲಿ ಮೂರು ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಪ್ರಸ್ತುತ ಇವರು ವಿಧಾನಸಭಾ ಸದಸ್ಯರಾಗುವ ಮೂಲಕ ಒಟ್ಟು ನಾಲ್ಕು ಬಾರಿ ಶಾಸಕರಾಗಿದ್ದಾರೆ. ಈ ಹಿಂದೆ ಇವರು ಪ್ರವಾಸೋದ್ಯಮ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಅರಣ್ಯ ಮತ್ತು ಪ್ರವಾಸೋದ್ಯಮ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಪರಿಸರ ಮತ್ತು ಜೀವಶಾಸ್ತ್ರ ಹಾಗೂ ಪ್ರವಾಸೋದ್ಯಮ ಸಚಿವರಾಗಿದ್ದಾರೆ.

* * *

### ಕೆ.ಗೋಪಾಲಯ್ಯ



**ಕ್ಷೇತ್ರ: ಬೆಂಗಳೂರು, ಮಹಾಲಕ್ಷ್ಮಿ ಲೇಔಟ್**
**ಜನ್ಮ ದಿನಾಂಕ: 23-06-1960**
**ವಿದ್ಯಾರ್ಹತೆ: ಬಿಎಸ್‌ಸಿ**
**ವೃತ್ತಿ: ವ್ಯಾಪಾರ**
**ಖಾತೆ: ಅಬಕಾರಿ**

ಇವರು 2013 ಮತ್ತು 2018ರ ಚುನಾವಣೆಯಲ್ಲಿ ಗೆಲುವು ಸಾಧಿಸುವ ಮೂಲಕ ಎರಡು ಬಾರಿ ಶಾಸಕರಾಗಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧ ಭಾಗದಲ್ಲಿ ಆಹಾರ ಮತ್ತು ಅಬಕಾರಿ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅಬಕಾರಿ ಖಾತೆ ಸಚಿವರಾಗಿದ್ದಾರೆ.

* * *

### ಭೈರತಿ ಬಸವರಾಜು



**ಕ್ಷೇತ್ರ : ಕೆ.ಆರ್.ಪುರ**
**ಜನ್ಮ ದಿನಾಂಕ: 04-02-1964**
**ವಿದ್ಯಾರ್ಹತೆ: ಬಿ.ಎ**
**ವೃತ್ತಿ: ವ್ಯಾಪಾರ**
**ಖಾತೆ: ನಗರಾಭಿವೃದ್ಧಿ**

ಇವರು 2013 ಮತ್ತು 2018 ರಲ್ಲಿ



Download From : www.kpscvaani.com

ಎರಡು ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. 2019 ರ ಜುಲೈನಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. ನಂತರ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದು ಬರುವ ಮೂಲಕ ಮೂರು ಬಾರಿ ಶಾಸಕರಾಗಿದ್ದಾರೆ. ಈ ಹಿಂದೆ ಇವರು ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಅವರು ನಗರಾಭಿವೃದ್ಧಿ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಅದೇ ಖಾತೆಯಲ್ಲಿ ಮುಂದುವರೆದಿದ್ದಾರೆ.

* * *

## ಎಸ್.ಟಿ.ಸೋಮಶೇಖರ್



**ಕ್ಷೇತ್ರ : ಯಶವಂತಪುರ**
**ಜನ್ಮ ದಿನಾಂಕ: 01–06–1957**
**ವಿದ್ಯಾರ್ಹತೆ: ಬಿ.ಎಸ್.ಸಿ**
**ವೃತ್ತಿ: ಕೃಷಿ, ಸಾರಿಗೆ, ಸಹಕಾರಿ ಕ್ಷೇತ್ರ**
**ಖಾತೆ: ಸಹಕಾರ**

ಇವರು 2013 ಮತ್ತು 2018 ರಲ್ಲಿ ಎರಡು ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದರು. 2019 ರ ಜುಲೈನಲ್ಲಿ ರಾಜೀನಾಮೆ ನೀಡಿದರು. ನಂತರ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದು ಬರುವ ಮೂಲಕ ಮೂರು ಬಾರಿ ಶಾಸಕರಾಗಿದ್ದಾರೆ. ಹಿಂದಿನ ಸರ್ಕಾರದಲ್ಲಿ ಬಿಡಿಎ ಅಧ್ಯಕ್ಷರಾಗಿ, ರಾಜ್ಯ ಸಹಕಾರಿ ವಸತಿ ಮಹಾಮಂಡಲದ ಅಧ್ಯಕ್ಷರಾಗಿ ಅವರು ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಅವರು ಸಹಕಾರ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಅದೇ ಖಾತೆಯಲ್ಲಿ ಮುಂದುವರೆದಿದ್ದಾರೆ.

* * *

## ಬಿ.ಸಿ.ಪಾಟೀಲ



**ಕ್ಷೇತ್ರ : ಹಿರೇಕೆರೂರು**
**ಜನ್ಮ ದಿನಾಂಕ: 14–11–1956**
**ವಿದ್ಯಾರ್ಹತೆ: ಬಿ.ಎ**
**ವೃತ್ತಿ: ನಿವೃತ್ತ ಪೊಲೀಸ್ ಅಧಿಕಾರಿ, ಕಲಾವಿದ**
**ಖಾತೆ: ಕೃಷಿ**

ಇವರು 2004 ರಲ್ಲಿ ಮೊದಲ ಬಾರಿಗೆ, 2013 ಮತ್ತು 2018 ರಲ್ಲಿ ಎರಡು ಬಾರಿ ವಿಧಾನಸಭಾಸದಸ್ಯರಾಗಿ ಆಯ್ಕೆಯಾಗಿದ್ದರು. 2019 ರ ಜುಲೈನಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು. ನಂತರ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದು ಬರುವ ಮೂಲಕ ನಾಲ್ಕು ಬಾರಿ ಶಾಸಕರಾಗಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಅವರು ಕೃಷಿ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಅದೇ ಖಾತೆಯಲ್ಲಿ ಮುಂದುವರೆದಿದ್ದಾರೆ.

## ಡಾ.ಕೆ.ಸುಧಾಕರ್



**ಕ್ಷೇತ್ರ:ಚಿಕ್ಕಬಳ್ಳಾಪುರ**
**ಜನ್ಮ ದಿನಾಂಕ:27–06–1973**
**ವಿದ್ಯಾರ್ಹತೆ:ಎಂಬಿಬಿಎಸ್**
**ವೃತ್ತಿ: ವೈದ್ಯಕೀಯ ಸಮಾಜಿಕ ಸೇವೆ**
**ಖಾತೆ: ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ**

ಇವರು 2013 ಮತ್ತು 2018 ರಲ್ಲಿ ಎರಡು ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿರುವ ಇವರು 2019 ರ ಜುಲೈನಲ್ಲಿ ರಾಜೀನಾಮೆ ನೀಡಿ, ನಂತರ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದು ಬರುವ ಮೂಲಕ ಮೂರು ಬಾರಿ ಶಾಸಕರಾಗಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಅವರು ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವೈದ್ಯಕೀಯ ಶಿಕ್ಷಣ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಅದೇ ಖಾತೆಯಲ್ಲಿ ಮುಂದುವರೆದಿದ್ದಾರೆ.

* * *

## ಕೆ.ಸಿ.ನಾರಾಯಣ ಗೌಡ




**ಕ್ಷೇತ್ರ: ಕೆ.ಆರ್.ಪೇಟೆ**
**ಜನ್ಮ ದಿನಾಂಕ:21–06–1966**
**ವಿದ್ಯಾರ್ಹತೆ: ಬಿಹೆಚ್**
**ವೃತ್ತಿ: ಹೋಟೆಲ್ ಉದ್ಯಮ**
**ಖಾತೆ: ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡೆ**

ಇವರು 2013 ಮತ್ತು 2018 ರಲ್ಲಿ ಎರಡು ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಶಾಸಕ ಸ್ಥಾನಕ್ಕೆ 2019 ರ ಜುಲೈನಲ್ಲಿ ರಾಜೀನಾಮೆ ನೀಡಿ, ನಂತರ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದು ಬರುವ ಮೂಲಕ ಮೂರು ಬಾರಿ ಶಾಸಕರಾಗಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಅವರು ಕ್ರೀಡಾ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ರೇಷ್ಮೆ ಹಾಗೂ ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರಾಗಿದ್ದಾರೆ.

* * *

## ಅರಬೈಲ್ ಶಿವರಾಂ ಹೆಬ್ಬಾರ್



**ಕ್ಷೇತ್ರ : ಯಲ್ಲಾಪುರ**
**ಜನ್ಮ ದಿನಾಂಕ: 04–06–1957**
**ವಿದ್ಯಾರ್ಹತೆ: ಎಸ್.ಎಸ್.ಎಲ್.ಸಿ**
**ವೃತ್ತಿ: ಕೃಷಿ, ಚಾಲಕ, ಉದ್ಯಮ**
**ಖಾತೆ: ಕಾರ್ಮಿಕ**

ಇವರು 2013 ಮತ್ತು 2018 ರಲ್ಲಿ ಎರಡು ಬಾರಿ ವಿಧಾನಸಭಾ ಸದಸ್ಯರಾಗಿ



Download From : www.kpscvaani.com

ಆಯ್ಕೆಯಾಗಿದ್ದರು. 2019 ರ ಜುಲೈನಲ್ಲಿ ರಾಜೀನಾಮೆ ನೀಡಿದರು. ನಂತರ ನಡೆದ ಉಪಚುನಾವಣೆಯಲ್ಲಿ ಬಿಜೆಪಿಯಿಂದ ಸ್ಪರ್ಧಿಸಿ ಗೆದ್ದು ಬರುವ ಮೂಲಕ ಮೂರು ಬಾರಿ ಶಾಸಕರಾಗಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಕಾರ್ಮಿಕ ಇಲಾಖೆಯ ಸಚಿವರಾಗಿದ್ದರು. ಪ್ರಸ್ತುತ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಅದೇ ಖಾತೆಯಲ್ಲಿ ಮುಂದುವರೆದಿದ್ದಾರೆ.

* * *

## ಉಮೇಶ ಕತ್ತಿ



**ಕ್ಷೇತ್ರ: ಹುಕ್ಕೇರಿ**
**ಜನ್ಮ ದಿನಾಂಕ: 14–3–1961**
**ವಿದ್ಯಾರ್ಹತೆ: ಪ್ರಥಮ ಪಿಯುಸಿ**
**ವೃತ್ತಿ: ಕೃಷಿ, ಉದ್ಯಮ**
**ಖಾತೆ: ಅರಣ್ಯ ಹಾಗೂ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು**

ಇವರು 1985 ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾದ ನಂತರ ಒಟ್ಟು ಎಂಟು ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಅವರು ಈ ಹಿಂದೆ ಸಕ್ಕರೆ, ಲೋಕೋಪಯೋಗಿ, ತೋಟಗಾರಿಕೆ, ಬಂದೀಖಾನೆ, ಕೃಷಿ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧದಲ್ಲಿ ಆಹಾರ ಮತ್ತು ನಾಗರಿಕ ಪೂರೈಕೆ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿ ಮಂಡಲದಲ್ಲಿ ಅವರು ಅರಣ್ಯ ಹಾಗೂ ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರಾಗಿದ್ದಾರೆ.

* * *

## ಮುರುಗೇಶ ರುದ್ರಪ್ಪ ನಿರಾಣಿ



**ಕ್ಷೇತ್ರ : ಬೀಳಗಿ**
**ಜನ್ಮ ದಿನಾಂಕ: 01–06–1965**
**ವಿದ್ಯಾರ್ಹತೆ: ಬಿ.ಇ**
**ವೃತ್ತಿ: ಉದ್ಯಮಿ**
**ಖಾತೆ: ಬೃಹತ್ ಮತ್ತು ಮಧ್ಯಮ ಕೈಗಾರಿಕೆ**

ಇವರು 2004 ರಲ್ಲಿ ಮತ್ತು 2008 ರಲ್ಲಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಪ್ರಸ್ತುತ ವಿಧಾನಸಭಾ ಸದಸ್ಯರಾಗುವ ಮೂಲಕ ಒಟ್ಟು ಮೂರು ಬಾರಿ ಶಾಸಕರಾಗಿದ್ದಾರೆ. ಈ ಹಿಂದಿನ ಸರ್ಕಾರಗಳಲ್ಲಿ ಅವರು ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಗಣಿ ಮತ್ತು ಭೂ ವಿಜ್ಞಾನ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರಾಗಿದ್ದಾರೆ.

## ಎಸ್. ಅಂಗಾರ



**ಕ್ಷೇತ್ರ:ಸುಳ್ಯ (ಮೀಸಲು)**
**ಜನ್ಮ ದಿನಾಂಕ:01–07–1964**
**ವಿದ್ಯಾರ್ಹತೆ: 8ನೇ ತರಗತಿ**
**ವೃತ್ತಿ: ಕೃಷಿ**
**ಖಾತೆ: ಮೀನುಗಾರಿಕೆ, ಬಂದರು ಮತ್ತು ಒಳನಡು ಜಲಸಾರಿಗೆ**

ಇವರು 1994 ರಿಂದ 2018 ರವರೆಗೆ ಸತತವಾಗಿ 6 ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಪ್ರಸ್ತುತ ಸರ್ಕಾರದ ಮೊದಲರ್ಧ ಭಾಗದಲ್ಲಿ ಮೀನುಗಾರಿಕೆ, ಬಂದರು, ಒಳನಾಡು ಸಾರಿಗೆ ಖಾತೆಯನ್ನು ನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಅವರು ಅದೇ ಖಾತೆಯಲ್ಲಿ ಮುಂದುವರೆದಿದ್ದಾರೆ.

* * *

## ಎನ್.ನಾಗರಾಜು (ಎಂಟಿಬಿ)



**ಕ್ಷೇತ್ರ: ಹೊಸಕೋಟೆ (ಎಂ.ಎಲ್.ಸಿ)**
**ಜನ್ಮ ದಿನಾಂಕ: 20–07–1951**
**ವಿದ್ಯಾರ್ಹತೆ: ಎಸ್ಎಸ್ಎಲ್ಸಿ**
**ವೃತ್ತಿ: ಉದ್ಯಮಿ, ಸಮಾಜ ಸೇವೆ**
**ಖಾತೆ: ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ**

ಇವರು 2004, 2013 ಮತ್ತು 2018 ರಲ್ಲಿ ವಿಧಾನಸಭಾ ಸದಸ್ಯರಾಗುವ ಮೂಲಕ ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಜೆಡಿಎಸ್ ಮತ್ತು ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ ವಸತಿ ಸಚಿವರಾಗಿ ಕಾರ್ಯನಿರ್ವಹಿಸಿದ್ದರು. ಜುಲೈ 2019 ರಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ, ಉಪಚುನಾವಣೆಯಲ್ಲಿ ಸ್ಪರ್ಧಿಸಿ ಪರಾಭವಗೊಂಡರು. ಪ್ರಸ್ತುತ ಸರ್ಕಾರದಲ್ಲಿ ಎಂಎಲ್ಸಿಯಾಗಿ ಪೌರಾಡಳಿತ ಸಚಿವರಾಗಿದ್ದ ಇವರು ರಚನೆಯಾಗಿರುವ ಹೊಸ ಮಂತ್ರಿಮಂಡಲದಲ್ಲಿ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಸಚಿವರಾಗಿದ್ದಾರೆ.

* * *

## ಅರಗ ಜ್ಞಾನೇಂದ್ರ



**ಕ್ಷೇತ್ರ: ತೀರ್ಥಹಳ್ಳಿ**
**ಜನ್ಮ ದಿನಾಂಕ: 15–03–1953**
**ವಿದ್ಯಾರ್ಹತೆ: ಬಿ.ಕಾಂ**
**ವೃತ್ತಿ: ಕೃಷಿ**
**ಖಾತೆ: ಗೃಹ**

ಇವರು 1994, 1999, ಮತ್ತು 2004 ರ ವಿಧಾನಸಭೆ ಚುನಾವಣೆ ಯಲ್ಲಿ ಸತತವಾಗಿ ಮೂರು ಬಾರಿ ವಿಧಾನಸಭಾ ಸದಸ್ಯರಾಗಿ ಆಯ್ಕೆಯಾಗಿದ್ದಾರೆ. ಪ್ರಸ್ತುತ ವಿಧಾನಸಭಾ ಸದಸ್ಯರಾಗುವ ಮೂಲಕ ಒಟ್ಟು ನಾಲ್ಕು ಬಾರಿ ಶಾಸಕರಾಗಿದ್ದಾರೆ. ಪ್ರಸ್ತುತ ರಚನೆಯಾಗಿರುವ ಸರ್ಕಾರದ ನೂತ ಸಚಿವ ಸಂಪುಟ



Download From : www.kpscvaani.com

ಮಂತ್ರಿಮಂಡಲದಲ್ಲಿ ಇದೇ ಮೊದಲ ಬಾರಿಗೆ ಅವರು ಗೃಹ ಸಚಿವರಾಗಿದ್ದಾರೆ.

* * *

## ಬಿ.ಸಿ. ನಾಗೇಶ್



**ಕ್ಷೇತ್ರ: ತಿಪಟೂರು**
**ಜನ್ಮ ದಿನಾಂಕ:01–07–1959**
**ವಿದ್ಯಾರ್ಹತೆ: ಬಿಇ**
**ವೃತ್ತಿ: ಕೃಷಿ**
**ಖಾತೆ: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ**

ಇವರು 2008 ಮತ್ತು 2018 ರ ವಿಧಾನಸಭಾ ಚುನಾವಣೆಯಲ್ಲಿ ಎರಡು ಬಾರಿ ಗೆದ್ದು ಶಾಸಕರಾಗಿದ್ದಾರೆ. ಅವರು ಇದೇ ಮೊದಲ ಬಾರಿಗೆ ಪ್ರಸ್ತುತ ರಚನೆಯಾಗಿರುವ ಸರ್ಕಾರದ ಹೊಸ ಮಂತ್ರಿಮಂಡಲದಲ್ಲಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಾಗೂ ಸಕಾಲ ಸಚಿವರಾಗಿದ್ದಾರೆ.

* * *

## ವಿ.ಸುನಿಲ್ ಕುಮಾರ್



**ಕ್ಷೇತ್ರ: ಕಾರ್ಕಳ**
**ಜನ್ಮ ದಿನಾಂಕ:15–08–1975**
**ವಿದ್ಯಾರ್ಹತೆ: ಬಿಎ**
**ವೃತ್ತಿ: ಪತ್ರಕರ್ತರು**
**ಖಾತೆ: ಇಂಧನ, ಕನ್ನಡ ಮತ್ತು ಸಂಸ್ಕೃತಿ**

ಇವರು 2004, 2013 ಮತ್ತು 2018 ರ ವಿಧಾನಸಭಾ ಚುನಾವಣೆಯಲ್ಲಿ ಮೂರು ಬಾರಿ ಗೆದ್ದು ಶಾಸಕರಾಗಿದ್ದಾರೆ. ಪ್ರಸ್ತುತ ಸರ್ಕಾರದಲ್ಲಿ ಆಡಳಿತ ಪಕ್ಷದ ಮುಖ್ಯ ಸಚೇತಕರಾಗಿ ಕಾರ್ಯನಿರ್ವಹಿಸಿದ್ದರು. ಈಗ ರಚನೆಯಾಗಿರುವ ಸರ್ಕಾರದ ಹೊಸ ಮಂತ್ರಿಮಂಡಲದಲ್ಲಿ ಇದೇ ಮೊದಲ ಬಾರಿಗೆ ಇಂಧನ, ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದಾರೆ.

* * *

## ಹಾಲಪ್ಪ ಆಚಾರ್



**ಕ್ಷೇತ್ರ: ಯಲಬುರ್ಗಾ**
**ಜನ್ಮ ದಿನಾಂಕ: 69 ವರ್ಷ**
**ವಿದ್ಯಾರ್ಹತೆ: ಬಿಎಸ್‌ಸಿ**
**ವೃತ್ತಿ: ಕೃಷಿ**
**ಖಾತೆ: ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮಕ್ಕಳ ಕಲ್ಯಾಣ ಮತ್ತು ಹಿರಿಯ ನಾಗರಿಕರ ಸಬಲೀಕರಣ**

ಇವರು 2010 ರಲ್ಲಿ ಮೊದಲ ಬಾರಿಗೆ ವಿಧಾನ ಪರಿಷತ್ ಸದಸ್ಯರಾಗಿ ಆಯ್ಕೆಯಾಗಿದ್ದರು. 2018 ರಲ್ಲಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು. ಪ್ರಸ್ತುತ ಸರ್ಕಾರದ ನೂತನ ಸಚಿವ ಸಂಪುಟದ ಮಂತ್ರಿಮಂಡಲದಲ್ಲಿ ಮೊದಲ ಬಾರಿಗೆ ಗಣಿ ಮತ್ತು ಭೂವಿಜ್ಞಾನ ಹಾಗೂ ಮಹಿಳಾ ಮಕ್ಕಳ ಕಲ್ಯಾಣ ಮತ್ತು ಹಿರಿಯ ನಾಗರಿಕರ ಸಬಲೀಕರಣ ಖಾತೆ ಸಚಿವರಾಗಿದ್ದಾರೆ.

* * *

## ಶಂಕರ ಬಿ ಪಾಟೀಲ ಮುನೇನಕೊಪ್ಪ



**ಕ್ಷೇತ್ರ: ನವಲಗುಂದ**
**ಜನ್ಮ ದಿನಾಂಕ: 52 ವರ್ಷ**
**ವಿದ್ಯಾರ್ಹತೆ: ಬಿಎ**
**ವೃತ್ತಿ: ಕೃಷಿ**
**ಖಾತೆ: ಜವಳಿ ಮತ್ತು ಸಕ್ಕರೆ**

ಇವರು 2008 ಮತ್ತು 2018 ರ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಎರಡು ಬಾರಿ ಶಾಸಕರಾಗಿದ್ದಾರೆ. ಜಗದೀಶ್ ಶೆಟ್ಟರ್ ಅವರು ಮುಖ್ಯಮಂತ್ರಿಯಾಗಿದ್ದ ಸಮಯದಲ್ಲಿ ಇವರು ಸಂಸದೀಯ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಣೆ ಮಾಡಿದ್ದಾರೆ. ಪ್ರಸ್ತುತ ಸರ್ಕಾರದಲ್ಲಿ ಕೆಯುಐಡಿಎಫ್‌ಸಿ ಯ ಅಧ್ಯಕ್ಷರಾಗಿ ಕೂಡ ಕಾರ್ಯನಿರ್ವಹಿಸಿದ್ದರು. ಸದ್ಯ ರಚನೆಯಾಗಿರುವ ನೂತನ ಸಚಿವ ಸಂಪುಟದ ಮಂತ್ರಿಮಂಡಲದಲ್ಲಿ ಇದೇ ಮೊದಲ ಬಾರಿಗೆ ಜವಳಿ ಮತ್ತು ಸಕ್ಕರೆ ಖಾತೆ ಸಚಿವರಾಗಿದ್ದಾರೆ.

* * *

## ಎನ್. ಮುನಿರತ್ನ



**ಕ್ಷೇತ್ರ: ಬೆಂಗಳೂರು (ರಾಜರಾಜೇಶ್ವರಿ ನಗರ)**
**ಜನ್ಮ ದಿನಾಂಕ:23–07–1964**
**ವಿದ್ಯಾರ್ಹತೆ: ಎಸ್‌ಎಸ್‌ಎಲ್‌ಸಿ**
**ವೃತ್ತಿ: ಸಿನಿಮಾ ಉದ್ಯಮ**
**ಖಾತೆ: ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ**

ಇವರು 2013 ಮತ್ತು 2018ರ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು, ಎರಡು ಬಾರಿ ಶಾಸಕರಾಗಿದ್ದಾರೆ. ಜುಲೈ 2019 ರಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ 2020ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಮತ್ತೊಮ್ಮೆ ಗೆಲ್ಲುವ ಮೂಲಕ ಒಟ್ಟು ಮೂರು ಬಾರಿ ಶಾಸಕರಾಗಿ ಆಯ್ಕೆಯಾಗಿದ್ದಾರೆ. ಸದ್ಯ ರಚನೆಯಾಗಿರುವ ನೂತನ ಸಚಿವ ಸಂಪುಟದ ಮಂತ್ರಿಮಂಡಲದಲ್ಲಿ ಇದೇ ಮೊದಲ ಬಾರಿಗೆ ತೋಟಗಾರಿಕೆ, ಯೋಜನೆ ಮತ್ತು ಸಾಂಖ್ಯಿಕ ಸಚಿವರಾಗಿದ್ದಾರೆ.



Download From : www.kpscvaani.com



# ಲಸಿಕೆ ನಂತರ ಆಸ್ಪತ್ರೆಗೆ ದಾಖಲಾಗುವ ಸಾಧ್ಯತೆ ಕಡಿಮೆ

ಪಿ ವಿ ವಿ ಪಿ ರಾವ್

ಮನುಕುಲವನ್ನು ಇನ್ನಿಲ್ಲದಂತೆ ಕಾಡುತ್ತಿರುವ ಮಹಾಮಾರಿ ಕೊರೊನಾ ' ಸಾಂಕ್ರಾಮಿಕ ರೋಗದ ಎರಡನೇ ಅಲೆ ಮುಗಿದಿದ್ದು, ಇದರ ಬಳಿಕ ಮೂರನೆ ಅಲೆ ಬರುತ್ತದೆ ಎನ್ನುವುದು ವೈದ್ಯಕೀಯ ತಜ್ಞರ ಮಾತಾಗಿದೆ. ಈ ಕೋವಿಡ್–19 ರೋಗ ತಡೆಯಲು ಕೋವಿಶೀಲ್ಡ್, ಕೋವ್ಯಾಕ್ಸಿನ್, ಸ್ಪುಟ್ನಿಕ್ ಹಾಗೂ ಮಾಡೆರ್ನಾ ಮುಂತಾದ ಲಸಿಕೆಗಳು ಚುಚ್ಚುಮದ್ದಿನ ರೂಪದಲ್ಲಿ ಲಭ್ಯವಿದ್ದು, ನಮ್ಮ ದೇಶದ ಜನರು ಈ ಚುಚ್ಚುಮದ್ದನ್ನು ಹಾಕಿಸಿಕೊಳ್ಳುತ್ತಿದ್ದಾರೆ.

ಭಾರತ ದೇಶವು ಕೊರೊನಾ ಲಸಿಕೆಯ ಸಂಖ್ಯೆಯನ್ನು ವಿಸ್ತರಿಸಿಕೊಂಡಿದೆ. ಇತ್ತೀಚೆಗೆ ಜಾನ್ಸನ್ ಅಂಡ್ ಜಾನ್ಸನ್ ಸಂಸ್ಥೆಯ ಕೊರೊನಾ ಲಸಿಕೆಯು ತುರ್ತು ಬಳಕೆಗೆ ಅನುಮೋದನೆ ಪಡೆದುಕೊಂಡಿದೆ. ಈಗ ಭಾರತದಲ್ಲಿ ಐದು ಕೊರೊನಾ ಲಸಿಕೆಗಳು ಲಭ್ಯವಿವೆ. ಇದು ಕೊರೊನಾ ಸೋಂಕಿನ ವಿರುದ್ಧ ಭಾರತದ ಹೋರಾಟವನ್ನು ಇನ್ನಷ್ಟು ಬಲಗೊಳಿಸಲಿದೆ ಎಂದು ಕೇಂದ್ರ ಸರಕಾರ ಪ್ರಕಟಿಸಿದೆ.

**ಕೋವಿಡ್-19 ಮೂರನೇ ಅಲೆಯು ನಮ್ಮ ದೇಶದಲ್ಲೂ ಕಾಣಿಸಿಕೊಳ್ಳಲಾರಂಭಿಸಿದೆ. ಆದರೆ ಎರಡನೇ ಅಲೆಗಿಂತ ಸೋಂಕಿನ ಪ್ರಮಾಣ ಕಡಿಮೆಯಾಗಿದೆ. ದೇಶಾದ್ಯಂತ ಲಸಿಕಾ ಅಭಿಯಾನವನ್ನು ಆರಂಭಿಸಿರುವುದೇ ಇದಕ್ಕೆ ಕಾರಣ. ಹಾಗಾಗಿಯೇ ಲಸಿಕೆ ಹಾಕಿಸಿಕೊಂಡವರು ಆಸ್ಪತ್ರೆಗೆ ದಾಖಲಾಗುವ ಸಾಧ್ಯತೆ ಶೇ 94 ರಷ್ಟು ಕಡಿಮೆಯಾಗಿದೆ.**

ಅಮೆರಿಕದಲ್ಲಿ ಡಿಸೆಂಬರ್ 14, 2020 ರಂದು ಲಸಿಕೆ ನೀಡಿಲು ಆರಂಭಸಿದರೆ, ಭಾರತದಲ್ಲಿ 2021 ಜನವರಿ 16 ರಿಂದ ಆರಂಭಿಸಲಾಯಿತು. ಲಸಿಕೆ ಡೋಸ್ ನೀಡಿಕೆಯಲ್ಲಿ ಭಾರತ ಇಂದು ಮಹತ್ವದ ಮೈಲಿಗಲ್ಲು ಸಾಧಿಸಿದ್ದು, ಅಮೆರಿಕ ದೇಶಕ್ಕಿಂತಲೂ ಉತ್ತಮ ಹಾಗೂ ಐತಿಹಾಸಿಕ ದಾಖಲೆ ಮಾಡಿದೆ.

ಈ ಲಸಿಕೆ ಬಗ್ಗೆ ಜನರಿಗೆ ಇನ್ನೂ ಗೊಂದಲ, ಅನುಮಾನ, ಭಯ, ಕಾತರ ಮತ್ತು ನಿರೀಕ್ಷೆ ಎಲ್ಲವೂ ಇದೆ. ಅವರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಕೋವಿಡ್–19 ರೋಗದ ವಿರುದ್ಧ ಸಮರ



Download From : www.kpscvaani.com

ಸಾರಿರುವ ಲಸಿಕೆಗಳ ಬಗ್ಗೆ ಸವಿವರ ಮಹತ್ವ ಪೂರ್ಣ ಮಾಹಿತಿಯು ಇಲ್ಲಿದೆ.

**ಲಸಿಕೆಗಳು ಮನುಕುಲಕ್ಕೆ ವರದಾನ:**

ವೈದ್ಯಕೀಯ ವಿಜ್ಞಾನ ಮನುಕುಲಕ್ಕೆ ನೀಡಿದ ಅತ್ಯಂತ ದೊಡ್ಡ ವರದಾನಗಳಲ್ಲಿ ಪ್ರಮುಖವಾದುದು. ಲಸಿಕೆಗಳು, ಮಾನವನ ಜೀವಕ್ಕೆ ಬೆದರಿಕೆಯೊಡ್ಡುವ ಹಲವು ಕಾಯಿಲೆಗಳನ್ನು ಹಾಗೂ ಸೋಂಕುಗಳನ್ನು ತಡೆಯಲು ಮತ್ತು ನಿರ್ಮೂಲನೆ ಮಾಡಲು ನೆರವಾಗಿವೆ. ಅವುಗಳು ವಿಶ್ವದೆಲ್ಲಡೆ ಆರೋಗ್ಯ ರಂಗಕ್ಕೆ ಬೃಹತ್ ಕೊಡುಗೆಯನ್ನು ನೀಡುವ ಸಿಡುಬಿನಂತಹ ಕಾಯಿಲೆಗಳನ್ನು ನಿರ್ಮೂಲನೆ ಮಾಡಲು ಹಾಗೂ ಪೋಲಿಯೊದಂತಹ ಇತರ ಕಾಯಿಲೆಗಳನ್ನು ನಾಶದ ಅಂಚಿಗೆ ತಂದು ನಿಲ್ಲಿಸಲು ಅವುಗಳು ವೈದ್ಯಕೀಯ ವಿಜ್ಞಾನವನ್ನು ಸಮರ್ಥವಾಗಿಸಿವೆ. ವಿಶ್ವ ಆರೋಗ್ಯ ಸಂಸ್ಥೆಯ ಪ್ರಕಾರ ಲಸಿಕೆ ನೀಡಿಕೆಯಿಂದಾಗಿ ಪ್ರತಿವರ್ಷ 20 ರಿಂದ 30 ಲಕ್ಷದಷ್ಟು ಸಾವುಗಳನ್ನು ತಡೆಯವುದು ಸಾಧ್ಯವಾಗಿದೆ.

ಕೋವಿಡ್ ಲಸಿಕೆ ದೇಹದಲ್ಲಿನ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವುದಲ್ಲದೇ, ವೈರಸ್ ಸೋಂಕು ನಿರೋಧಕವಾಗಿಯೂ ಕಾರ್ಯ ನಿರ್ವಹಿಸುತ್ತದೆ. ಹೀಗಾಗಿ ಇದರಿಂದ ಸಾಕಷ್ಟು ಅನಾರೋಗ್ಯ ಸಮಸ್ಯೆಗಳು ದೂರಾಗುತ್ತದೆ. ಇದು ಲಸಿಕೆಗಳ ಪರೀಕ್ಷೆಯಲ್ಲಿಯೂ ದೃಢವಾಗಿದೆ.

**ಲಸಿಕೆಯಿಂದಾಗುವ ಪರಿಣಾಮಗಳು:**

ದೇಶದಲ್ಲಿ ವೈರಸ್ ರೂಪಾಂತರಗೊಳ್ಳುತ್ತದೆ ಮತ್ತು ಹೇಳಲಾಗದ ಆರೋಗ್ಯ ಸಮಸ್ಯೆಗಳನ್ನು ಉಂಟುಮಾಡಬಹುದು ಎಂದು ತಜ್ಞ ವೈದ್ಯ ಡಾಕ್ಟರ್ ಫೆಮಿನ್.ಸಿ.ರಾಜಯ್ಯ ವಿವರಿಸುತ್ತಾರೆ. ವಿಶೇಷವಾಗಿ ವಯಸ್ಸಾದವರು ಮತ್ತು ಅಧಿಕ ರಕ್ತದೊತ್ತಡ, ಮಧುಮೇಹ, ಕ್ಯಾನ್ಸರ್ ಮುಂತಾದ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ಬೇಗ ಸೋಂಕು ತಗುಲುವ ಸಾಧ್ಯತೆ ಹೆಚ್ಚಿರುವುದರಿಂದ ಅವರುಗಳು ಆದಷ್ಟು ಬೇಗ ವ್ಯಾಕ್ಸಿನೇಷನ್‌ಗೆ ಒಳಗಾಗುವುದನ್ನು ಶಿಫಾರಸ್ಸು ಮಾಡಲಾಗಿದೆ.

ದೇಶದಲ್ಲಿ ಲಸಿಕೆ ಪಡೆದಿರುವವರು ಬಹಳಷ್ಟು ಜನ ಇದ್ದಾರೆ. ಸದ್ಯಕ್ಕೆ ಕೊರೊನಾದಿಂದ ಪಾರಾಗಲು ಲಸಿಕೆ ಒಂದೇ ರಾಮಬಾಣ. ದೇಶದ ಜನರಿಗೆ ಲಸಿಕೆ ನೀಡುವುದಾಗಿ ಸರ್ಕಾರ ಪಣತೊಟ್ಟಿದೆ. ಹೀಗಾಗಿ ರಾಜ್ಯ ಸರಕಾರವು ರಾಜ್ಯದ ಎಲ್ಲಡೆ ಲಸಿಕಾ ಅಭಿಯಾನ ನಡೆಸುತ್ತಿದೆ.

ಈ ಸಾಂಕ್ರಮಿಕ ರೋಗದ ತಡೆಗೆ ನೀಡುತ್ತಿರುವ ವ್ಯಾಕ್ಸಿನ್, ಕೇವಲ ಈ ಸೋಂಕಿನ ಪ್ರಸರಣವನ್ನು ಮಾತ್ರವಲ್ಲದೇ ಇನ್ನಷ್ಟು ಬಗೆಯ ಅಲರ್ಜಿಗಳ ನಿವಾರಣೆಗೂ ಸಹಾಯವಾಗಲಿದೆ. ಈ ಲಸಿಕೆ ಪಡೆದುಕೊಂಡವರಿಗೆ ಜ್ವರ, ಕೆಮ್ಮು, ನೆಗಡಿ, ಶೀತ, ತಲೆನೋವು ಆಗಾಗ ಬರೋದು ಕಡಿಮೆಯಾಗುತ್ತಿದೆ ಎಂದು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ. ಹಾಗೆಯೇ ಈಗ ನೀಡುತ್ತಿರುವ ಲಸಿಕೆಯಿಂದ ದೇಹದ ರೋಗನಿರೋಧಕ ಶಕ್ತಿಯು ವೃದ್ಧಿಸುತ್ತಿರುವುದರಿಂದ, ಬೇರೆ ರೋಗಗಳಿಂದ ಕಂಡುಬರುತ್ತಿದ್ದ ಸಾವುಗಳನ್ನು ತಪ್ಪಿಸುತ್ತಿದೆ ಎಂದು ಕೇಂದ್ರ ಮತ್ತು ರಾಜ್ಯ ಸರಕಾರದ ವೈದ್ಯಕೀಯ ತಜ್ಞರ ತಂಡ ಅಭಿಪ್ರಾಯಪಟ್ಟಿದೆ.




**“ಕೊರೊನಾ ಸಾಂಕ್ರಾಮಿಕ ತಡೆಗೆ ಸದ್ಯ ಇರುವ ಮದ್ದು ಎಂದರೆ ಅದು ಲಸಿಕೆ. ಲಸಿಕೆ ಬಗ್ಗೆ ಇರುವ ಯಾವುದೇ ವದಂತಿಗಳಿಗೆ ಕಿವಿಗೊಡಬಾರದು. ಲಸಿಕೆ ಸುರಕ್ಷಿತವಾಗಿದೆ, ಕೋವಿಡ್ ಮುಕ್ತ ಕರ್ನಾಟಕ ಮಾಡುವುದು ಸರ್ಕಾರದ ಗುರಿ. ಹೀಗಾಗಿ ಲಸಿಕಾ ಅಭಿಯಾನದಲ್ಲಿ ಎಲ್ಲರೂ ಪಾಲ್ಗೊಳ್ಳಬೇಕು ಎಂದು ಕರ್ನಾಟಕ ಆರೋಗ್ಯ ಇಲಾಖೆಯ ಮನವಿ.”**

ಲಸಿಕೆ ಹಾಕಿಸಿಕೊಳ್ಳುವುದರಿಂದ ಕೋವಿಡ್–19 ರೋಗ ಬರುತ್ತದೆ ಎಂಬುದು ಸತ್ಯಕ್ಕೆ ದೂರವಾದ ಮಾತು. ಲಸಿಕೆ ಹಾಕಿಸಿಕೊಂಡ ಬಳಿಕ ಬಹಳಷ್ಟು ಅಡ್ಡ ಪರಿಣಾಮ ಉಂಟಾಗುತ್ತದೆ ಎನ್ನುವುದು ಕೂಡಾ ತಪ್ಪು ಕಲ್ಪನೆ. ಯಾವುದೇ ವೈಜ್ಞಾನಿಕ ಪುರಾವೆ ಇಲ್ಲದೆ ಇಂತಹ ಗಾಳಿ ಸುದ್ದಿಗಳಿಗೆ ಬಲಿಯಾಗಬೇಡಿ. ಆದಷ್ಟು ಬೇಗ ಲಸಿಕೆ ಹಾಕಿಸಿಕೊಳ್ಳಿ, ನಿಮ್ಮನ್ನು ರಕ್ಷಿಸಿಕೊಳ್ಳಿ ನಿಮ್ಮವರನ್ನೂ ರಕ್ಷಿಸಿಕೊಳ್ಳಿ. ಅದರಲ್ಲಿ ನಮ್ಮೆಲ್ಲರ ಹಿತ, ನೆಮ್ಮದಿ, ಶಾಂತಿ ಅಡಗಿದೆ ಎಂದು ಬೆಂಗಳೂರಿನ ಅಬ್ಬಿಗೇರಿಯ ಪಿ.ಎಚ್.ಸಿ ವೈದಕೀಯ ತಂಡದ ಹಿರಿಯ ವೈದ್ಯಾಧಿಕಾರಿ ಡಾ ॥ ರವಿಶಂಕರ್ ಕೆ.ಎಲ್ ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

ಕೊರೊನಾ ವೈರಸ್ ವಿರುದ್ಧ ಲಸಿಕೆಗಳು ಶೇ.94 ರಷ್ಟು ರಕ್ಷಣೆ ನೀಡಲಿವೆ. ಲಸಿಕೆ ಪಡೆದವರಿಗೆ ಕೊರೊನಾ ಬಂದರೂ ಅವರು ಆಸ್ಪತ್ರೆಗೆ ದಾಖಲಾಗುವ ಸಾಧ್ಯತೆ ಶೇ.80 ರಿಂದ 94 ರಷ್ಟು ಕಡಿಮೆ ಎಂಬುದು ಸಾಬೀತಾಗಿದೆ ಎಂದು ಕೇಂದ್ರ ಆರೋಗ್ಯ ಇಲಾಖೆ ಸ್ಪಷ್ಟಪಡಿಸಿದೆ.

ಜೊತೆಗೆ ಒಂದು ಕುಟುಂಬದಲ್ಲಿ ಓರ್ವರಿಗೆ ಸೋಂಕು ತಗುಲಿದರೆ ಅವರಿಂದ ಇಡೀ ಕುಟುಂಬದವರಿಗೆ



Download From : www.kpscvaani.com

**ಡಿಸೆಂಬರ್ ಅಂತ್ಯದೊಳಗೆ 94 ಕೋಟಿ ಜನರಿಗೂ ಕೊರೊನಾ ಲಸಿಕೆ:**

ಕೇಂದ್ರ ಸರ್ಕಾರದ ಯೋಜನೆಯ ಪ್ರಕಾರ, ಈ ವರ್ಷದ ಡಿಸೆಂಬರ್ ಅಂತ್ಯಕ್ಕೆ ದೇಶದಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲಾ 94 ಕೋಟಿ ಜನರಿಗೂ ಕೊರೊನಾ ಲಸಿಕೆ ನೀಡಲು ಮುಂದಾಗಿದೆ.

ಈ ಲಸಿಕೆ ಗರ್ಭಿಣಿ ಮಹಿಳೆಯರನ್ನು ಕೂಡ ಕೊರೊನಾ ವೈರಸ್ ಸೋಂಕಿನಿಂದ ರಕ್ಷಣೆ ನೀಡುತ್ತದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ಸ್ಪಷ್ಟಪಡಿಸಿದೆ. ಗರ್ಭಿಣಿಯರಿಗೆ ಲಸಿಕೆ ಸಂಪೂರ್ಣವಾಗಿ ಸುರಕ್ಷಿತವಾಗಿದ್ದು, ಹುಟ್ಟಲಿರುವ ಮಗುವನ್ನು ಈ ವೈರಸ್‌ನಿಂದ ರಕ್ಷಿಸಬಹುದು. ಹಾಗಾಗಿ ಈಗಾಗಲೇ ಗರ್ಭಿಣಿಯರಿಗೆ ಲಸಿಕೆ ನೀಡುವ ಕಾರ್ಯಕ್ರಮಗಳು ಆರಂಭವಾಗಿದೆ. ಗರ್ಭಿಣಿಯರು ಲಸಿಕೆ ಪಡೆದುಕೊಳ್ಳಲು ಈಗಿನಿಂದಲೇ ತಾವಾಗಿಯೇ ಮುಂದೆ ಬಂದು ಲಸಿಕೆ ಹಾಕಿಸಿಕೊಂಡರೆ, ಮೂರನೇ ಅಲೆ ಆರಂಭವಾಗುವುದಕ್ಕೂ ಮುನ್ನ ಎಲ್ಲಾ ಗರ್ಭಿಣಿಯರಿಗೂ ಲಸಿಕೆ ನೀಡಲು ಸಹಾಯಕವಾಗುತ್ತದೆ ಎಂದು ಆರೋಗ್ಯ ಇಲಾಖೆ ಅಭಿಪ್ರಾಯಪಟ್ಟಿದೆ.

ಕೇಂದ್ರ ಸರ್ಕಾರವು 45 ವರ್ಷ ಮೇಲ್ಪಟ್ಟವರಿಗೆ 2ನೇ ಡೋಸ್ ಲಸಿಕೆ ನೀಡಲು ಹೆಚ್ಚಿನ ಆದ್ಯತೆ ನೀಡುತ್ತಿದೆ. ಆದರೆ ಈಗ 18–44 ವರ್ಷ ವಯೋಮಾನದ ವರ್ಗದಲ್ಲಿ ಕೊರೊನಾ ಲಸಿಕೆಗೆ ಬಾರಿ ಬೇಡಿಕೆ ಬಂದಿದೆ. ಹಾಗಾಗಿ ಡಿಸೆಂಬರ್ ಅಂತ್ಯಕ್ಕೆ ದೇಶದಲ್ಲಿ 18 ವರ್ಷ ಮೇಲ್ಪಟ್ಟ ಎಲ್ಲಾ 94 ಕೋಟಿ ಜನರಿಗೂ ಕೊರೊನಾ ಲಸಿಕೆ ಹಾಕುವುದು ಕೇಂದ್ರ ಸರ್ಕಾರದ ಯೋಜನೆಯಾಗಿದೆ. ಲಸಿಕೆ ಪಡೆದರೆ ಕೋವಿಡ್ ಅಪಾಯದಿಂದ ಪಾರಾದಂತೆ. ಆದ್ದರಿಂದ ಎಲ್ಲರೂ ಲಸಿಕೆ ಹಾಕಿಸಿಕೊಂಡು ಈ ರೋಗಕ್ಕೆ ತುತ್ತಾಗುವುದರಿಂದ ಪಾರಾಗಿ.


ಸೋಂಕು ತಗುಲುವ ಅಪಾಯವಿರುತಿತ್ತು. ಆದರೆ ಆ ಕುಟುಂಬದಲ್ಲಿನ ವ್ಯಕ್ತಿಯೊಬ್ಬರು ಒಂದು ಡೋಸ್ ಕೋವಿಡ್ ಲಸಿಕೆ ಪಡೆದುಕೊಂಡರೂ ಈಗ ಅದರಿಂದಾಗುವ ಪ್ರಯೋಜನ ಹೆಚ್ಚಾಗುತ್ತಿದೆ. ಅಂದರೆ ಒಬ್ಬರಲ್ಲಿ ರೋಗ ನಿರೋಧಕ ಶಕ್ತಿ ಹೆಚ್ಚಾದರೂ ಒಬ್ಬರಿಂದ ಒಬ್ಬರಿಗೆ ರೋಗ ಹರಡುವಿಕೆ ಕಡಿಮೆಯಾಗುತ್ತದೆ.

ಆರೋಗ್ಯ ಕಾರ್ಯಕರ್ತರ ಮೇಲೆ ಲಸಿಕೆಯ ಪರಿಣಾಮವನ್ನು ಅಧ್ಯಯನ ನಡೆಸಿದ ಮೇಲೆ ಲಸಿಕೆ ಪಡೆದವರ ಪೈಕಿ ಶೇ.8 ರಷ್ಟು ಮಂದಿಗೆ ಮಾತ್ರ ಆಮ್ಲಜನಕದ ಅಗತ್ಯತೆ ಉಂಟಾಗಬಹುದಾದ ಮತ್ತು ಶೇ.6 ರಷ್ಟು ಮಂದಿ ಐಸಿಯುಗೆ ದಾಖಲಾಗಬಹುದಾದ ಸಾಧ್ಯತೆ ಕಂಡು ಬಂದಿದೆ ಎಂದು ಹೇಳಿದೆ.

ಕೋವಿಡ್ ಸಾಂಕ್ರಾಮಿಕ ಸಂದರ್ಭದಲ್ಲಿ ಅತ್ಯಂತ ಅಪಾಯದ ಸ್ಥಿತಿಯಲ್ಲಿರುವುದು ಹಿರಿಯರು. ಆದರೆ ನೂತನ ವರದಿಯ ಪ್ರಕಾರ ಕೋವಿಡ್ ಲಸಿಕೆ ಹಾಕಿಸಿಕೊಂಡರೆ ಸೋಂಕು ತಗುಲಿದರೂ ಹಿರಿಯರನ್ನು ಆಸ್ಪತ್ರೆಗೆ ದಾಖಲಿಸುವ ಸಾಧ್ಯತೆ ಶೇ.94ರಷ್ಟು ಕಡಿಮೆಯಾಗಿದೆ. ಆದ್ದರಿಂದ ವ್ಯಾಕ್ಸಿನೇಷನ್ ಈ ಸಾಂಕ್ರಾಮಿಕದಿಂದ ಹೊರಬರಲು ಉತ್ತಮ ಮಾರ್ಗ ಎನ್ನುವುದು ಕೇಂದ್ರ ಆರೋಗ್ಯ ಇಲಾಖೆಯ ಅಧ್ಯಯನದಿಂದ ಮತ್ತಷ್ಟು ಬಲಪಡಿಸಿದಂತಾಗಿದೆ.

**ಎಲ್ಲೆಡೆ ಉಚಿತ ಲಸಿಕೆ:**

ಕೋವಿಡ್–19 ವಿರುದ್ಧ ಹೋರಾಟಕ್ಕೆ ಲಸಿಕಾಕರಣವೇ ಮಹಾಮದ್ದು ಎಂದು ಮನಗಂಡಿರುವ ಹಿನ್ನೆಲೆಯಲ್ಲಿ ದೇಶಾದ್ಯಂತ ಶೇ. 100ರಷ್ಟು ಲಸಿಕೆ ಪೂರೈಕೆಗೆ ತ್ವರಿತಗತಿಯಲ್ಲಿ ಕೆಲಸ ನಿರ್ವಹಿಸಲಾಗುತ್ತಿದೆ. ಇಲ್ಲಿಯವರೆಗೆ ನೀಡಲಾದ ಒಟ್ಟು ಲಸಿಕೆ ಡೋಸುಗಳಲ್ಲಿ ಶೇ.63.7 ರಷ್ಟು ಹಳ್ಳಿಗಳಲ್ಲಿ ಮತ್ತು ಶೇ.36 ರಷ್ಟು ನಗರ ಪ್ರದೇಶಗಳಲ್ಲಿ ನೀಡಲಾಗಿದೆ ಎಂದು ಕೇಂದ್ರ ಆರೋಗ್ಯ ಸಚಿವಾಲಯ ತಿಳಿಸಿದೆ.



ಕೇಂದ್ರ ಸರ್ಕಾರ ಲಸಿಕಾ ಕಂಪನಿಗಳಿಂದ ಲಸಿಕೆ ಖರೀದಿಸಿ ಎಲ್ಲಾ ರಾಜ್ಯಗಳಿಗೂ ಹಂಚಲಿದೆ. ಪ್ರತಿ ನಿತ್ಯ ಸರಾಸರಿ 1 ಕೋಟಿ ಡೋಸ್ ಲಸಿಕೆ ನೀಡಿಕೆಗೆ ಸಿದ್ಧವಾಗಿದೆ ಅದರಲ್ಲಿ ಶೇಕಡ 75ರಷ್ಟು ಪ್ರಮಾಣದ ಲಸಿಕೆಯನ್ನು ಸರಕಾರಿ ಆಸ್ಪತ್ರೆಗಳಿಗೆ ಹಾಗೂ ಶೇಕಡ 25ರಷ್ಟು ಲಸಿಕೆಯನ್ನು ಖಾಸಗಿ ಆಸ್ಪತ್ರೆಗಳಿಗೆ ನೀಡಲು ಕೇಂದ್ರ ಸರ್ಕಾರ ಮುಂದಾಗಿದೆ.

ಲಸಿಕೆಯ ಪೈಕಿ ಶೇಕಡ ಐವತ್ತನ್ನು ಕೇಂದ್ರ ಸರ್ಕಾರ ಶೇಕಡ ಐವತ್ತನ್ನು ರಾಜ್ಯ ಸರ್ಕಾರ ಖರೀದಿ ಮಾಡಬೇಕಾಗಿತ್ತು. ಇನ್ನು ಮುಂದೆ ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಗಳಿಗೆ ಲಸಿಕೆಯನ್ನು ಖರೀದಿಸಿ ನೀಡಲಿದೆ. ಆದಾಗ್ಯೂ ಅಗತ್ಯ ಎದುರಾದರೆ ರಾಜ್ಯಸರ್ಕಾರಗಳು ಔಷಧ ತಯಾರಿಕಾ ಸಂಸ್ಥೆಗಳಿಂದ ಲಸಿಕೆ ಖರೀದಿ ಮಾಡಬಹುದಾಗಿದೆ.

ಆರಂಭದಲ್ಲಿ ವ್ಯಾಕ್ಸಿನ್ ಪಡೆಯಲು ಕೊಂಚ ಹಿಂದೇಟು ಹಾಕಿದವರೂ ಈಗ ವ್ಯಾಕ್ಸಿನ್ ಪಡೆಯಲು ದೌಡಾಯಿಸುತ್ತಿದ್ದಾರೆ. ಗಂಟೆಗಟ್ಟಲೆ ನೋಂದಾವಣೆ ಮಾಡಿಸಲು ಕಾದು, ಸ್ಲಾಟ್ ಪಡೆದು ಕ್ಯೂ ನಿಂತು ವ್ಯಾಕ್ಸಿನ್ ಹಾಕಿಸಿಕೊಳ್ಳುತ್ತಿದ್ದಾರೆ.

ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ( ಪಿಎಚ್‌ಸಿ ) ಹತ್ತಿರ ಇರುವ ಉದ್ಯಾನ, ಸಮುದಾಯ ಭವನ, ಪಾಲಿಕೆಯ ವಾರ್ಡ್ ಕಚೇರಿ, ಮೈದಾನ ಸೇರಿದಂತೆ ಹೆಚ್ಚು ಸ್ಥಳಾವಕಾಶವಿರುವ ಸಾರ್ವಜನಿಕ ಸ್ಥಳಗಳನ್ನು ಗುರುತಿಸಿ ಅಲ್ಲಿಯೂ ಕೋವಿಡ್ ಲಸಿಕೆ ನೀಡಲಾಗುತ್ತಿದೆ. ಈ ಮಧ್ಯೆ, ರಾಜ್ಯದ ಪ್ರತಿ ಜಿಲ್ಲೆಯ ಹಲವಾರು ಚುನಾಯಿತ ಪ್ರತಿನಿಧಿಗಳು ತಮ್ಮ ಕ್ಷೇತ್ರಗಳಲ್ಲಿ ಲಸಿಕೆ ಅಭಿಯಾನ ನಡೆಸಲು ವಿಶೇಷ ಆಸಕ್ತಿ ವಹಿಸಿದ್ದು, 18 ರಿಂದ 44 ವರ್ಷದೊಳಗಿನ ಎಲ್ಲರಿಗೂ ಉಚಿತ ಲಸಿಕೆ ನೀಡಲು ಮುಂದಾಗಿದ್ದಾರೆ.



Download From : www.kpscvaani.com

**ಇತ್ತೀಚೆಗೆ (26 ಜುಲೈ 2021) ನಮ್ಮನ್ನು ಅಗಲಿದ ಜಯಂತಿ ಅವರು ಕನ್ನಡ ಚಿತ್ರರಂಗ ಕಂಡ ಅಪೂರ್ವ ಕಲಾವಿದೆ. ಕನ್ನಡ, ತೆಲುಗು, ತಮಿಳು, ಮಲೆಯಾಳಂ, ಹಿಂದಿ, ಮರಾಠಿ ಸೇರಿದಂತೆ ಆರು ಭಾಷೆಗಳ ಐದುನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ಅಭಿನಯಿಸಿ, ವರ್ಸಟೈಲ್ ಕಲಾವಿದೆ ಎನ್ನಿಸಿಕೊಂಡ ಅವರು ತಮ್ಮ ವಿಭಿನ್ನ ಶೈಲಿಯ ಪಾತ್ರಗಳಿಂದ ಗಮನ ಸೆಳೆದಿದ್ದರು. ಆದರೆ ಅವರನ್ನು ಭೇಟಿ ಮಾಡಿದಾಗ ಇಷ್ಟೊಂದು ಸಾಧನೆ ಮಾಡಿದ್ದಾರೆ ಅಂತ್ಲೇ ಅನ್ನಿಸುತ್ತಾ ಇರಲಿಲ್ಲ. ಅಷ್ಟೊಂದು ಸರಳವಾಗಿದ್ದ ಅವರು 'ಏನೋ ಶ್ರೀಧರ, ಎಷ್ಟು ದಿನ ಆಯಿತು ನಿನ್ನನ್ನು ನೋಡಿ' ಎಂದು ಕರೆಯುವಷ್ಟು ಸಲಿಗೆ ಇತ್ತು ನಮ್ಮಿಬ್ಬರಲ್ಲಿ. ಪ್ರತಿ ಭೇಟಿಯಲ್ಲಿಯೂ ಒಂದಲ್ಲ ಒಂದು ಹೊಸ ಚಿಂತನೆಗಳನ್ನು ನೀಡುತ್ತಾ ಇದ್ದರು. ಅವರು ನನ್ನ ಜೊತೆ ಆಡಿದ್ದ ಮಾತುಗಳ ಮೂಲಕವೇ ಅವರ ವ್ಯಕ್ತಿ ಚಿತ್ರ ನೀಡುವ ಪ್ರಯತ್ನ ಮಾಡಿದ್ದೀನಿ.**

ಎನ್.ಎಸ್.ಶ್ರೀಧರ ಮೂರ್ತಿ



# ಕನ್ನಡದ ಒಲುಮೆಯ ಹೂವು: ಜಯಂತಿ

ಜಯಂತಿಯವರ ಮೂಲ ಹೆಸರು ಕಮಲಾ ಕುಮಾರಿ. ಜನಿಸಿದ್ದು 1947ರ ಜನವರಿ 6 ರಂದು. ತಂದೆ ಬಾಲಸುಬ್ರಹ್ಮಣ್ಯಂ ಆಂಗ್ಲ ಭಾಷಾ ಉಪನ್ಯಾಸಕರು. ತಾಯಿ ಸಂತಾನಲಕ್ಷ್ಮಿ ಭರತ ನಾಟ್ಯದ ಕಡೆ ಆಸಕ್ತಿಯುಳ್ಳವರು. ಮಗಳನ್ನು ಭರತ ನಾಟ್ಯದ ಕಡೆ ತರಬೇಕು ಎನ್ನುವುದು ಅವರ ಕನಸು, ತಂದೆಗಾದರೂ ಮಗಳು ಓದಿ ವೈದ್ಯಳಾಗಬೇಕು ಎನ್ನುವ ಕನಸು. ಹೆತ್ತವರು ಬೇರೆ ಆದ ಕಾರಣ ಜಯಂತಿ ತಮ್ಮ ಬಾಲ್ಯವನ್ನು ಹೈದರಾಬಾದ್‌ನಲ್ಲಿ ತಾಯಿಯ ಜೊತೆ ಕಳೆಯ ಬೇಕಾಯಿತು. ತಾಯಿಯವರ ಅಪೇಕ್ಷೆಯಂತೆ ಭರತ ನಾಟ್ಯ ಶಾಲೆಗೆ ಸೇರಿದರು. ಆಗ ಕೊಂಚ ಸ್ಥೂಲದೇಹಿಯಾಗಿದ್ದ ಅವರನ್ನು ನೃತ್ಯಶಾಲೆಯ ವಿದ್ಯಾರ್ಥಿನಿಯರು ಅಪಹಾಸ್ಯ ಮಾಡುತ್ತಿದ್ದರು. ಇದೇ ಅವರಲ್ಲಿ ಸ್ವಾಭಿಮಾನವನ್ನು ಮೂಡಿಸಿ ಕಲಾವಿದೆಯಾಗುವಂತೆ ಮಾಡಿತು.

ಈ ವಯಸ್ಸಿನಲ್ಲಿಯೇ ಅವರು ಕುಟುಂಬ ಸಹಿತ ಹೈದರಾಬಾದ್‌ಗೆ ಹೋಗಿದ್ದಾಗ ಎನ್.ಟಿ.ರಾಮರಾವ್ ಅವರನ್ನು ಭೇಟಿ ಮಾಡಿದ್ದರು. ಆಗಿನ್ನೂ ಚಿಕ್ಕ ಬಾಲಿಕೆಯಾಗಿದ್ದ ಅವರನ್ನು ಎನ್.ಟಿ.ಆರ್ ತೊಡೆಯ ಮೇಲೆ ಕೂಳ್ಳಿರಿಸಿ ಕೊಂಡು 'ಮುಂದೆ ಏನಾಗುತ್ತಿ' ಎಂದಾಗ 'ನಿಮಗೆ ನಾಯಕಿಯಾಗಿ ಅಭಿನಯಿಸುತ್ತೇನೆ' ಎಂದು ಉತ್ತರಿಸಿದ್ದಳು. ಈ ಮಾತಿಗೆ ಅಲ್ಲಿ ನೆರೆದಿದ್ದವರೆಲ್ಲರೂ ಬಿದ್ದು ಬಿದ್ದು ನಕ್ಕಿದ್ದರು. ಆದರೆ ಕೆಲವೇ ವರ್ಷಗಳಲ್ಲಿ ಅದು ನಿಜವಾಯಿತು. 'ಜಗದೇಕವೀರುನಿ ಕಥಾ' ಚಿತ್ರದಲ್ಲಿನ ಎನ್.ಟಿ.ಆರ್ ಅವರ ನಾಲ್ವರು ನಾಯಕಿಯರಲ್ಲಿ ಒಬ್ಬರಾಗಿ ಜಯಂತಿ ಚಿತ್ರರಂಗವನ್ನು ಪ್ರವೇಶಿಸಿದರು. ಅವರ ಚಿತ್ರರಂಗದ ಆರಂಭಿಕ ದಿನಗಳಲ್ಲಿ ಆಗಿನ ಖ್ಯಾತ ನಟಿ ಸಾವಿತ್ರಿ ಜಯಂತಿಯವರಿಗೆ ಸಂಭಾಷಣೆ ಹೇಳಲು ಬರುವುದಿಲ್ಲ ಎಂದು ಕೋಪಿಸಿಕೊಂಡು ಸೆಟ್‌ನಿಂದ ಹೊರ ನಡೆದಿದ್ದರಂತೆ. ಇದನ್ನೇ ಸವಾಲ್ ಆಗಿ ಸ್ವೀಕರಿಸಿದ ಜಯಂತಿ ಅಭಿನಯದಲ್ಲಿ ತಮ್ಮನ್ನು ತಿದ್ದಿ ತೀಡಿ ಕೊಂಡು ಪರಿಪೂರ್ಣವಾಗಿ ಹೊರ ಹೊಮ್ಮಿದರು.

'ಜೇನುಗೂಡು' ಚಿತ್ರದ ಮೂಲಕ ಜಯಂತಿ ಕನ್ನಡ ಚಿತ್ರರಂಗಕ್ಕೆ ಬಂದರು. ಸಹಜಾಭಿನಯದಿಂದ ಗಮನ ಸೆಳೆದರು. ಟಿ.ವಿ.ಸಿಂಗ್ ಠಾಕೂರ್ ಅವರ 'ಚಂದವಳ್ಳಿಯ



Download From : www.kpscvaani.com



ತೋಟ' ಚಿತ್ರ ಅವರನ್ನು ಕನ್ನಡ ಚಿತ್ರರಂಗದಲ್ಲಿ ಗಟ್ಟಿಯಾಗಿ ನಿಲ್ಲಿಸಿತು. ಅವರು ರಾಜ್‌ಕುಮಾರ್ ಅವರ ಜೊತೆಗೆ ಅಭಿನಯಿಸಿದ ಮೊದಲ ಚಿತ್ರವದು. ಆಗ ಜಯಂತಿ ಇನ್ನೂ ಹೊಸ ಕಲಾವಿದೆ. ರಾಜ್‌ಕುಮಾರ್ ಆಗಲೇ ಹೆಸರು ಮಾಡಿದ್ದ ಕಲಾವಿದ. ಚಿತ್ರದ ಮೊದಲ ಶಾಟ್‌ಗೂ ಮೊದಲು ಜಯಂತಿ ಎಲ್ಲಾ ಹಿರಿಯ ಕಲಾವಿದರಿಗೆ ನಮಸ್ಕರಿಸಿದಂತೆ ರಾಜ್‌ಕುಮಾರ್ ಅವರಿಗೂ ನಮಸ್ಕರಿಸಲು ಹೋದರು. ಆದರೆ ರಾಜ್‌ಕುಮಾರ್ ಅವರು ತಡೆದು 'ನೀವು ನಿಮ್ಮ ವೃತ್ತಿಯನ್ನು ಗೌರವಿಸಿದರೆ ಸಾಕು, ಅದೇ ನನಗೆ ಮಾಡುವ ನಮಸ್ಕಾರ' ಎಂದರಂತೆ. ಈ ಚಿತ್ರದಲ್ಲಿಯೇ ಅವರಿಬ್ಬರು ಬಹಳ ಒಳ್ಳೆಯ ಸ್ನೇಹಿತರಾದರು.

ಎಲ್ಲರೂ ರಾಜ್‌ಕುಮಾರ್ ಅವರನ್ನು ಅಣ್ಣಾ ಎಂದು ಕರೆಯುತ್ತಿದ್ದರೆ, ಜಯಂತಿಯವರೊಬ್ಬರೇ 'ರಾಜ್' ಅಂತ ಕರೆಯುತ್ತಾ ಇದ್ದಿದ್ದು. ಇಬ್ಬರೂ ಜೋಡಿಯಾಗಿ ಅಭಿನಯಿಸುತ್ತಿದ್ದ 'ಪುನರ್ಜನ್ಮ' ಸಿನಿಮಾದ ಸೆಟ್‌ನಲ್ಲಿ ಲವಲವಿಕೆಯಿಂದ ಓಡಾಡುತ್ತಿದ್ದ ರಾಜ್‌ಕುಮಾರ್ ಯಾರ ಜೊತೆಗೂ ಬೆರೆಯದೆ ಮೌನವಾಗಿ ಒಂದು ಮೂಲೆಯಲ್ಲಿ ಕುಳಿತು ಬಿಟ್ಟಿದ್ದರು. ಎಲ್ಲರಿಗೂ ಅಚ್ಚರಿ, ಕೊನೆಗೆ ಜಯಂತಿಯವರು ಹೋಗಿ ವಿಷಯ ಏನು ಅಂತ ವಿಚಾರಿಸಿದಾಗ, ರಾಜ್‌ಕುಮಾರ್ ಮೆಲ್ಲನೆ 'ಈ ಸಿನಿಮಾದಲ್ಲಿ ನಿಮ್ಮ ಕ್ಯಾರೆಕ್ಟರ್ ತುಂಬಾ ಚೆನ್ನಾಗಿತ್ತು. ಆದರೆ ಅದು ಇವತ್ತು ಸತ್ತು ಹೋಗಿ ಬಿಡುತ್ತಲ್ಲ, ಆ ಬೇಸರಕ್ಕೆ ಹೀಗೆ ಕುಳಿತಿರುವೆ,' ಎಂದಾಗ ಜಯಂತಿಯವರಿಗೆ ಏನು ಹೇಳ ಬೇಕೋ ಗೊತ್ತಾಗಲಿಲ್ಲ. ಅದು ಕ್ಯಾರೆಕ್ಟರ್ ತಾನೆ? ಎಂದರೂ ರಾಜ್‌ಕುಮಾರ್ ಅದೇ ಮನಸ್ಥಿತಿಯಲ್ಲಿ ಇದ್ದರು. ಈ ಸಿನಿಮಾದಲ್ಲಿ ಜಯಂತಿಯವರ ಕ್ಯಾರೆಕ್ಟರ್ ಸತ್ತು ಹೋದ ನಂತರ 'ಒಲುಮೆಯ ಹೂವೆ, ನೀ ಹೋದೆ ಎಲ್ಲಿಗೆ?' ಹಾಡು ಬರುತ್ತದೆ. ಇದನ್ನು ಅಭಿನಯಿಸುವಾಗ ರಾಜ್‌ಕುಮಾರ್ ಶೋಕ ಸಾಗರಕ್ಕೆ ಹೋಗಿ ಬಿಟ್ಟಿದ್ದರು. ಯಾರು ಎಷ್ಟೇ ಸಮಾಧಾನ ಮಾಡಿದರೂ ಈ ಹಾಡಿನ ಚಿತ್ರೀಕರಣ ಮುಗಿದ ಬಳಿಕವೂ ಅಳುತ್ತಲೇ ಇದ್ದರು.

ಇನ್ನು ಜಯಂತಿಯವರ ಸರದಿ 'ಚಕ್ರತೀರ್ಥ' ಸಿನಿಮಾದಲ್ಲಿ ಜಯಂತಿಯವರದ್ದು ದ್ವಿಪಾತ್ರ. ಒಂದು ಪಾತ್ರದಲ್ಲಿ ಜಯಂತಿಯವರದ್ದು ರಾಜ್‌ಕುಮಾರ್ ಅವರ ಪತ್ನಿಯ ಪಾತ್ರ. ಸಿನಿಮಾದಲ್ಲಿ ಹಬ್ಬದ ಸನ್ನಿವೇಶ. ಅವತ್ತೂ ಗಂಡ ಮನೆಯಿಂದ ಹೊರಟಾಗ ಹೆಂಡತಿ 'ಏನ್ರೀ ಇಂದು ಹಬ್ಬ, ಹಬ್ಬದ ದಿನವೂ ಹೊರಗೆ ಹೋಗ ಬೇಕಾ' ಅಂತ ಕೇಳ್ತಾಳೆ. ಅದಕ್ಕೆ ಗಂಡ 'ಇಲ್ಲಮ್ಮ ಇದು ನಾನು ಹೋದ್ರೇನೆ ಆಗೋ ಕೆಲಸ, ನಾಳೆ ಹೋದ್ರೆ ಆಗಲ್ಲ, ಬೇಗ ಬಂದು ಬಿಡ್ತೀನಿ' ಎನ್ನುತ್ತಾರೆ. ಆದರೂ ಹೆಂಡತಿಗೆ ಸಮಾಧಾನವಿಲ್ಲ. 'ಏಕೋ ಮನಸ್ಸಿಗೆ ಸಮಾಧಾನವಿಲ್ಲ, ಬೇಗ ಬಂದು ಬಿಡಿ' ಅನ್ನುತ್ತಾಳೆ. ಆದರೆ ಅವಳು ಭಯ ಪಟ್ಟಂತೆಯೇ ಅಪಘಾತ ಆಗುತ್ತದೆ. ಯಾರೊ ಗಂಡನ ರಕ್ತಸಿಕ್ತವಾದ ದೇಹವನ್ನು ಮನೆಗೆ ತರುತ್ತಾರೆ. ಡೆತ್ ಬೆಡ್‌ನಲ್ಲಿದ್ದರೂ ಗಂಡ 'ಕಮಲಾ, ನೀನು ಯಾವಾಗಲೂ ಹಾಡ್ತಾ ಇದ್ದೀಯಲ್ಲ ಆ ಹಾಡನ್ನು ಒಮ್ಮೆ ಹಾಡು' ಅನ್ನುತ್ತಾರೆ. ಅವಳು ಅಳುತ್ತಾ ಅಳುತ್ತಾ ಹಾಡುತ್ತಿರುವಾಗ ಅವಳ ಕಣ್ಣನ್ನೇ ನೋಡುತ್ತಾ 'ಕಮಲಾ ಕಮಲಾ' ಅಂತ ಪ್ರಾಣ ಬಿಡುತ್ತಾರೆ. ಆಗ ಜಯಂತಿ ಕ್ಯಾರೆಕ್ಟರ್ ಗೊಳೋ ಅಂತ ಅವರ ಎದೆಯ ಮೇಲೆ ಬಿದ್ದು ಅಳ ಬೇಕು. ಶಾಟ್ ಮುಗಿದ ಮೇಲೆ ಕೂಡ ಜಯಂತಿಯವರ ಅಳು ನಿಲ್ಲಲೇ ಇಲ್ಲ. ನಿರ್ದೇಶಕರು, ಸಹ ನಟರು, ಸಹ ನಿರ್ದೇಶಕರು ಯಾರು ಬಂದು ಸಮಾಧಾನ ಹೇಳಿದರೂ ಜಯಂತಿ ಅಳುವನ್ನು ನಿಲ್ಲಿಸುತ್ತಲೇ ಇಲ್ಲ. ಕೊನೆಗೆ ರಾಜ್‌ಕುಮಾರ್ ಅವರೇ ಬಂದು 'ಪಾತ್ರದಲ್ಲಿ ಇನ್‌ವಾಲ್ವ್ ಆಗ ಬೇಕು ನಿಜ ಇಷ್ಟೊಂದಲ್ಲ' ಎಂದು ಸಮಾಧಾನ ಹೇಳಿದರು.

1964ರಲ್ಲಿ ಬಿಡುಗಡೆಯಾದ 19 ಚಿತ್ರಗಳ ಪೈಕಿ 6 ಚಿತ್ರಗಳಲ್ಲಿ ಜಯಂತಿ ಇದ್ದರು. ಇದು ಪ್ರತಿ ವರ್ಷವೂ ಏರುತ್ತಾ ಹೋಗಿ 1967ರಲ್ಲಿ ಒಂಬತ್ತು ಚಿತ್ರಗಳಿಗೆ ಬಂದರೆ 1969 ಮತ್ತು 1971ರಲ್ಲಿ ತಲಾ ಹತ್ತು ಚಿತ್ರಗಳಲ್ಲಿ ಜಯಂತಿ ಅಭಿನಯಿಸಿದರು. ಇದು ಅವರು ಹೇಗೆ ಬಹುಬೇಗ ಕನ್ನಡದ ಬೇಡಿಕೆಯ ನಟಿ ಎನ್ನಿಸಿ ಕೊಂಡರು ಎನ್ನುವುದನ್ನು ಸೂಚಿಸುತ್ತದೆ.

ಕೇವಲ ಸಂಖ್ಯೆಯಲ್ಲಿ ಏರಿಕೆ ಕಂಡಿದ್ದು ಮಾತ್ರವಲ್ಲ, ಜಯಂತಿಯವರು ಸದಾ ಸವಾಲಿನ ಪಾತ್ರಗಳನ್ನು ಆಯ್ಕೆ ಮಾಡಿ ಕೊಂಡರು.'ಬೆಟ್ಟದ ಹುಲಿ' ಚಿತ್ರದಲ್ಲಿ ಸ್ವಿಮ್ಮಿಂಗ್ ಸೂಟ್ ಹಾಕಿ ಎಲ್ಲರನ್ನೂ ಅಚ್ಚರಿಗೆ ಈಡು ಮಾಡಿದ್ದರು. ಎಂ.ಆರ್.ವಿಠಲ್ ಅವರ ನಿರ್ದೇಶನದ 'ಮಿಸ್ ಲೀಲಾವತಿ' ಬೋಲ್ಡ್ ನಾಯಕಿಯೊಬ್ಬಳನ್ನು ಕನ್ನಡ ಚಿತ್ರರಂಗಕ್ಕೆ ಪರಿಚಯ ಮಾಡಿ ಕೊಟ್ಟಿತು. ಪ್ರತಿ ಹೆಜ್ಜೆಯಲ್ಲಿಯೂ ಪುರುಷ ಪ್ರಧಾನ ವ್ಯವಸ್ಥೆಗೆ ಸವಾಲ್ ಹಾಕುವ ಈ ಚಿತ್ರದಲ್ಲಿಯೂ ಬೋಲ್ಡ್ ಎನ್ನಿಸಬಲ್ಲ ದೃಶ್ಯಗಳಿದ್ದವು. ಮೊದಲು ಈ ಪಾತ್ರಕ್ಕೆ ಸಾಹುಕಾರ್ ಜಾನಕಿ ಆಯ್ಕೆಯಾಗಿದ್ದರು. ಆದರೆ ಅವರು ಪಾತ್ರದ ಸ್ವರೂಪ ತಿಳಿದ ನಂತರ ಅಭಿನಯಿಸಲು ಹಿಂಜರಿದರು. ಈ ಸವಾಲನ್ನು ಜಯಂತಿ ಒಪ್ಪಿ ಕೊಂಡರು. ಈ ಚಿತ್ರ ಕನ್ನಡ ಚಿತ್ರರಂಗಕ್ಕೆ ದೊಡ್ಡ ಪ್ರಮಾಣದ ತಿರುವನ್ನು ನೀಡಿತು. ಎಂ.ಆರ್.ವಿಠಲ್ ಅವರ 'ಎರಡು ಮುಖ' ಚಿತ್ರದಲ್ಲಿ ಸ್ಕಿಜೋಫ್ರೇನಿಯಾ ರೋಗಿಯಾಗಿ ಎರಡು ವಿಭಿನ್ನ ವ್ಯಕ್ತಿತ್ವವನ್ನು ಪಡೆಯುವ ನಾಯಕಿಯಾಗಿ ಜಯಂತಿ ಗಮನ ಸೆಳೆದರು. ಇದೇ ಸಾಲಿನಲ್ಲಿ ಕನ್ನಡದ ಮೊದಲ ಬಾಂಡ್ ಚಿತ್ರ 'ಜೇಡರ ಬಲೆ' ಬಂದಿತು. ಸಿಂಗಲ್ ಪೀಸ್ ತೊಟ್ಟ ಬಾಂಡ್ ಗರ್ಲ್ ಪಾತ್ರಕ್ಕೆ ದೊರೈ–ಭಗವಾನ್ ಜಯಂತಿಯವರನ್ನು ಒಪ್ಪಿಸಿದರು. ಇದು ಕೂಡ ಟ್ರೆಂಡ್ ಸೆಟರ್ ಆಯಿತು. ಜಯಂತಿ ಆ ವೇಳೆಗಾಗಲೇ ತೆಲುಗು ಮತ್ತು ತಮಿಳು ಚಿತ್ರರಂಗದಲ್ಲಿ ಕೂಡ ಬಹಳ ಜನಪ್ರಿಯ ನಾಯಕಿ ಎನ್ನಿಸಿ ಕೊಂಡಿದ್ದರು.

ಇದೇ ಸಮಯದಲ್ಲಿಯೇ ಅವರಿಗೆ ಹಿಂದಿ ಚಿತ್ರರಂಗದಲ್ಲಿ ಕೂಡ ಅವಕಾಶ ಸಿಕ್ಕಿತು.1966ರಲ್ಲಿ ತೆರೆ ಕಂಡ ಕೇದಾರ್ ಕಪೂರ್ ಅವರ 'ದಾದಾ' ಅವರು ಅಭಿನಯಿಸಿದ ಮೊದಲ ಹಿಂದಿ ಚಿತ್ರ. ದಾರಾ ಸಿಂಗ್ ನಾಯಕರಾಗಿದ್ದರು. ಆದರೆ



Download From : www.kpscvaani.com

ಅಲ್ಲಿನ ವಾತಾವರಣ ಮತ್ತು ಚಿತ್ರಗಳು ಪೂರ್ತಿಯಾಗಲು ತೆಗೆದು ಕೊಳ್ಳುತ್ತಾ ಇದ್ದ ಸಮಯ ಎರಡನ್ನೂ ನೋಡಿ ಅಲ್ಲಿ ಮುಂದುವರೆಯದೆ ಇರಲು ಜಯಂತಿ ತೀರ್ಮಾನ ಮಾಡಿದರು. ಅದು ಒಂದು ರೀತಿಯಲ್ಲಿ ಕನ್ನಡಕ್ಕೆ ಆದ ಲಾಭ ಎಂದೇ ಹೇಳ ಬೇಕು.

'ಪಾತ್ರದಲ್ಲಿ ಚಿಕ್ಕದು ದೊಡ್ಡದ್ದು ಅಂತೇನು ಇಲ್ಲ, ಅದರ ಪರಿಣಾಮ ಅರಿತು ಅಭಿನಯ ಮಾಡ್ಬೇಕು ಅಷ್ಟೇ' ಎನ್ನುವುದು ಜಯಂತಿಯವರ ನಂಬಿಕೆ. ಅವರು ಅದನ್ನು ಮಾಡಿ ತೋರಿಸಿದರೂ ಕೂಡ.'ಕಸ್ತೂರಿ ನಿವಾಸ' ಚಿತ್ರದಲ್ಲಿ ನೀಡಲಾಳದ್ದು ಬಹಳ ಚಿಕ್ಕದಾದ ಪಾತ್ರ. ಆದರೆ ಜಯಂತಿ ಅದನ್ನು ಅದ್ಭುತವಾಗಿ ಅಭಿನಯಿಸಿ ಚಿತ್ರದ ಗೆಲುವಿಗೆ ತಮ್ಮ ಪಾಲನ್ನೂ ಕೂಡ ಸಲ್ಲಿಸಿದರು. ಇದರಲ್ಲಿನ ಬಂಗಲೆಯೊಳಗಿನ ಕಣ್ಣು ಮುಚ್ಚಾಲೆ ಆಟ ಮತ್ತು ತನ್ನ ಮದುವೆಯ ವಿಷಯವನ್ನು ಬಾಸ್ ಎದುರು ಪ್ರಸ್ತಾಪ ಮಾಡುವ ದೃಶ್ಯ ಜಯಂತಿಯವರಿಂದ ಮಾತ್ರ ಸಾಧ್ಯ ಎನ್ನಿಸಿ ಕೊಂಡಿತು. ಇದೇ ರೀತಿಯಲ್ಲಿ 'ನಾಗರಹಾವು' ಚಿತ್ರದಲ್ಲಿ ಒನಕೆ ಓಬವ್ವನ ಪಾತ್ರವನ್ನು ಪುಟ್ಟಣ್ಣನವರು ಮೊದಲು ಕಲ್ಪನಾ ಅವರನ್ನು ಕೇಳಿದ್ದರು. ಆದರೆ ದೊಡ್ಡ ಪಾತ್ರದ ನಿರೀಕ್ಷೆಯನ್ನು ಇಟ್ಟು ಕೊಂಡಿದ್ದ ಅವರು ನಿರಾಕರಿಸಿದರು. ಆಗ ಜಯಂತಿಯವರನ್ನು ಕೇಳಿದರು. ಜಯಂತಿ ಸಂತೋಷದಿಂದಲೇ ಈ ಪಾತ್ರವನ್ನು ಮಾಡಿದರು. ಒಂದೇ ಹಾಡಿನ ದೃಶ್ಯದಲ್ಲಿ ಬಂದರೂ ಓಬವ್ವನಾಗಿ ಜಯಂತಿ ಕನ್ನಡಿಗರ ಮನಸ್ಸಿನಲ್ಲಿ ಅಮರರಾದರು.

ಪುಟ್ಟಣ್ಣ ಅವರಿಗೆ ಮತ್ತೊಂದು ಪಾತ್ರವನ್ನು ನೀಡಿದರು. ಆದರೆ ಅದು ಯಾವ ಕಲಾವಿದೆಯೂ ಒಪ್ಪದಂತಹ 'ಎಡಕಲ್ಲು ಗುಡ್ಡದ ಮೇಲೆ' ಚಿತ್ರದ ಮಾಧವಿಯ ಪಾತ್ರ. ಜಯಂತಿಯವರೂ ಕೂಡ ಮೊದಲು ಈ ಪಾತ್ರವನ್ನು ನಿರಾಕರಿಸಿದ್ದರು. ಆದರೆ ಪುಟ್ಟಣ್ಣ ಕಣಗಾಲ್ ಅವರು ಪಾತ್ರವನ್ನು ಬದಲಾಯಿಸುತ್ತೇನೆ ಎಂದು ಭರವಸೆ ನೀಡಿದ ಮೇಲೆ ಒಪ್ಪಿಕೊಂಡರು. ಆದರೆ ಪುಟ್ಟಣ್ಣನವರು ಹೇಳಿದ್ದಂತೆ ಪಾತ್ರವನ್ನು ಬದಲಾಯಿಸಲಿಲ್ಲ. ತಂಗಿಯ ಪಾತ್ರವನ್ನೇ ಮೇಲೆತ್ತಿದರು. ಆದರೂ ಜಯಂತಿಯವರು ಸವಾಲಿನಿಂದ ತಮ್ಮ ಪಾತ್ರವನ್ನು ನಿರ್ವಹಣೆ ಮಾಡಿ ಪ್ರೇಕ್ಷಕರ ಸಹಾನುಭೂತಿ ಈ ಪಾತ್ರಕ್ಕೆ ಸಿಕ್ಕುವಂತೆ ಮಾಡಿದರು. ಈ ಪಾತ್ರ ನಿರ್ವಹಣೆಗೆ ಅವರಿಗೆ ಶ್ರೇಷ್ಠ ನಟಿ ರಾಜ್ಯ ಪ್ರಶಸ್ತಿ ಕೂಡ ದೊರಕಿತು. ಈ ಚಿತ್ರ ಜಯಂತಿ ಮತ್ತು ಪುಟ್ಟಣ್ಣನವರ ನಡುವೆ ಬಿರುಕನ್ನು ಮೂಡಿಸಿತ್ತು. ಆದರೆ ವೈಮನಸ್ಸನ್ನು ಮುಂದುವರೆಸಿ ಕೊಂಡು ಹೋಗುವ ಸ್ವಭಾವ ಜಯಂತಿಯವರದ್ದು ಅಲ್ಲವೇ ಅಲ್ಲ. ಮುಂದೆ ಇದೇ ಪುಟ್ಟಣ್ಣನವರು 'ಮಸಣದ ಹೂವು' ಚಿತ್ರಕ್ಕೆ ಜಯಂತಿಯವರನ್ನು ಆಹ್ವಾನಿಸಿದಾಗ ಸಂತೋಷದಿಂದಲೇ ಅಭಿನಯಿಸಿದ್ದರು.

'ಲಗ್ನಪತ್ರಿಕೆ'ಯ ಸೀತಾ ಪಾತ್ರದಿಂದ ಜಯಂತಿಯವರಿಗೆ ಬಜಾರಿಯ ಇಮೇಜ್ ಕೂಡ ದೊರಕಿತು.'ರೌಡಿ ರಂಗಣ್ಣ' 'ಚೂರಿ ಚಿಕ್ಕಣ್ಣ' 'ಭಲೇ ರಾಜ' 'ಪರೋಪಕಾರಿ' 'ಬಹದ್ದೂರು ಗಂಡು' ಹೀಗೆ ಅನೇಕ ಚಿತ್ರಗಳಲ್ಲಿ ಬಜಾರಿ, ಗಯ್ಯಾಳಿ ಪಾತ್ರಗಳನ್ನು ಸಲೀಸಾಗಿ ನಿರ್ವಹಿಸಿ ಜಯಂತಿ ಜನಪ್ರಿಯತೆ ಪಡೆದರು. ವಿಶೇಷವೆಂದರೆ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದರೂ ಅವರು ಯಾವ ಇಮೇಜ್‌ಗೆ ಸಿಕ್ಕಿ ಹಾಕಿಕೊಳ್ಳಲಿಲ್ಲ. ಅಷ್ಟೇ ಅಲ್ಲ ಚಿತ್ರಜೀವನದ ಆರಂಭದ ದಿನಗಳಲ್ಲಿಯೇ 'ಚಕ್ರತೀರ್ಥ' ಚಿತ್ರದಲ್ಲಿ ತಾಯಿಯ ಪಾತ್ರ ಮಾಡಿದರು. 'ತಾಯಿಗಿಂತ ದೇವರಿಲ್ಲ' ಚಿತ್ರದಲ್ಲಿ ಆಗಿನ ಜನಪ್ರಿಯ ತಾರೆ ಮಂಜುಳಾ ಅವರ ತಾಯಿಯ ಪಾತ್ರವನ್ನು ಮಾಡುವ ದಿಟ್ಟ ನಿರ್ಧಾರವನ್ನು ತೆಗೆದು ಕೊಂಡರು. ತಾಯಿಯ ಪಾತ್ರವನ್ನು ಮಾಡಿದ ನಂತರ ಕೂಡ ಅವರಿಗೆ ನಾಯಕಿಯ ಪಾತ್ರಗಳು ದೊರಕುತ್ತಲೇ ಹೋದವು.

'ಜಯಂತಿಯವರು ಬಹಳ ಮುಖ್ಯವಾಗುವುದು ಅವರು ಕೊಡುವ ಅತ್ಯಂತ ಸೂಕ್ಷ್ಮ ಭಾವನೆಗಳಿಗೆ' ಎಂದಿದ್ದರು ಹಿರಿಯ ನಿರ್ದೇಶಕ ಕೆ.ಎಸ್.ಎಲ್.ಸ್ವಾಮಿ (ರವಿ)ಯವರು. 'ಲಗ್ನಪತ್ರಿಕೆ' ಚಿತ್ರದ 'ನಿನ್ನಂದ ನಾನೆಂದು ಹಗಲಿರಳು ಹಂಬಲಿಸಿ' ಗೀತೆಯಲ್ಲಿ ಬೃಂದಾವನದ ಕಾರಂಜಿಯ ನಡುವೆ ನಲಿವ ಸನ್ನಿವೇಶದಲ್ಲಿ ಜಯಂತಿಯವರ ಅಭಿನಯವನ್ನು ಕಂಡು ಅವರು ಈ ಮಾತನ್ನು ಹೇಳಿದ್ದರು. ಕ್ಲೋಸ್ ಅಪ್ ಎನ್ನುವ ತಂತ್ರ ಮೂಡಿ ಬಂದಿದ್ದೇ ಜಯಂತಿಯವರಿಗಾಗಿ ಎಂದಿದ್ದವರು ಸಿದ್ದಲಿಂಗಯ್ಯ. ಅವರ 'ಬಾಳು ಬೆಳಗಿತು' ಚಿತ್ರದಲ್ಲಿ ಜಯಂತಿಯವರ ಇಂತಹ ಅಭಿನಯವನ್ನು ಬಳಸಿ ಕೊಳ್ಳಲೆಂದೇ 'ಕಮಲದ ಹೂವಿಂದ ಕೆನ್ನೆಯ ಮಾಡಿದನು' ಗೀತೆ ರೂಪುಗೊಂಡಿತ್ತು.

'ಜನ್ಮ ಜನ್ಮದ ಅನುಬಂಧ' ಚಿತ್ರವನ್ನು ಆರಂಭಿಸುವ ಮೊದಲು 'ಅಮ್ಮಾ ಈ ಪಾತ್ರವನ್ನು ನಿಮಗೆ ಎಂದೇ ರೂಪಿಸಿದ್ದೇನೆ, ನೀವು ಇಲ್ಲ ಎಂದರೆ ನಾನು ಚಿತ್ರ ಮಾಡುವುದೇ ಇಲ್ಲ' ಎಂದಿದ್ದರು ಶಂಕರ್ ನಾಗ್. ಜಯಂತಿ ಯಾವತ್ತೂ ಇಲ್ಲ ಎಂದಿದ್ದೇ ಇಲ್ಲ. ಈ ಚಿತ್ರದಲ್ಲಿ ಸತ್ತ ಗಂಡ ಮರುಜನ್ಮ ಎತ್ತಿ ಬಂದಾಗ ಮಗನ ವಯಸ್ಸಿನ ಗಂಡನ ಎದುರು ಆಗುವ ಸನ್ನಿವೇಶದಲ್ಲಿ ಅವರು ತೋರಿದ ಅಭಿನಯ ಅಸದಳ. ಆಗ ಶಂಕರ್ ನಾಗ್ ಹೇಳಿದ್ದರು. 'ಚಿತ್ರ ಗೆಲ್ಲದಿದ್ದರೂ ಪರವಾಗಿಲ್ಲ. ಇದೊಂದು ದೃಶ್ಯಕ್ಕೆ ಸಮನಾದ ಇನ್ನೊಂದು ದೃಶ್ಯ ಹುಟ್ಟುವುದು ಅಸಾಧ್ಯ!' ಇಂತಹ ಅಸಾಧ್ಯಗಳನ್ನು ಜಯಂತಿ ಅನೇಕ ಚಿತ್ರಗಳಲ್ಲಿ ಸಾಧ್ಯವಾಗಿಸಿದ್ದಾರೆ.


ಎಡಕಲ್ಲು ಗುಡ್ಡದ ಮೇಲೆ, ಮನಸ್ಸಿನಂತೆ ಮಾಂಗಲ್ಯ, ಧರ್ಮ ದಾರಿ ತಪ್ಪಿತು, ಮಸಣದ ಹೂವು ಹೀಗೆ ನಾಲ್ಕು ಚಿತ್ರಗಳಿಗೆ ಶ್ರೇಷ್ಠ ನಟಿ ಮತ್ತು ಆನಂದ್ ಮತ್ತು ಟುವ್ವಿ ಟುವ್ವಿ ಚಿತ್ರಗಳಿಗೆ ಶ್ರೇಷ್ಠ ಪೋಷಕ ನಟಿ ಹೀಗೆ ಆರು ರಾಜ್ಯ ಪ್ರಶಸ್ತಿಗಳನ್ನು ಪಡೆದಿರುವ ಜಯಂತಿ. ಕಲಾ ರಸಿಕರಿಂದ 'ಅಭಿನಯ ಶಾರದೆ' 'ಕಲಾಕೋಗಿಲೆ' ಎನ್ನುವ ಗೌರವಗಳನ್ನು ಪಡೆದಿದ್ದಾರೆ. 'ವಿಜಯ್' ಚಿತ್ರವನ್ನು ನಿರ್ಮಿಸಿ ನಿರ್ದೇಶಿಸಿದ ಅವರು 'ಏನ್ ಸ್ವಾಮಿ ಅಳಿಯಂದರೆ' ಚಿತ್ರವನ್ನು ನಿರ್ಮಿಸಿದ್ದಾರೆ. ರಾಜಕೀಯದಲ್ಲೂ ಆಸಕ್ತರಾದ ಅವರು ರಾಮಕೃಷ್ಣ ಹೆಗಡೆಯವರ ಲೋಕಶಕ್ತಿ ಪಕ್ಷದ ಮೂಲಕ ಲೋಕಸಭೆಗೆ ಸ್ಪರ್ಧಿಸಿ ಕೆಲವೇ ಮತಗಳಲ್ಲಿ ಸೋಲನ್ನು ಕಂಡಿದ್ದರು.

ಜಯಂತಿ ಸದಾ ಸಕ್ರಿಯರಾಗಿ ಇದ್ದವರು. ತಮ್ಮ ಅನಾರೋಗ್ಯದ ದಿನಗಳಲ್ಲಿ ಕೂಡ ಯಾರಾದರೂ ಭೇಟಿಯಾಗಲು ಬಂದರೆ ದೈಹಿಕ ಅನಾರೋಗ್ಯದ ಸೂಚನೆಯನ್ನೂ ತೋರಿಸದೆ ವಿಶ್ವಾಸದಿಂದ ಮಾತಾಡ್ತಾ ಇದ್ದರು. ಕಳೆದ ವರ್ಷ ಕೊರೊನಾ ಕಾರಣದಿಂದ ನಲವತ್ತು ದಿನ ಚಿಕಿತ್ಸೆ ಪಡೆದು ಚೇತರಿಸಿ ಕೊಂಡಿದ್ದರು. ತಾವು ಇದ್ದಲ್ಲಿ ಸದಾ ನಗುವನ್ನು ಹರಡುತ್ತಿದ್ದ ಜಯಂತಿ ಇನ್ನಿಲ್ಲ ಎನ್ನುವುದು ಭೌತಿಕ ಸತ್ಯ ಅಷ್ಟೇ. ಆದರೆ ಕನ್ನಡಿಗರ ಮನದಲ್ಲಿ ಸದಾ ಅವರು ಇದ್ದೇ ಇರುತ್ತಾರೆ. ■



Download From : www.kpscvaani.com

# ಪದಬಂಧ-22



ವಿದ್ಯಾ ಎ. ಹಾಲಭಾವಿ

**ಎಡದಿಂದ ಬಲಕ್ಕೆ**

1. ನಮ್ಮ ರಾಷ್ಟ್ರಪಕ್ಷಿ (3)
4. ಕರ್ನಾಟಕದ ಸಾಂಸ್ಕೃತಿಕ ರಾಜಧಾನಿ ಎಂದು ಪ್ರಸಿದ್ಧವಾದನಗರ (3)
6. ಉಪಾಯದಿಂದ ಹಾಕಿದ ಬುನಾದಿ! (2)
7. ಪುಟ ಅಥವಾ ಹಾಳೆ (2)
8. ಪುರದಲ್ಲಿಸಿಕ್ಕಿರುವ ಸನ್ಮಾನ! (4)
9. ನಗರದಲ್ಲಿರುವ ಮನುಷ್ಯ ಕಾಣುತ್ತಿದ್ದಾನೆಯೇ?(2)
10. ಕಾದಾಡುವಾಗ ವನ ಕಂಡೀತೇ?(2)
11. ಅತೀಘೋರವಾದ ವಿಷ (4)
12. ಜಾಗರಣೆ ಮಾಡಿದ ಸ್ಥಳ! (2)
13. ಹತ್ತಿರದಲ್ಲಿ ಕಾಣಿಸಿದ ಅರಳೆ (2)
14. ನಮ್ಮ ರಾಜ್ಯದ ಮುಖ್ಯಮಂತ್ರಿಗಳು ಈ ಕ್ಷೇತ್ರದವರು (3)
15. ಹುಲ್ಲಿನ ಮೆದೆ (3)

**ಮೇಲಿಂದ ಕೆಳಕ್ಕೆ**

2. ಗೋಳ ಗುಮ್ಮಟವಿರುವ ಊರು (5)
3. ನಾಗರೀಕರು ಹಿಡಿದಿರುವ ಗುಂಜು(2)
4. ದಂಡಿ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದ ಏಕೈಕ ಕನ್ನಡಿಗ ಈತ (7)
5. ನಟಿ ಜಯಂತಿ ನಟಿಸಿದ ಮೊದಲ ಕನ್ನಡ ಚಿತ್ರ (4)
9. ಅದೇ ತಾನೆ ಹುಟ್ಟಿದುದು (4)
10. ಸಮಯವನ್ನು ವ್ಯರ್ಥವಾಗಿ ಕಳೆಯುವುದು(5)
14. ಶಿಖರದಲ್ಲಿರುವ ತಲೆ!(2)

**ಉತ್ತರ**

**ಎಡದಿಂದ ಬಲಕ್ಕೆ**

1. ನವಿಲು 4. ಮೈಸೂರು 6. ಪಾಯ 7. ಪಾನು
8. ಪುರಸ್ಕಾರ 9. ನರ 10. ಕಾಡು 11. ಹಾಲಾಹಲ
12. ಜಾಗ 13.ಹತ್ತಿ 14.ಶಿಗ್ಗಾಂವ 15. ಬಣವೆ

**ಮೇಲಿಂದ ಕೆಳಕ್ಕೆ**

2. ವಿಜಯಪುರ 3. ನಾರು 4. ಮೈಲಾರಮಹಾದೇವ
5. ಜೇನುಗೂಡು 9. ನವಜಾತ 10. ಕಾಲಹರಣ
14. ಶಿರ

**–: ಸೂಚನೆ :–**

ಲೇಖನಗಳನ್ನು ಬರೆಯುವ ಆಸಕ್ತರು ವಾರ್ತಾ ಜನಪದಕ್ಕೆ ಲೇಖನಗಳನ್ನು ಕಳುಹಿಸಬಹುದು. ಸರ್ಕಾರದ ಯೋಜನೆಗಳು, ಅಭಿವೃದ್ಧಿಗಳು, ಪ್ರಗತಿಪರ ರೈತರ ಯಶೋಗಾಥೆ, ಜನಜಾಗೃತಿ ಮೂಡಿಸುವ ವಿಚಾರಗಳು, ಕರ್ನಾಟಕದ ಪ್ರೇಕ್ಷಣೀಯ ಸ್ಥಳಗಳು, ಕರ್ನಾಟಕದ ಇತಿಹಾಸ ಸಾರುವ ಗತ ವೈಭವಗಳು, ವಿವಿಧ ವಲಯದಲ್ಲಿ ಸಾಧನೆ ಮಾಡಿರುವ ರಾಜ್ಯದ ಸಾಧಕರ ಪರಿಚಯ ಇಂತಹ ವಿಷಯಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು.

ನುಡಿ ತಂತ್ರಾಂಶದಲ್ಲಿ ಟೈಪ್ ಮಾಡಿದ ಕನಿಷ್ಠ 500 ಪದಗಳಿಂದ 750 ಪದಗಳಿಗೆ ಮೀರದಂತೆ ಲೇಖನವನ್ನು ಪೂರಕವಾದ ಛಾಯಾಚಿತ್ರದೊಂದಿಗೆ ನಮ್ಮ ಇ–ಮೇಲ್ ವಿಳಾಸ janapada2008@gmail.comಗೆ ಕಳುಹಿಸಬಹುದು. ಲೇಖನಗಳ ಆಯ್ಕೆ ತೀರ್ಮಾನ ಅಂತಿಮವಾಗಿ ಸಂಪಾದಕ ಮಂಡಳಿಯದಾಗಿರುತ್ತದೆ. ಲೇಖನದ ಜೊತೆಗೆ ತಮ್ಮ ಹೆಸರು ವಿಳಾಸ ಮತ್ತು ದೂರವಾಣಿಯನ್ನು ನಮೂದಿಸತಕ್ಕದ್ದು.

Published by : Dr P S Harsha, IPS, Commissioner, Department of Information & Public Relation, 17, Varthasoudha, Bhagwan Mahaveer Road, Bangalore - 560 001
Printed at :M/s Lavanya Mudrana, #19, Vidyapeeta Circle, Banashankari 1st Stage, Bangalore-560050

Download From : www.kpscvaani.com



ಆಗಸ್ಟ್ 21 ರಂದು, ಮುಖ್ಯಮಂತ್ರಿ ಅವರು ಆಲಮಟ್ಟಿ ಜಲಾಶಯದಲ್ಲಿ ಕೃಷ್ಣಾ ನದಿಗೆ ಬಾಗಿನ ಅರ್ಪಿಸಿ, ವಿಶೇಷ ಪೂಜೆ ಸಲ್ಲಿಸಿದರು.
ಈ ಸಂದರ್ಭದಲ್ಲಿ ಜಲಸಂಪನ್ಮೂಲ ಸಚಿವರಾದ ಗೋವಿಂದ ಎಂ ಕಾರಜೋಳ, ಉಸ್ತುವಾರಿ ಸಚಿವೆ ಶಶಿಕಲಾ ಜೊಲ್ಲೆ,
ಕೈಗಾರಿಕೆ ಸಚಿವರಾದ ಮುರುಗೇಶ್ ನಿರಾಣಿ, ಅರಣ್ಯ ಮತ್ತು ಆಹಾರ ಸಚಿವರಾದ ಉಮೇಶ್ ಕತ್ತಿ, ಸಂಸದರಾದ ಪಿ.ಸಿ. ಗದ್ದಿಗೌಡರ ಉಪಸ್ಥಿತರಿದ್ದರು.



ಗೃಹ ಸಚಿವರಾದ ಅರಗ ಜ್ಞಾನೇಂದ್ರ ಅವರು ಆಗಸ್ಟ್ 19 ರಂದು ಗೃಹ ರಕ್ಷಕದಳ, ಪೌರರಕ್ಷಣೆ, ಅಗ್ನಿಶಾಮಕ ಮತ್ತು
ತುರ್ತು ಸೇವೆಗಳು ಹಾಗೂ ವಿಪತ್ತು ಸ್ಪಂದನಾ ಪಡೆಗಳ ನಿರ್ದೇಶನಾಲಯಕ್ಕೆ ಭೇಟಿ ನೀಡಿ ರಕ್ಷಣಾ ಸಲಕರಣೆಗಳು,
ವಾಹನಗಳ ಪರಿವೀಕ್ಷಣೆ ಮಾಡಿದರು.

Download From : www.kpscvaani.com

"VARTHA JANAPADA" Monthly - September 2021
"ವಾರ್ತಾ ಜನಪದ" ಮಾಸಿಕ – ಸೆಪ್ಟೆಂಬರ್ 2021



RNI No. KAR/KAN/2017/75029

Regd No.KA/BGGPO/2583/2021-23 Licensed to post without prepayment Licence No. PMG/BG/ WPP-365/2021-23
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26

# ॥ ಗೌರಿ–ಗಣೇಶ ಹಬ್ಬದ ಶುಭಾಶಯಗಳು ॥

ಪರಿಸರ ಸ್ನೇಹಿ ಗಣಪನನ್ನು ಪೂಜಿಸೋಣ; ಕೆರೆ–ಕಟ್ಟೆ ಹಾಗೂ ಜಲನಿಧಿಗಳನ್ನು ಸಂರಕ್ಷಿಸೋಣ



Download From : www.kpscvaani.com